
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

28 ಜೂನ್ 2017 ಪುಟ 16 ರೂ. 15/-




ಭೂಮಿ ತಾಯಿಗೆ ಮರಣದಂಡನೆ



ಪ್ಲಾಸ್ಟಿಕ್ ಭೂತ

ಟಾರ್ಗೆಟ್ ಅನ್ನಭಾಗ್ಯ!

ಗಂಗಾವತಿ



ಅನ್ಸಾರಿ
ಕಿಂಗ್ ನ್ಯೂಸ್'
ಂದಿನ ಹಕೀಕತ್ತು!


ಕಾರವಾರ

ರೂಪಾಲಿ ಮಿಂಚು ಸೈಲ್ ಸಂಚು!





ಮಂಡ್ಯ




ಪುಡಿರೌಡಿ ಫಣೀಶ್

ಫಿನಿಷ್

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ಚುನಾವಣಾ ವರ್ಷದ ಆದ್ಯತೆಗಳ

ಅಂಚಿನಿಂದ....



ಡಾ.ವಾಸು ಎಚ್.ವಿ.

ನಮ್ಮ ಸರ್ಕಾರಗಳು ಚುನಾವಣಾ ವರ್ಷದಲ್ಲಿ ಯಾವೊಂದು ಸಮುದಾಯವನ್ನೂ ಎದುರು ಹಾಕಿಕೊಳ್ಳದೇ ಎಲ್ಲರನ್ನೂ ಸಮಾಧಾನಿಸುವ ಪ್ರಯತ್ನವನ್ನು ಮಾಡುತ್ತವೆ. ನಂತರ ಚುನಾವಣೆಯಲ್ಲೂ ಸಾಕಷ್ಟು ಆಮಿಷಗಳನ್ನು ಒಡ್ಡುತ್ತವೆ. ನೀತಿಗಳಲ್ಲಿ ಇಂತಹ ಬದಲಾವಣೆ ತರುತ್ತೇವೆ; ಉದ್ಯೋಗ ಸೃಷ್ಟಿಯನ್ನು ಈ ರೀತಿ ಮಾಡುತ್ತೇವೆ; ಇದುವರೆಗೆ ಇದ್ದ ಪರಿಸ್ಥಿತಿಯಲ್ಲಿ ತರುವ ಬದಲಾವಣೆಗಳೇನು; ಹಿಂದಿನ ಸಮೀಕ್ಷೆಗಳ ಆಧಾರದ ಮೇಲೆ ಯಾವ್ಯಾವ ಕ್ಷೇತ್ರದಲ್ಲಿ ಏನೇನು ತೆಗೆಯಬೇಕು, ಏನನ್ನು ಸೇರಿಸಬೇಕು ಎಂಬಂತಹ ಅಂಶಗಳು ಅದರಲ್ಲಿ ಕಡಿಮೆ ಇರುತ್ತದೆ. ಉಚಿತವಾಗಿ ನೀಡಲಾಗುವ ವಿವಿಧ ಸರಕುಗಳು (ಕುಕ್ಕರ್, ಟಿವಿ, ಲ್ಯಾಪ್‌ಟಾಪ್ ಇತ್ಯಾದಿ) ಇನ್ನೂ ಕರ್ನಾಟಕದ ಚುನಾವಣಾ ಪ್ರಣಾಳಿಕೆಗಳನ್ನು ಪ್ರವೇಶಿಸಿಲ್ಲವಾದರೂ, ಅಂತಹ ಕೆಲವು ಅಂಶಗಳು ಬಂದಿವೆ. ಹೆಚ್ಚು ಕಡಿಮೆ ಇಂತಹ ಆಮಿಷಗಳನ್ನೇ ಮತದಾರ ಬಂಧುಗಳಿಗೆ ಚುನಾವಣಾ ವರ್ಷದಲ್ಲೂ ಒಡ್ಡಲಾಗುತ್ತದೆ.

ಜನಸಾಮಾನ್ಯರ, ಅದರಲ್ಲೂ ಇದುವರೆಗೆ ಶೋಷಣೆಗೆ ಒಳಗಾದ ಸಮೂಹದ ಬದುಕಿನಲ್ಲಿ ಮೂಲಭೂತ ಬದಲಾವಣೆ ತರುವ ಸಂಗತಿಗಳ ಕುರಿತು ಏನಾದರೂ ತೀರ್ಮಾನ ತೆಗೆದುಕೊಳ್ಳುವ ಸಾಧ್ಯತೆ ಸಾಮಾನ್ಯವಾಗಿ ಕಾಣುವುದಿಲ್ಲ. ಕರ್ನಾಟಕದಲ್ಲಿ ಇನ್ನೊಂದು ವರ್ಷಕ್ಕೆ ವಿಧಾನಸಭಾ ಚುನಾವಣೆಗಳು ಇರುವ ಹಿನ್ನೆಲೆಯಲ್ಲಿ ಮೇಲೆ ಹೇಳಲಾದ ದೃಷ್ಟಿಯಿಂದ ಸಮಕಾಲೀನ ಬೆಳವಣಿಗೆಗಳನ್ನು ಗಮನಿಸಿದರೆ ಏನು ಕಾಣುತ್ತಿದೆ?

ನೂರಾರು ವಿದ್ಯಮಾನಗಳು ಸಂಭವಿಸುತ್ತಿವೆಯಾದರೂ, ಕೆಲವು ಮುಖ್ಯ ಸಂಗತಿಗಳು ಮುಂಚೂಣಿಗೆ ಬರುತ್ತಿವೆ. ಅವುಗಳಲ್ಲಿ ರೈತರ ಸಾಲಮನ್ನಾ ವಿಚಾರ, ಭೂಮಿ ಮತ್ತು ವಸತಿ ಸಮಸ್ಯೆ ದಿನೇ ದಿನೇ ದೊಡ್ಡದಾಗುತ್ತಿರುವ ನಿರುದ್ಯೋಗದ ಸಮಸ್ಯೆ ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರದ ಕೆಲವು ಜ್ವಲಂತ ವಿಚಾರಗಳು ಇತ್ಯಾದಿಗಳು ಒಂದಷ್ಟು ಸುದ್ದಿಯಲ್ಲಿವೆ. ಇವೆಲ್ಲಾ ಅಲ್ಲದೇ ಅಷ್ಟೊಂದು ದೊಡ್ಡದು ಎಂದು ಹೆಚ್ಚಿನವರು ಭಾವಿಸಿರದೇ ಇರಬಹುದಾದ ಹೆದ್ದಾರಿಗಳ ಬಾರ್/ವೈನ್‌ಸ್ಟೋರ್‌ಗಳಿಗೆ ಸಂಬಂಧಿಸಿದ ಸಂಗತಿಯೂ ಒಂದಿದೆ.

ಹೆದ್ದಾರಿ ಬಾರ್‌ಗಳು ಮತ್ತು ವೆಚ್ಚ

ಇತ್ತೀಚೆಗೆ ಸುಪ್ರೀಂಕೋರ್ಟ್ ಒಂದು ಆದೇಶವನ್ನು ಮಾಡಿ, ಹೆದ್ದಾರಿ ಬದಿಯಲ್ಲಿರುವ ಮದ್ಯದಂಗಡಿಗಳನ್ನು ದೂರಕ್ಕೆ ಸ್ಥಳಾಂತರ ಮಾಡಬೇಕೆಂದು ಹೇಳಿತ್ತು, ಅದರಂತೆ ನಗರ ಪ್ರದೇಶಗಳಲ್ಲಿ 500 ಮೀ. ದೂರಕ್ಕೂ, ಗ್ರಾಮೀಣ ಪ್ರದೇಶಗಳಲ್ಲಿ 220 ಮೀ. ದೂರಕ್ಕೆ ಅವುಗಳನ್ನು ಸ್ಥಳಾಂತರ ಮಾಡಬೇಕೆಂದು ಅದರಲ್ಲಿ ಉಲ್ಲೇಖಿಸಲಾಗಿತ್ತು. ಇದನ್ನು ಈಗಾಗಲೇ ಜಾರಿ ಮಾಡುವ ಪ್ರಕ್ರಿಯೆ ಆರಂಭವಾಗಿದೆ. ಇದನ್ನು ತಪ್ಪಿಸಲು ಕೆಲವು ರಾಜ್ಯ ಸರ್ಕಾರಗಳು ತಮ್ಮ ರಾಜ್ಯದಲ್ಲಿನ ಹೆದ್ದಾರಿಗಳನ್ನು, ಹೆದ್ದಾರಿಗಳೇ ಅಲ್ಲ ಎಂದು ಘೋಷಿಸಿಬಿಟ್ಟವು. ಈಗಾಗಲೇ ರಾಜಸ್ಥಾನ ಮತ್ತು ಉತ್ತರ ಪ್ರದೇಶಗಳಲ್ಲಿ ಹೀಗೆ ಮಾಡಲಾಗಿದೆ ಎಂದು ಹೇಳಲಾಗುತ್ತಿದೆ.

ಇದೀಗ ಕರ್ನಾಟಕ ಸರ್ಕಾರವೂ ಅದೇ ಹಾದಿ ತುಳಿಯುತ್ತಿದೆ. ಕರ್ನಾಟಕದಲ್ಲಿ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಒಟ್ಟು 858 ಕಿ.ಮೀ.ಅನ್ನು ಡಿನೋಟಿಫೈ ಮಾಡಲು ಕೋರಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆಂದು ವರದಿಯಾಗಿದೆ. ರಾಷ್ಟ್ರೀಯ ಹೆದ್ದಾರಿಯ ನಿರ್ಮಾಣ ಮತ್ತು ನಿರ್ವಹಣೆಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮಾಡುತ್ತದೆ. ಕೇಂದ್ರ ಸರ್ಕಾರವು ಅದಕ್ಕೆ ಬೇಕಾದ ಹಣಕಾಸು ಸಂಪನ್ಮೂಲವನ್ನು ಒದಗಿಸುತ್ತದೆ. ಒಂದು ವೇಳೆ ಇವು ಡೀನೋಟಿಫೈ ಆದರೆ, ಆ ರಸ್ತೆಯನ್ನು ರಾಜ್ಯ ಸರ್ಕಾರವೇ ನಿರ್ವಹಣೆ ಮಾಡಬೇಕಾಗುತ್ತದೆ. ಸಹಜವಾಗಿ ಕಡಿಮೆ ಸಂಪನ್ಮೂಲಗಳಿರುವ ರಾಜ್ಯ ಸರ್ಕಾರವು ಅದನ್ನು ಸರಿಯಾಗಿ ಮಾಡುವುದಿಲ್ಲ.

ಅಂದರೆ, ಸೀಮಿತ ಸಂಪನ್ಮೂಲಗಳಿರುವ ರಾಜ್ಯ ಸರ್ಕಾರಗಳು, ಇದುವರೆಗೆ ಕೇಂದ್ರ ಸರ್ಕಾರ ನಿರ್ವಹಿಸುತ್ತಿದ್ದ ರಸ್ತೆಗಳನ್ನು ಹಾಳು ಮಾಡಿಕೊಂಡರೂ ಪರವಾಗಿಲ್ಲ; ಮದ್ಯದಂಗಡಿಗಳು ತೆರೆಯಬೇಕು ಎಂಬ ಧೋರಣೆಯನ್ನು ರಾಜ್ಯ ಸರ್ಕಾರಗಳು ಹೊಂದಿವೆ. ಅಂದರೆ, ಇರುವ ರಸ್ತೆಗಳನ್ನು ಹಾಳು ಮಾಡಿಕೊಳ್ಳುವುದು, ಅದಕ್ಕೆ ತನ್ನ ಬೊಕ್ಕಸದಿಂದ ಹಣ ಖರ್ಚು ಮಾಡುವುದು ಇದರ ನೇರ ಪರಿಣಾಮಗಳು.


ರೈತರ ಸಾಲಮನ್ನಾ

ಈಗಾಗಲೇ ಹೆಚ್ಚಿನವರಿಗೆ ಖಚಿತವಾಗಿರುವ ವಿಚಾರವೇನೆಂದರೆ, ಸಿದ್ದರಾಮಯ್ಯನವರು ಚುನಾವಣೆಗೆ ಹೋಗುವ ಮುಂಚೆ ರೈತರ ಸಾಲಮನ್ನಾ ಮಾಡುತ್ತಾರೆ. ಯಾವಾಗ ಅದರ ಘೋಷಣೆ ಮಾಡುತ್ತಾರೆ, ಎಷ್ಟು ಪ್ರಮಾಣದವರೆಗಿನ ಸಾಲವನ್ನು ಯಾವೆಲ್ಲಾ ಬಗೆಯ ರೈತರಿಗೆ ಮನ್ನಾ ಆಗುತ್ತದೆಂಬುದಷ್ಟೇ ಬಾಕಿ ಉಳಿದಿದೆ. ಈ ಘೋಷಣೆ ಮಾಡಲು ಅವರು 'ಸರಿಯಾದ ಸಮಯ'ವನ್ನು ಎದುರು ನೋಡುತ್ತಿದ್ದಾರೆ. ಏಕೆಂದರೆ, ಮುಂಚೆಯೇ ಮಾಡಿಬಿಟ್ಟರೆ ಚುನಾವಣೆಯವರೆಗೆ ಜನರಿಗೆ ನೆನಪಿರುವುದಿಲ್ಲ ಎಂಬುದು ಅವರ ಲೆಕ್ಕಾಚಾರ. ಇದನ್ನು ಏನೆಂದು ಕರೆಯುವುದು?

ಕರ್ನಾಟಕ, ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳ ಜನರ ತೆರಿಗೆ ಹಣದಿಂದ ನೀಡಲಾಗುತ್ತಿದೆ. ಸ್ವಲ್ಪ ಗಳಿಕೆ ಹೆಚ್ಚಿರುವ ರಾಜ್ಯಗಳಿಂದ ಕಡಿಮೆ ಗಳಿಕೆ ಇರುವ ರಾಜ್ಯಗಳಿಗೆ ಸಂಪನ್ಮೂಲ ಹರಿಯುವುದರಲ್ಲಿ ತಪ್ಪೇನಿಲ್ಲ, ಆದರೆ, ಇಡೀ ದೇಶದ ರೈತರೆಲ್ಲರ ಸಂಕಷ್ಟ ನಿವಾರಣೆಯಲ್ಲಿ ಬಾಧ್ಯಸ್ಥರಾಗಬೇಕಾದ ಸರ್ಕಾರ ಇಂತಹ ಧೋರಣೆ ತಳೆಯುವುದು ಎಷ್ಟು ಸರಿ?

ಭೂಮಿ ಮತ್ತು ವಸತಿ ಸಮಸ್ಯೆ

ಇತ್ತೀಚೆಗೆ ವಾಸಸ್ಥಳವನ್ನು ಕಾಯಂ ಮಾಡಿಕೊಡುವ ಕಾಯ್ದೆಯೊಂದನ್ನು ಸಿದ್ದರಾಮಯ್ಯನವರ ಸರ್ಕಾರವು ತಂದಿತು. ನಿಜಕ್ಕೂ ಅಭಿನಂದನೀಯವಾದ ವಿಚಾರ. ಇದನ್ನು ಐತಿಹಾಸಿಕ ಎಂದು ಬಣ್ಣಿಸಲಾಯಿತು. ಅದೂ ನಿಜವಿರಬಹುದು. ಆದರೆ, ಭೂಮಿ ಮತ್ತು ವಸತಿ ಸಮಸ್ಯೆಯನ್ನು ಸಮಗ್ರವಾಗಿ ಬಗೆಹರಿಸಲು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಎಚ್.ಎಸ್.ದೊರೆಸ್ವಾಮಿಯವರ ನೇತೃತ್ವದ ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿಯು ಮುಂದಿಡುತ್ತಿರುವ ವಿಚಾರವನ್ನು ಸರ್ಕಾರವು ಕಣ್ಣೆತ್ತಿಯೂ ನೋಡುತ್ತಿಲ್ಲ, ಅಧಿವೇಶನದ ಸಂದರ್ಭದಲ್ಲಿ ನಡೆಯುವ ಹೋರಾಟದ ಕಾರಣದಿಂದ ಒತ್ತಡ ನಿರ್ಮಾಣವಾಗಿ, ಪರಿಶೀಲಿಸುವ ಅಥವಾ ಜಾರಿ



ರಾಜ್ಯದಲ್ಲಿ ಈಗಲೂ ಒಂದಲ್ಲಾ ಒಂದು ಕಡೆ ರೈತರ ಆತ್ಮಹತ್ಯೆಗಳು ನಡೆಯುತ್ತಲೇ ಇವೆ. ಸಾಲಮನ್ನಾ ಎಂಬುದು ಕೃಷಿ ಬಿಕ್ಕಟ್ಟನ್ನು ಬಗೆಹರಿಸಲು ಇರುವ ಮಂತ್ರದಂಡವೇನೂ ಅಲ್ಲ, ಸಂಪೂರ್ಣ ಸಾಂಸ್ಥಿಕ (ಬ್ಯಾಂಕು ಮತ್ತು ಸಹಕಾರೀ ಸಂಸ್ಥೆಗಳ) ಸಾಲಮನ್ನಾ ಮಾಡಿದರೂ, ಆತ್ಮಹತ್ಯೆ ಸಂಪೂರ್ಣ ನಿಲ್ಲುವುದಿಲ್ಲ, ಆದರೆ, ರೈತರ ಸಂಕಷ್ಟದಲ್ಲಿ - ಅದರಲ್ಲೂ ಸತತವಾದ ಭೀಕರ ಬರ ಎದುರಿಸಿರುವ ಸಂದರ್ಭದಲ್ಲಿ - ನಾವು ಜೊತೆಯಾಗಿ ನಿಲ್ಲುತ್ತೇವೆ ಎಂಬ ಭರವಸೆ ಮೂಡಿಸುವ ಒಂದು ಸಂದೇಶ ಅದರಿಂದ ರವಾನೆಯಾಗುತ್ತದೆ ಮತ್ತು ಒಂದಷ್ಟು ರೈತರಿಗೆ ನಿಜಕ್ಕೂ ಅನುಕೂಲವೂ ಆಗುತ್ತದೆ.

ಆದರೆ ಅದನ್ನು ಈಗಲೇ ಮಾಡಲು ರಾಜ್ಯ ಸರ್ಕಾರ ಸಿದ್ಧವಿಲ್ಲ; ಬದಲಿಗೆ ರಾಜಕೀಯ ಅನುಕೂಲ ನೋಡಿಕೊಂಡು ಮಾಡಲು ಕಾಯುತ್ತಿದೆ. ಇನ್ನು ಬಿಜೆಪಿಯೇನೂ ಸಾಚಾ ಇಲ್ಲ, ಅದು ಬಹಳ ಮೋಸದಾಟ ಆಡುತ್ತಿದೆ. ಉತ್ತರ ಪ್ರದೇಶದಲ್ಲಿ ಚುನಾವಣಾ ಭರವಸೆ ನೀಡಿದ್ದರು; ಹಾಗಾಗಿ ಸಾಲಮನ್ನಾ ಮಾಡಿದ್ದಾರೆ. ಉಳಿದೆಡೆ, ಸದ್ಯಕ್ಕೆ ಚುನಾವಣೆಯೂ ಇಲ್ಲ, ಚುನಾವಣೆಯಲ್ಲಿ ಭರವಸೆಯನ್ನೂ ಕೊಟ್ಟಿರಲಿಲ್ಲ, ಹಾಗಾಗಿ ರೈತರು ಸತ್ತರೆ ಸಾಯಲಿ ಎಂಬುದು ಅವರ ಧೋರಣೆ. ಬಿಜೆಪಿಯ ಸಚಿವನೊಬ್ಬ ಅದನ್ನು ಆಡಿಯೂ ತೋರಿಸಿದ್ದಾನೆ.

ಇದರ ಜೊತೆಗೆ ಅವರ ಇನ್ನೊಂದು ಆಟ, ಕೇಂದ್ರ ಸರ್ಕಾರದಿಂದ ನಾವು ಯಾವ ರಾಜ್ಯದ ಸಾಲಮನ್ನಾಕ್ಕೂ ನೆರವು ನೀಡುವುದಿಲ್ಲ, ಇದು ಅವರಿಗೇ ಬಿಟ್ಟದ್ದು ಎಂದು. ಈಗಾಗಲೇ ಬ್ಲೂಂಬರ್ಗ್-ಕ್ವಿಂಟ್‌ನ ವಿಡಿಯೋ ತೋರಿಸಿರುವಂತೆ ಉತ್ತರ ಪ್ರದೇಶದ ರೈತರ ಸಾಲಮನ್ನಾಕ್ಕೆ ಕೇಂದ್ರದ ನೆರವು ಇದೆ ಮಾತ್ರವಲ್ಲ, ಅದಕ್ಕೆ ಬೇಕಿರುವ ಹಣಕಾಸು ಸಂಪನ್ಮೂಲ (ಪರೋಕ್ಷವಾಗಿ) ತಮಿಳುನಾಡು,

ಮಾಡುವ ಭರವಸೆ ನೀಡುತ್ತಾರಾದರೂ ನಂತರ ಒಂದು ಸಭೆಯನ್ನೂ ಕರೆಯುವುದಿಲ್ಲ.

ಈ ರಾಜ್ಯದ ವಿರೋಧ ಪಕ್ಷಗಳಿಗೆ ಇಂತಹ ಸಂಗತಿಗಳನ್ನು ವಿವಾದದ ವಿಚಾರ ಮಾಡುವ ಆಸಕ್ತಿಯೂ ಇಲ್ಲ. ಪಟ್ಟು ಹಿಡಿದು ಇದು ಜಾರಿಯಾಗಲಿ ಎಂದು ಹೇಳುವ ಜನಪರ ಕಾಳಜಿಯೂ ಇಲ್ಲ, ಹಾಗಾಗಿ ಅವರ ಗಮನಕ್ಕೆ ಈ ವಿಚಾರ ಬರಬೇಕೆಂದರೆ, ಅಧಿವೇಶನದ ಸಮಯದಲ್ಲೇ 'ಗಮನ ಸೆಳೆಯುವ' ಪ್ರತಿಭಟನೆ ನಡೆಯಬೇಕು.

ನಿಜಕ್ಕೂ ಸಿದ್ದರಾಮಯ್ಯನವರು ದೇವರಾಜ ಅರಸರಿಗಿಂತ ಒಂದು ಹೆಜ್ಜೆ ಮುಂದಕ್ಕೆ ಹೋಗಬೇಕೆಂದು ಬಯಸಿರುವುದೇ ಆದಲ್ಲಿ, ಸದರಿ ಸಮಿತಿಯು ಮುಂದಿಟ್ಟಿರುವ ಹಕ್ಕೊತ್ತಾಯವನ್ನು ಒಪ್ಪಿ ಜಾರಿ ಮಾಡಬೇಕು. ಅವರು ಯಾವ ಶೋಷಿತ ಸಮುದಾಯಗಳ ಪರವಾಗಿ ತಾನಿದ್ದೇನೆಂದು ಹೇಳಿಕೊಳ್ಳುತ್ತಾರೋ, ಅದು ನಿಜವೆಂದು ಸಾಬೀತಾಗುತ್ತದೆ.

ಶಿಕ್ಷಣ ಕ್ಷೇತ್ರ

ಇಡೀ ನಾಲ್ಕು ವರ್ಷದಲ್ಲಿ ಸರ್ಕಾರಿ ಶಾಲೆಗಳ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಒಂದಿಂಚೂ ಮುಂದಕ್ಕೆ ಹೋಗಲಿಲ್ಲ, ಈ ಕ್ಷೇತ್ರದ ಅಸಲೀ ಸಮಸ್ಯೆಗಳನ್ನು ಎಂಎಲ್‌ಎಗಳಿರಲಿ, ಸರ್ಕಾರೀ ಶಿಕ್ಷಕರ ಓಟು ಪಡೆದುಕೊಂಡು ಗೆದ್ದ ಎಂಎಲ್‌ಸಿಗಳೂ ಸಹ ಒಂದು ಸಾರಿಯೂ ಸರ್ಕಾರದ ಮುಂದಿಡಲಿಲ್ಲ, ಶಿಕ್ಷಕರ ನೇಮಕಾತಿ, ಕಂಪ್ಯೂಟರ್ ಕಲಿಕೆ, ಶಿಕ್ಷಕರ ಪಠ್ಯೇತರ ಹೊರೆ ಕಡಿಮೆ ಮಾಡುವುದು, ಇಂಗ್ಲಿಷ್ ಕಲಿಕೆಯಂತಹ ಯಾವೊಂದರಲ್ಲೂ ವಿಶೇಷವಾದ ಸಾಧನೆ ಆಗಲಿಲ್ಲ,

ಅವೆಲ್ಲ ಇರಲಿ, ಶಾಲೆಗಳ ಹಿರಿಯ ವಿದ್ಯಾರ್ಥಿಗಳು, ಪೋಷಕರು ಸೇರಿ ಸರ್ಕಾರೀ ಶಾಲೆಯನ್ನು ಅಭಿವೃದ್ಧಿಪಡಿಸಲು ಹೊರಟರೆ ... ವಿಶೇಷ ನೆರವನ್ನೂ ಸಹ ಇಲಾಖೆಯು ನೀಡದ... ಸಮಾನ ಶಿಕ್ಷಣದ ಹೋರಾಟಗಾರರು ಮುಂದಿ... ಅಭಿವೃದ್ಧಿಪಡಿಸಿದ ಮಕ್ಕಳ ಮನೆ ಎಂಬ ಪ್ರಾಥಮಿಕಪೂರ್ವ ತರಗತಿಗಳಿಗೆ ತೊಂದರೆ ... ಕೆಲಸವನ್ನು ಇಲಾಖೆ ಮಾಡಿತು. ಪ್ರವಾಹದ ... ಈಜುತ್ತಾ ನೂರೆಂಟು ಸಮಸ್ಯೆಗಳನ್ನು ತಾವೇ ಬಗೆಹರಿಸಿಕೊಳ್ಳುತ್ತಾ ಶಾಲೆಯನ್ನು ಅಭಿವೃದ್ಧಿ... ಹೊರಟಾಗ, ಮುಖ್ಯ ಶಿಕ್ಷಕರಿಗೆ ಇಲಾಖೆಯ ಅಧಿಕಾರಿಗಳು ನೋಟಿಸ್ ಕೊಟ್ಟು ಹೆದರಿಸಿದ... ಆರ್ಥಿಕ ಅನುದಾನ ನೀಡುವುದಿರಲಿ, ಮಕ್ಕಳ ಕಾನೂನಿನ ರಕ್ಷಣೆ ಹಾಗೂ ಮಾನ್ಯತೆ ಕೊಡುವ... ಬೇಡಿಕೆಗೂ ಈ ಸರ್ಕಾರವು ಸ್ಪಂದಿಸಲಿಲ್ಲ, ಕಡೆ... ವರ್ಷದಲ್ಲಾದರೂ ಇದನ್ನು ಮಾಡಿಯಾರೇ?

ಆರೋಗ್ಯ ಕ್ಷೇತ್ರ

ಈ ಲೇಖನ ಬರೆಯುತ್ತಿರುವ ಹೊತ್ತಿಗೆ ವಿಧಾನಸಭೆಯಲ್ಲಿ ಆರೋಗ್ಯ ಇಲಾಖೆಗೆ ಸಂಬ... ಕಾಯ್ದೆಗೆ ಹೊಸ ತಿದ್ದುಪಡಿಗಳ ಮಂಡನೆಯಾಗಿ... ಖಾಸಗಿ ಆಸ್ಪತ್ರೆಗಳನ್ನು ಸ್ವಲ್ಪವಾದರೂ ನಿಯಂತ್ರಣದಲ್ಲಿಟ್ಟುಕೊಳ್ಳುವ ಮತ್ತು ಅವರ ಅನಿರ್ಬಂಧಿತ ಲೂಟಿಗೆ ಕಡಿವಾಣ ಹಾಕುವ ಸರ್ಕಾರಕ್ಕಿದೆ. ಮೇಲೆ ಹೇಳಲಾದ ಕ್ರಮಗಳು ಭೂಮಿ ಮತ್ತು ವಸತಿ ಹಕ್ಕಿಗೆ ಸಂಬಂಧಿಸಿದ ನಿರ್ಣಾಯಕ ಕ್ರಮಗಳು, ಸರ್ಕಾರೀ ಶಾಲೆಗಳ ಇವೆಲ್ಲವೂ - ಹೇಗೆ ಸರ್ಕಾರದ ನೀತಿಗಳ ದಿ... ಒಂದು ತಿರುವು ಆಗುವ ಸಾಧ್ಯತೆ ಹೊಂದಿದೆ... ಈ ತಿದ್ದುಪಡಿಗೂ ಅಂತಹುದೇ ಸಾಧ್ಯತೆ ಇದೆ...

ಸರ್ಕಾರೀ ವೈದ್ಯಕೀಯ ವ್ಯವಸ್ಥೆಯನ್ನು ಸರಿ... ಮಾಡಿಕೊಳ್ಳಿ, ಖಾಸಗಿಯವರನ್ನು ಅವರ ಪಾಡಿ... ಅವರನ್ನು ಬಿಡಿ ಎಂಬ ಒಂದು ವಾದವಿದೆ. ಎಲ್ಲಿಯವರೆಗೆ ಖಾಸಗಿ ಕ್ಷೇತ್ರ ಬಲವಾಗುತ್ತಾ ಹೋಗುತ್ತಿರುತ್ತದೋ, ಅಲ್ಲಿಯವರೆಗೆ ಸರ್ಕಾರಿ... ಸಂಪೂರ್ಣ ಸರಿ ಹೋಗುವುದು ಕಷ್ಟ. ಖಾಸ... ತಿಂಗಳಿಗೆ 4-5 ಲಕ್ಷ ಸಂಪಾದನೆ ಮಾಡುತ್ತಿರು... ವೈದ್ಯರುಗಳು 1 ಲಕ್ಷ ರೂ. ಸಂಬಳ ನೀಡಿದ... ಸರ್ಕಾರೀ ಆಸ್ಪತ್ರೆಯಲ್ಲಿ ಬಂದು ದುಡಿಯುವು... ಸಾಧ್ಯವೇ ಇಲ್ಲ, ಖಾಸಗಿ ಸಂಪಾದನೆ (ಎಲ್ಲರೂ... ಬಹುತೇಕರು) ಸಂಪಾದನೆಯಾಗಿ ಉಳಿದೇ ಇ... ಅದು ಲೂಟಿಯ ರೀತಿಯಲ್ಲಿ ನಡೆಯುತ್ತಿದೆ. ದುರಂತವೆಂದರೆ, ನಿಜಕ್ಕೂ ಹಲವು ವಿಷಯಗ... ಸಂಬಂಧಿಸಿದಂತೆ ಪ್ರಗತಿಪರ ಆಲೋಚನೆ ಇರು... ಕೆಲವು ವೈದ್ಯರು ಈ ತಿದ್ದುಪಡಿಯನ್ನು ವಿರೋಧಿಸುತ್ತಿದ್ದಾರೆ.

ಈಗಾಗಲೇ ಸರ್ಕಾರದ ಕೆಲವು ವಿಭಾಗಗ... ಇದಕ್ಕೆ ವಿರೋಧ ಶುರುವಾಗಿದೆ. ಈ ಸರ್ಕಾರ... ಅದನ್ನು ಎದುರಿಸಿ ನಿಂತು ಈ ಕಾಯ್ದೆಗೆ ಅನುಮೋದನೆ ಪಡೆದುಕೊಳ್ಳುತ್ತದೆಯಾ, ಹಾಗ... ಸರ್ಕಾರೀ ಆರೋಗ್ಯ ವ್ಯವಸ್ಥೆಗೆ ಕಾಯಕಲ್ಪ ಕಲ್ಪಿಸುತ್ತದೆಯಾ ನೋಡಬೇಕು.

ಎಲ್ಲಕ್ಕಿಂತ ದೊಡ್ಡ ಮತ್ತು ಅಸ... ಸಮಸ್ಯೆ ನಿರುದ್ಯೋಗದ್ದು

ಇಂದು ದೇಶದ ಎಲ್ಲ ಮೂಲೆಗಳನ್ನೂ ಆವರಿಸುತ್ತಿರುವ ನಿರುದ್ಯೋಗದ ಹೆಚ್ಚಳವು ಬ... ಗಂಭೀರ ಸಮಸ್ಯೆ. ಇದು ಕೇವಲ ಈ ಸಂದರ್ಭ... ಸಮಸ್ಯೆಯಲ್ಲ. ಯಾವುದೇ ದೇಶವನ್ನು ಕೇವಲ ... ತಾತ್ಕಾಲಿಕ ಕಲ್ಯಾಣ ಕಾರ್ಯಕ್ರಮಗಳಿಂದ ನಿಜ... ರೀತಿಯಲ್ಲಿ ಅಭಿವೃದ್ಧಿ ಪಡಿಸುವುದಕ್ಕಾಗುವುದಿಲ... ದುಡಿವ ಜನರಿಗೆ ಭದ್ರತೆಯುಳ್ಳ ಮತ್ತು ಘನತ... ಬದುಕಲು ಬೇಕಾದಷ್ಟು ಸಂಪಾದನೆ ಖಾತರಿ ಮಾಡುವ ಉದ್ಯೋಗ ಇರಬೇಕು. ಅಂತಹ ಉದ್ಯೋಗ ಸೃಷ್ಟಿಗೆ ಬೇಕಾದ ಕ್ರಮ ತೆಗೆದುಕೊಳ್ಳುವುದು ಸರ್ಕಾರದ ಕರ್ತವ್ಯ. ಇದ... ಮಾಡುವಲ್ಲಿ ನರೇಂದ್ರ ಮೋದಿ ನೇತೃತ್ವದ ಕೇ... ಸರ್ಕಾರವು ಸಂಪೂರ್ಣ ವಿಫಲವಾಗಿದೆ. ರಾಜ್ಯ... ಸರ್ಕಾರವು ತನ್ನ ವ್ಯಾಪ್ತಿಯಲ್ಲಿ ಮಾಡಬಹುದಷ್ಟನ್ನಾದರೂ ಮಾಡಬೇಕು.

ಇವೆಲ್ಲವೂ ಚುನಾವಣಾ ವರ್ಷದಲ್ಲಿ ಅಧಿಕಾರದಲ್ಲಿರುವ ಸರ್ಕಾರಕ್ಕೆ ಇರುವ ಪರೀಕ್ಷೆ... ಈ ಪರೀಕ್ಷೆಯಲ್ಲಿ ಸರ್ಕಾರ ಪಾಸಾಗಲಿ ಎಂದೇ... ಹಾರೈಸೋಣ.

ಅರುಂಧತಿ ರಾಯ್ ಅವರ ಅದ್ಭುತ ಕಾದಂಬರಿ

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಈಗ ಎಲ್ಲೆಡೆ ಚರ್ಚಾವಸ್ತುವಾಗಿರುವ ಅರುಂಧತಿ ರಾಯ್‌ರ 'ದಿ ಮಿನಿಸ್ಟ್ರಿ ಆಫ್ ಅಟ್‌ಮೋಸ್ಟ್ ಹ್ಯಾಪಿನೆಸ್' ಎಂಬ ಹೊಸ ಕಾದಂಬರಿಯನ್ನು ಕಳೆದ ವಾರ ಓದಿದೆ. ಅರುಂಧತಿ ಅವರನ್ನು ಹಲವಾರು ಕಾರಣಗಳಿಗೆ ದ್ವೇಷಿಸುವ ಬಲಪಂಥೀಯರು "ಇದು ಕಾದಂಬರಿಯಲ್ಲ, ಬದಲಾಗಿ ಒಂದು ಕರಪತ್ರ" ಎಂದು ಟೀಕಿಸಿದ್ದಾರೆ. ಆದರೆ ಅವರ ಅಭಿಮಾನಿಗಳು "ಇದು ಭಾರತದ ಪ್ರಸ್ತುತ ಸ್ಥಿತಿಗತಿಗೆ ಕನ್ನಡಿ ಹಿಡಿದಿರುವ ಕಾದಂಬರಿ" ಎಂದು ಪ್ರಶಂಸಿಸಿದ್ದಾರೆ.

445 ಪುಟಗಳಷ್ಟು ಸುದೀರ್ಘವಾಗಿರುವ ಈ ಕಾದಂಬರಿಯಲ್ಲಿ ಅರುಂಧತಿ ಅವರ ವಿಶಿಷ್ಟ ಬರಹ ಶೈಲಿ ಪ್ರತಿ ಪುಟದಲ್ಲೂ ಎದ್ದು ಕಾಣುತ್ತದೆ. ಇಪ್ಪತ್ತು ವರ್ಷಗಳ ಹಿಂದೆ ಅವರು ಬರೆದ ಮೊದಲ ಕಾದಂಬರಿ 'ದಿ ಗಾಡ್ ಆಫ್ ಸ್ಮಾಲ್ ಥಿಂಗ್ಸ್' ಓದಿದಾಗ ಇಂಗ್ಲಿಷ್ ಭಾಷೆಯನ್ನು ಹೀಗೂ ಬರೆಯಬಹುದಾ ಎಂದು ನನಗೆ ಅಚ್ಚರಿ ಆಗಿತ್ತು. ಆನಂತರ ಅವರು ಬರೆದಿರುವ ಹಲವು ಲೇಖನಗಳನ್ನು ಈ ಹಿಂದೆ ಓದಿದ್ದರೂ, ಅವರ ಶೈಲಿ ಈಗಲೂ ಮೆಚ್ಚುಗೆಯಾಗುತ್ತದೆ.

ಹೊಸ ಕಾದಂಬರಿಯಲ್ಲಿ ಬರೋಬ್ಬರಿ ಐವತ್ತು ಪಾತ್ರಗಳಿದ್ದರೂ ಅವುಗಳಲ್ಲಿ ಪ್ರಮುಖವಾದದ್ದು ಅಂಜುಮ್ ಎಂಬ ಹಿಜಡಾ ಮತ್ತು ತಿಲೋತ್ತಮ ಎಂಬ ವಾಸ್ತುಶಿಲ್ಪಿ, ಸ್ವತಂತ್ರ ಭಾರತದ 70 ವರ್ಷಗಳ ಪ್ರಮುಖ ಆಗುಹೋಗುಗಳನ್ನು ಹಿಡಿದಿಡುವ ಕಾದಂಬರಿಯ ಇನ್ನೊಂದು ಮುಖ್ಯ ಪಾತ್ರಧಾರಿ ರಾಜಧಾನಿ ದೆಹಲಿ ಮತ್ತು ಈಗ ಎಲ್ಲಾ ಪ್ರತಿಭಟನೆಗಳ ಕೇಂದ್ರಬಿಂದುವಾಗಿರುವ ಜಂತರ್‌ಮಂತರ್. ಗಂಡೂ ಅಲ್ಲದ, ಹೆಣ್ಣೂ ಅಲ್ಲದ ಅಂಜುಮ್ ಹುಟ್ಟಿದಾಗ ಆತ ಹುಡುಗ ಎಂಬ ಭ್ರಮೆಯಲ್ಲಿ ಅಫ್ತಾಬ್ ಎಂದು ನಾಮಕರಣ ಮಾಡಲಾಗುತ್ತದೆ. ಆದರೆ ಅಫ್ತಾಬ್ ಬೆಳೆದಂತೆ ತಾನು ಗಂಡಲ್ಲ ಎಂಬುದು ಆತನಿಗೆ ಅರಿವಾಗುತ್ತದೆ. ಒಂದು ದಿನ ಆತ ಹಿಜಡಾ ಒಬ್ಬಳನ್ನು ಹಿಂಬಾಲಿಸಿ ಆಕೆ ಮತ್ತು ಆಕೆಯಂಥವರು ವಾಸಿಸುವ ಮನೆಯನ್ನು ಸೇರಿಕೊಳ್ಳುತ್ತಾನೆ. ಆ ಮನೆಯ ಹೆಸರು ಕ್ವಾಬ್ಗಾ - ಕನಸುಗಳ ಮನೆ. ಅಲ್ಲಿ ಅಫ್ತಾಬ್ ಅಂಜುಮ್ ಆಗಿ ಪರಿವರ್ತನೆಗೊಳ್ಳುತ್ತಾಳೆ. ಆದರೆ ಕಾದಂಬರಿ ಶುರುವಾಗುವುದು ಅಂಜುಮ್ ಒಂದು ಸ್ಮಶಾನದ ನಿವಾಸಿಯಾಗಿ. ಆಕೆ ಅಲ್ಲಿಗೆ ಯಾಕೆ ಬಂದಳು, ಅಲ್ಲಿ ಹೇಗೆ ಜೀವ ಕಟ್ಟಿಕೊಂಡಳು, ಅವಳ ಸಂಗಾತಿಗಳು ಯಾರು, ಅವರೆಲ್ಲ ಯಾಕೆ ಅಲ್ಲಿಗೆ ಬಂದರು ಎಂಬುದನ್ನೆಲ್ಲ ಕಾದಂಬರಿ ಬಿಚ್ಚಿಡುತ್ತಾ ಸಾಗುತ್ತದೆ.

ಅಂಜುಮ್ ಸ್ಮಶಾನದಲ್ಲಿ ವಾಸಿಸಲು ಬಂದಾಗ ಆಕೆಯನ್ನು ಭೇಟಿ ಆಗುವ ಯುವಕ ತನ್ನ ಹೆಸರು ಸದ್ದಾಂ ಹುಸೇನ್ ಎನ್ನುತ್ತಾನೆ. ಅದು ಅವನ ನಿಜವಾದ ಹೆಸರು ಅಲ್ಲ ಎಂಬುದು ಅಂಜುಮ್‌ಗೆ ಗೊತ್ತು. ಅಮೆರಿಕ ಸರ್ಕಾರ ಇರಾಕಿನ ಸದ್ದಾಂ ಹುಸೇನ್‌ನನ್ನು ಗಲ್ಲಿಗೇರಿಸಿದಾಗ ಸದ್ದಾಂ ತೋರಿದ ನಿರ್ಲಿಪ್ತತೆಯನ್ನು ಮೆಚ್ಚಿ ಆತನ ಹೆಸರನ್ನು ಈ ಯುವಕ ತನ್ನದಾಗಿರಿಸಿಕೊಂಡಿರುತ್ತಾನೆ. ವಾಸ್ತವವಾಗಿ ಆತನ ನಿಜ ಹೆಸರು ದಯಾಚಂದ್. ಹರಿಯಾಣ ರಾಜ್ಯದ ಆತ ಚಮ್ಮಾರ್ ಜಾತಿಯವನು. ಅವನು ಚಿಕ್ಕ ಹುಡುಗ ಆಗಿದ್ದಾಗ ಒಮ್ಮೆ ಸತ್ತ ದನದ ಶವ ತೆಗೆದುಕೊಂಡು ಹೋಗುವಂತೆ ಅವನ ತಂದೆಯನ್ನು ಕರೆಯುತ್ತಾರೆ. ತನ್ನ ಮೂವರು ಮಿತ್ರರು ಮತ್ತು ಮಗನ ಜೊತೆ ತಂದೆ ಹೊರಡುತ್ತಾರೆ. ಅವರು ದನದ ಶವ ಪಡೆದು ವಾಪಸ್ ಹೋಗುವಾಗ ಪೊಲೀಸರು ಹಫ್ತಾ ವಸೂಲಿಗೆಂದು ಅವರನ್ನು ಠಾಣೆಗೆ ಕರೆದುಕೊಂಡು ಹೋಗುತ್ತಾರೆ. ಅವತ್ತೇ ರಾಮಲೀಲಾ ಹಬ್ಬ ಇರುವುದರಿಂದ ಹತ್ತಿರವೇ ದೊಡ್ಡ ಸಂಖ್ಯೆಯಲ್ಲಿ ಜನ ಸೇರಿರುತ್ತಾರೆ. ಯಾರೋ ದನದ ಶವ ಸಾಗಿಸುತ್ತಿದ್ದರೆಂಬ ಮಾಹಿತಿ ಜನರಿಗೆ ರವಾನೆಯಾಗುತ್ತದೆ. ಠಾಣೆಯನ್ನು ಸುತ್ತುವರಿದ ಜನ ದಯಾಚಂದನ ತಂದೆ ಮತ್ತು ಅವರ ಮಿತ್ರರನ್ನು ಕೊಂದು ಹಾಕುತ್ತಾರೆ. ಬಾಲಕನಾದ ದಯಾಚಂದ್ ಜನಸ್ತೋಮದಲ್ಲಿ ಪರಾರಿ ಆಗುತ್ತಾನೆ. (2002ರಲ್ಲಿ ಹರಿಯಾಣದ ಜಜ್ಜರ್‌ನಲ್ಲಿ ಐವರು ದಲಿತರನ್ನು ಹೀಗೆ ಕೊಲ್ಲಲಾಗಿತ್ತು)


ಅಂಜುಮ್ ಒಮ್ಮೆ ಅಜಮೇರ್ ದರ್ಗಾಕ್ಕೆ ಹೋಗಲು ಹೊರಟಿರುತ್ತಾಳೆ. ಆಕೆಯನ್ನು ಬಾಲ್ಯದಿಂದಲೂ ಬಲ್ಲ 70 ವರ್ಷದ ಮುದುಕ ಜಾಕಿರ್ ಮಿಯಾ ಆಕೆಯೊಂದಿಗೆ ಹೊರಡುತ್ತಾರೆ. ಅಜಮೇರ್ ದರ್ಗಾ ಭೇಟಿಯ ನಂತರ ಅವರು ಅಹಮದಾಬಾದಿಗೆ ಹೋಗುವ ಗರೀಬ ಎಕ್ಸ್‌ಪ್ರೆಸ್ ಹತ್ತುತ್ತಾರೆ. ಆದರೆ ಗೋಧ್ರಾ ರೈಲು ದುರಂತದ ನಂತರ ಗುಜರಾತ್ ಹತ್ತಿ ಉರಿಯುತ್ತಿರುತ್ತದೆ. ಅದರಲ್ಲಿ ಅಂಜುಮ್ ಮತ್ತು ಜಾಕಿರ್ ಮಿಯಾ ಸಿಕ್ಕಿಹಾಕಿಕೊಳ್ಳುತ್ತಾರೆ. ಜಾಕಿರ್ ಮಿಯಾನನ್ನು ಕೊಂದು ಹಾಕುವ ಗಲಭೆಕೋರರು ಹಿಜಡಾಳನ್ನು ಕೊಲ್ಲುವುದು ಪಾಪ ಆಗುವುದಕ್ಕೆ ಸಮಾ ಎಂದು ಬಿಟ್ಟುಬಿಡುತ್ತಾರೆ. ಗಂಡೂ ಅಲ್ಲದ, ಹೆಣ್ಣೂ ಅಲ್ಲದ, ಯಾರಿಗೂ ಬೇಡವಾದ ತನ್ನ ಹಿಜಡಾತನವೇ ತನ್ನ ಪ್ರಾಣ ಉಳಿಸಿದ್ದರ ಬಗ್ಗೆ ಜುಗುಪ್ಸೆಪಡುವ ಅಂಜುಮ್ 'ಕನಸುಗಳ ಮನೆ'ಯನ್ನು ತೊರೆದು ಸ್ಮಶಾನದಲ್ಲಿ ವಾಸಿಸಲಾರಂಭಿಸುತ್ತಾಳೆ. ಅವಳನ್ನು ಅಲ್ಲಿಂದ ಒಕ್ಕಲೆಬ್ಬಿಸಲು ಅಧಿಕಾರಿಗಳು ಬಂದಾಗ "ನಾನು ಇಲ್ಲಿ ಜೀವನ ಮಾಡಲು ಬಂದಿಲ್ಲ, ಸಾಯಲು ಬಂದಿದ್ದೀನೆ. ಅದೇನು ಕಿತ್ತುಕೊಳ್ಳುತ್ತೀರೋ ಕಿತ್ತುಕೊಳ್ಳಿ" ಎಂದು ಬೆದರಿಸುತ್ತಾಳೆ. ಸ್ಮಶಾನದ ನಡುವೆ ತಗಡಿನ ಒಂದು ಕ್ಕುದ ಕಟ್ಟಿಕೊಳ್ಳುತ್ತಾಳೆ. ಸದ್ದಾಮನೂ ಒಂದನ್ನು ಕಟ್ಟಿಕೊಳ್ಳುತ್ತಾನೆ. ಹೀಗೆ ಹಲವಾರು ಪುಟ್ಟಪುಟ್ಟ ಗುಡಿಸಲುಗಳನ್ನು



ಕಟ್ಟಿಕೊಂಡು ತಮ್ಮಂತೆ ಸಮಾಜ ತಿರಸ್ಕರಿಸಿರುವವರಿಗೆ ಬಾಡಿಗೆಗೆ ಕೊಡಲಾರಂಭಿಸುತ್ತಾರೆ. ಆ ಸ್ಮಶಾನಕ್ಕೆ ಅಂಜುಮ್ 'ಜನ್ನತ್ ಗೆಸ್ಟ್ ಹೌಸ್' ಎಂದು ನಾಮಕರಣ ಮಾಡುತ್ತಾಳೆ. ಜನ್ನತ್ ಅಂದರೆ ಸ್ವರ್ಗ. ಸ್ಮಶಾನದ ಆಚೆ ಇರುವ, ಇತರರನ್ನು ಕೊಲ್ಲುವ ಆದರೆ ತನ್ನಂತ ಹಿಜಡಾಗಳನ್ನು ಕೊಲ್ಲದಿರುವ ಲೋಕವನ್ನು ಆಕೆ 'ದುನಿಯಾ' (ಬದುಕು) ಎಂದು ಕರೆಯುತ್ತಾಳೆ.

ನಿಷ್ಪ್ರಯೋಜಕ ಪ್ರಧಾನಿಯ ಆಳ್ವಿಕೆಯಿಂದ ಜನ ಬೇಸತ್ತಿದ್ದಾರೆ. ಗುಜರಾತಿನಲ್ಲಿ 2002ರಲ್ಲಿ ಕೋಮುಗಲಭೆ ಮಾಡಿಸಿದ್ದ ಗುಜರಾತ್ ಕಾ ಲಲ್ಲಾನ ಜನಪ್ರಿಯತೆ ಹೆಚ್ಚಾಗುತ್ತಿದೆ. ಜಂತರ್‌ಮಂತರ್‌ನಲ್ಲಿ ಫೆರೆಕ್ಸ್ ಹಾಲು ಪುಡಿಯ ರೂಪದರ್ಶಿಯಾಗಿದ್ದ ಕೂಸನ್ನು ಹೋಲುವ ಮುದುಕ ಭ್ರಷ್ಟಾಚಾರದ ವಿರುದ್ಧ ಉಪವಾಸ ಪ್ರಾರಂಭಿಸಿದ್ದಾನೆ. ಅಲ್ಲಿಗೆ ಸಾವಿರಾರು ಜನ ಬರುತ್ತಿದ್ದಾರೆ. ಅಗರ್ವಾಲ್ ಎಂಬ ಮಾಜಿ ಅಧಿಕಾರಿ ಭ್ರಷ್ಟಾಚಾರವನ್ನು ನಿರ್ಮೂಲ ಮಾಡಿದರೆ ದೇಶದ ಎಲ್ಲಾ ಸಮಸ್ಯೆಗಳು ಬಗೆಹರಿದಂತೆ ಎಂದು ಭಾವಿಸಿದ್ದಾನೆ. ಆದರೆ ಭ್ರಷ್ಟಾಚಾರ ಮಾತ್ರವಲ್ಲ, ದೇಶದಲ್ಲಿ ಇನ್ನೂ ಹಲವಾರು ಸಮಸ್ಯೆಗಳಿವೆ, ಹೋರಾಟಗಳಿವೆ, ಇವುಗಳತ್ತಲೂ ಜನ ತಮ್ಮ ಗಮನ ಹರಿಸಬೇಕೆಂಬ ಆಶಯದೊಂದಿಗೆ ದೇಶದ ವಿವಿಧ ಕಡೆಗಳಿಂದ ಪ್ರತಿಭಟನಾಕಾರರೂ ಜಂತರ್ ಮಂತರ್‌ನಲ್ಲಿ ಜಮೆಯಾಗುತ್ತಿದ್ದಾರೆ. ಹಲವಾರು ದಶಕಗಳೇ ಕಳೆದರೂ ತಮಗಿನ್ನೂ ನ್ಯಾಯ ಸಿಕ್ಕಿಲ್ಲ ಎಂದು ಭೋಪಾಲ್ ಅನಿಲ ದುರಂತದಲ್ಲಿ ತಮ್ಮವರನ್ನು ಕಳೆದುಕೊಂಡವರು ಬಂದಿದ್ದಾರೆ. ಮಣಿಪುರದಲ್ಲಿ ಭಾರತೀಯ ಸೈನ್ಯ ಮಾಡಿರುವ ಅತ್ಯಾಚಾರ ಮತ್ತು ಕೊಲೆಗಳನ್ನು ಪ್ರತಿಭಟಿಸಿ ಅಲ್ಲಿನ ತಾಯಂದಿರು ಬಂದಿದ್ದಾರೆ. ತಮ್ಮ ಗಂಡ/ಸಹೋದರ/ಪುತ್ರರನ್ನು ಕಳೆದುಕೊಂಡಿರುವ ಕಾಶ್ಮೀರದ ಮಹಿಳೆಯರು ಬಂದಿದ್ದಾರೆ. ಬಸ್ತರ್‌ನಲ್ಲಿ ನಕ್ಸಲ್ ನಿಗ್ರಹದ ನೆಪದಲ್ಲಿ ಭೀಕರ ಕ್ರೌರ್ಯಕ್ಕೆ ಗುರಿಯಾಗಿರುವ ಆದಿವಾಸಿಗಳೂ ಬಂದಿದ್ದಾರೆ. ಇವರೆಲ್ಲರ ಮಧ್ಯೆ ತನ್ನನ್ನು 'ಡಾ. ಆಜಾದ್ ಭಾರತೀಯ' ಎಂದು ಕರೆದುಕೊಳ್ಳುವ, ಹಲವಾರು ಅನ್ಯಾಯಗಳ ವಿರುದ್ಧ ಏಕಾಂಗಿಯಾಗಿ ಹೋರಾಡುತ್ತಿರುವ ಕಮ್ಯೂನಿಸ್ಟನೂ ಇದ್ದಾನೆ.

ಅಮೆರಿಕದ ವರ್ಲ್ಡ್ ಟ್ರೇಡ್ ಸೆಂಟರ್ ಮೇಲೆ ಆದ ದಾಳಿಯನ್ನು ಟಿವಿಯಲ್ಲಿ ನೋಡಿದಾಗಿನಿಂದ ಪ್ರಸ್ತುತ ವಿದ್ಯಮಾನಗಳ ಬಗ್ಗೆ ಅಪಾರ ಕುತೂಹಲ ಹೊಂದಿರುವ ಅಂಜುಮ್ ಜಂತರ್‌ಮಂತರ್‌ನಲ್ಲಿ ಏನಾಗುತ್ತಿದೆ ಎಂದು ನೋಡಲು ತನ್ನ ಹಲವು ಮಿತ್ರರೊಂದಿಗೆ ಬರುತ್ತಾಳೆ. ಅವತ್ತು ಯಾರೋ ಒಬ್ಬರು ರಾತ್ರಿಗಿಂತಲೂ ಕಪ್ಪಾಗಿರುವ ಒಂದು ಕೈಗೂಸನ್ನು ಜಂತರ್‌ಮಂತರ್‌ನಲ್ಲಿ ಬಿಟ್ಟು ಹೋಗಿರುತ್ತಾರೆ. ಆ ಮಗು ಯಾರದ್ದು, ಅದನ್ನು ಯಾರಿಗೆ ವಹಿಸಬೇಕೆಂಬ ಚರ್ಚೆಯು ಗಲಭೆಗೆ ತಿರುಗಿದಾಗ ಅದು ನಾಪತ್ತೆಯಾಗುತ್ತದೆ. ಅದನ್ನು ತಿಲೋತ್ತಮ ಎಂಬಾಕೆ ತೆಗೆದುಕೊಂಡು ಹೋಗಿರುತ್ತಾಳೆ. ಯಾರು ಈ ತಿಲೋತ್ತಮ?



ಈಕೆಯ ವೃತ್ತಾಂತ ಪ್ರಾರಂಭವಾಗುವುದು 1984ರಲ್ಲಿ, ದೆಹಲಿಯ ಪ್ರಖ್ಯಾತ ರಂಗ ನಿರ್ದೇಶಕನೊಬ್ಬ ಸಿದ್ಧಪಡಿಸುತ್ತಿರುವ ಇಂಗ್ಲಿಷ್ ನಾಟಕದಲ್ಲಿ ಬಿಪ್ಲಬ್ ದಾಸ್‌ಗುಪ್ತ ಎಂಬ ಬೆಂಗಾಳಿ ಮತ್ತು ನಾಗರಾಜ್ ಹರಿಹರನ್ ಎಂಬ ದಕ್ಷಿಣ ಭಾರತದ ಯುವಕರು ನಟಿಸುತ್ತಿದ್ದಾರೆ. ವಾಸ್ತುಶಿಲ್ಪಿ ಆಗಿರುವ ತಿಲೋತ್ತಮ ನಾಟಕಕ್ಕೆ ಬೆಳಕು ಸಂಯೋಜನೆ ಮಾಡುತ್ತಿದ್ದಾಳೆ. ಬಿಪ್ಲಬನಿಗೆ ತಿಲೋ ಮೇಲೆ ವ್ಯಾಮೋಹ. ನಾಗನಿಗೆ ಆಕೆಯನ್ನು ಪುಸಲಾಯಿಸುವ ಮೂಲಕ ತನ್ನ ಮಹಿಳಾ ಬಲಿಪಶುಗಳ ಸಂಖ್ಯೆಯನ್ನು ಹಿಗ್ಗಿಸಿಕೊಳ್ಳುವ ಉದ್ದೇಶ. ಆದರೆ ತಿಲೋಗೆ ಇಷ್ಟವಾಗಿರುವುದು ತನ್ನೊಂದಿಗೆ ವಾಸ್ತುಶಿಲ್ಪ ಕಾಲೇಜಿನಲ್ಲಿ ಓದಿದ, ಮಿತ್ರನೂ, ಪ್ರೇಮಿಯೂ ಆಗಿರುವ ಕಾಶ್ಮೀರದ ಮೂಸ.

ಇನ್ನೇನು ನಾಟಕವನ್ನು ಪ್ರದರ್ಶಿಸಬೇಕು ಎನ್ನುವಾಗ ಇಂದಿರಾ ಗಾಂಧಿಯ ಹತ್ಯೆ ಆಗುತ್ತದೆ. ತದನಂತರದ ದಿನಗಳಲ್ಲಿ ದೆಹಲಿಯಲ್ಲಿ ಸಾವಿರಾರು ಸಿಖ್ಖರು ಕೊಲ್ಲಲ್ಪಡುತ್ತಾರೆ. ಅದೆಲ್ಲ ಶಮನಗೊಂಡ ಕೆಲವೇ ತಿಂಗಳುಗಳಲ್ಲಿ ಭೋಪಾಲ್ ಅನಿಲ ದುರಂತ ಸಂಭವಿಸುತ್ತದೆ. ನಾಟಕದ ತಯಾರಿ ನಿಂತುಹೋಗುತ್ತದೆ. ಬಿಪ್ಲಬ್, ನಾಗ, ತಿಲೋ ಮತ್ತು ಮೂಸ ತಮ್ಮತಮ್ಮ ದಿಕ್ಕುಗಳಲ್ಲಿ ಸಾಗುತ್ತಾರೆ. ಬಿಪ್ಲಬ್ ಭಾರತ ಸರ್ಕಾರದ ಗುಪ್ತಚರ ಇಲಾಖೆ ಸೇರಿಕೊಳ್ಳುತ್ತಾನೆ, ನಾಗ ಪತ್ರಕರ್ತನಾಗುತ್ತಾನೆ, ತಿಲೋ ವಾಸ್ತುಶಿಲ್ಪಿ ಕಚೇರಿಗಳಲ್ಲಿ ಕೆಲಸ ಹಿಡಿಯುತ್ತಾಳೆ, ಮೂಸ ಕಾಶ್ಮೀರಕ್ಕೆ ಹೋಗುತ್ತಾನೆ.

ಮೂಸನ ತಂದೆ ಶ್ರೀನಗರದಲ್ಲಿ ಪೊಲೀಸರ ಮತ್ತು ಸೈನ್ಯದ ಕಟ್ಟಡಗಳನ್ನು ನಿರ್ಮಿಸುವ ಕಾಂಟ್ರಾಕ್ಟರ್. ತನ್ನ ಮಗ ತನ್ನ ಕಾಂಟ್ರಾಕ್ಟರ್ ವೃತ್ತಿಯನ್ನು ಇನ್ನೂ ಚೆನ್ನಾಗಿ ಮುಂದುವರೆಸಲಿ ಎಂದೇ ಆತ ವಾಸ್ತುಶಿಲ್ಪಿ ಆಗುವಂತೆ ನೋಡಿಕೊಂಡಿದ್ದಾನೆ. ಆದರೆ ಮೂಸನಿಗೆ ಕಾಶ್ಮೀರವನ್ನು ಆಕ್ರಮಿಸಿರುವ ಭಾರತೀಯ ಪೊಲೀಸರಿಗಾಗಲಿ, ಸೈನ್ಯಕ್ಕಾಗಲಿ ಕೆಲಸ ಮಾಡುವುದು ಇಷ್ಟವಿಲ್ಲ. ಸ್ವಾತಂತ್ರ್ಯಕ್ಕಾಗಿ ಕಾಶ್ಮೀರಿಗಳ ಹೋರಾಟ ಮುಂದುವರೆಯುತ್ತಿರುವಾಗಲೇ ಮೂಸ ಅರೀಫಾ ಎಂಬಾಕೆಯನ್ನು ಪ್ರೀತಿಸಿ ಮದುವೆ ಆಗುತ್ತಾನೆ. ಅವನಿಗೆ ಜಬೀನ್ ಎಂಬ ಮಗಳೂ ಜನಿಸುತ್ತಾಳೆ. ಜಬೀನಳಿಗೆ ಮೂರು ವರ್ಷ ವಯಸ್ಸಾದಾಗ ಒಮ್ಮೆ ಭಾರತೀಯ ಸೈನ್ಯ 17 ಮಂದಿ ಹೋರಾಟಗಾರರನ್ನು ಕೊಂದು ಹಾಕುತ್ತದೆ. ಆ 17 ಮಂದಿಯ ಶವಗಳನ್ನು ಪ್ರತಿಭಟನೆಯ ಮೆರವಣಿಗೆಯಲ್ಲಿ ಕರೆದೊಯ್ಯುತ್ತಿರುವಾಗ ಪಕ್ಕದ ರಸ್ತೆಯಲ್ಲಿ ವಾಹನವೊಂದು ಖಾಲಿಯಾದ ಮಾಂಗೋ ಫ್ರೂಟಿ ಪ್ಯಾಕೆಟ್ ಮೇಲೆ ಹರಿದು ದೊಡ್ಡದಾದ 'ಢಂ' ಶಬ್ದ ಹೊರಡುತ್ತದೆ. ಪ್ರತಿಭಟನಾಕಾರರು ಬಾಂಬ್ ಸ್ಫೋಟಿಸಿದ್ದಾರೆಂದು ಭಾವಿಸುವ ಸೈನಿಕರು ಮೆರವಣಿಗೆಯ ಮೇಲೆ ಗುಂಡು ಹಾರಿಸುತ್ತಾರೆ. ತಮ್ಮ ಮನೆಯ ಕಿಟಕಿಯಿಂದ ಮೆರವಣಿಗೆಯನ್ನು ವೀಕ್ಷಿಸುತ್ತಿದ್ದ ಅರೀಫಾ ಮತ್ತು ಜಬೀನಳತ್ತ ಒಂದು ಗುಂಡು ಹಾರಿ ಇಬ್ಬರೂ ಸತ್ತುಹೋಗುತ್ತಾರೆ.

ದೊಡ್ಡ ದುರಂತವೇ ತನ್ನ ಬದುಕನ್ನು ಅಪ್ಪಳಿಸಿದ್ದರೂ ಮೂಸ ತನ್ನ ದುಃಖವನ್ನು ತೋರಿಸುವುದಿಲ್ಲ. ಈಗ ಕಾಶ್ಮೀರದಲ್ಲಿ ಎಂತಹ ವಾತಾವರಣ ಇದೆ ಎಂದರೆ ದುಃಖ ತೋರದಿರುವುದೂ ಸಂಶಯಾಸ್ಪದ. ಆದ್ದರಿಂದ ಸೈನ್ಯದ ಮೇಜರ್ ಅಮ್ರಿಕ್ ಸಿಂಗ್ ಎಂಬಾತನಿಂದ ಮೂಸಾಗೆ ಬುಲಾವ್ ಬರುತ್ತದೆ. ಶ್ರೀನಗರದಲ್ಲಿ ಶಿರಾಜ್ ಎಂಬ ಚಿತ್ರಮಂದಿರ ಸ್ಥಗಿತಗೊಂಡು ಅದೀಗ ಸೈನಿಕರು ಹೋರಾಟಗಾರರನ್ನು ಹಿಂಸಾತ್ಮಕ ವಿಚಾರಣೆಗೆ ಒಳಪಡಿಸುವ ಸ್ಥಳವಾಗಿದೆ. ಈಗಾಗಲೇ ನಕಲಿ ಎನ್‌ಕೌಂಟರ್‌ಗಳಿಗೆ ಕುಖ್ಯಾತನಾಗಿರುವ ಅಮ್ರಿಕ್ ಸಿಂಗ್ ಮೂಸನನ್ನು ಬೆದರಿಸುತ್ತಾನೆ. ತನ್ನ 'ಸಾಹಸ'ಗಳ ಬಗ್ಗೆ ಕೊಚ್ಚಿಕೊಳ್ಳುತ್ತಾನೆ. ಮೂಸ ಮತ್ತು ಆತನ ತಂದೆ ಭಾರತದ ಪರ ಇರುವವರು ಎಂದು ಅಲ್ಲಿ ವಿಚಾರಣೆಗೆ ಎಳೆದು ತಂದಿರುವ ಹೋರಾಟಗಾರರ ಮುಂದೆ ತೋರಿಸಲು ಯತ್ನಿಸುತ್ತಾನೆ. ಮೂಸನಿಗೆ ಕೋಪ ಬರುತ್ತದೆ. ಅವತ್ತೇ ಆತ ಭೂಗತನಾಗುತ್ತಾನೆ.

ಇದಾದ ಒಂಭತ್ತು ತಿಂಗಳ ನಂತರ ಮೂಸನಿಂದ ತಿಲೋಗೆ ಶ್ರೀನಗರಕ್ಕೆ ಬರಬೇಕೆಂಬ ಸಂದೇಶ ಬರುತ್ತದೆ. ಆಕೆ ಹೋಗಿ ಒಂದು ಹೌಸ್‌ಬೋಟ್‌ನಲ್ಲಿ ತಂಗುತ್ತಾಳೆ. ಆ ಹೌಸ್‌ಬೋಟ್ ನೋಡಿಕೊಳ್ಳುತ್ತಿರುವವನು ಗುಲ್ರೇಜ್. ಮೂಸನ ಭೂಗತ ಹೆಸರೂ ಗುಲ್ರೇಜ್. ಆ ಹೌಸ್‌ಬೋಟ್‌ನಲ್ಲಿ ಕೆಲ ದಿನಗಳ ಕಾಲ ಮೂಸ ಮತ್ತು ತಿಲೋ ವಾಸಿಸುತ್ತಾರೆ. ಆಗ ಮೂಸ "ನಿನಗೆ ಗೊತ್ತಾ ಈಗ ಇಲ್ಲಿ ಬಿಪ್ಲಬ್ ಗುಪ್ತಚರ ಇಲಾಖೆಯಲ್ಲಿ ಹಿರಿಯ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾನೆ" ಎಂದು ಹೇಳುತ್ತಾನೆ. ಮೂಸ ಹೊರಟುಹೋದ ನಂತರ ತಿಲೋ ಆತನ ಸಹವರ್ತಿಗಳ ಜೊತೆ ಕಾಶ್ಮೀರದಲ್ಲಿ ಸುತ್ತಾಡುತ್ತಾಳೆ. ಆಕೆ ಹೌಸ್ ಬೋಟ್‌ಗೆ ವಾಪಸ್ಸಾದ ನಂತರ ಮತ್ತೆ ಬರುವ ಮೂಸ ಸ್ವಲ್ಪ ಹೊತ್ತಿನಲ್ಲೇ ಮರೆಯಾಗುತ್ತಾನೆ. ಆದರೆ ಆತನ ಸುಳಿವು ಹಿಡಿದಿರುವ ಅಮ್ರಿಕ್ ಆತನನ್ನು ಹುಡುಕಿಕೊಂಡು ಬರುತ್ತಾನೆ. ನಿಜವಾದ ಗುಲ್ರೇಜ್ ನಾಪತ್ತೆಯಾಗಿದ್ದಾನೆಂದು ಗೊತ್ತಿರದ ಅಮ್ರಿಕ್ ಹೌಸ್‌ಬೋಟ್ ನೋಡಿಕೊಳ್ಳುತ್ತಿದ್ದ ಗುಲ್ರೇಜನೇ ಭೂಗತ ಹೋರಾಟಗಾರ ಎಂದು ಭಾವಿಸಿ ಅವನನ್ನು ಕೊಂದು ತಿಲೋಳನ್ನು ಕುಖ್ಯಾತ ಶಿರಾಜ್ ಚಿತ್ರಮಂದಿರಕ್ಕೆ ಕರೆದುಕೊಂಡು ಹೋಗುತ್ತಾನೆ. ಅಲ್ಲಿ ತಾನು ಯಾರು, ಎಲ್ಲಿಂದ ಬಂದೆ ಇತ್ಯಾದಿ ಬಗ್ಗೆ ಬಾಯಿಬಿಡದ ತಿಲೋ "ಬಿಪ್ಲಬ್ ದಾಸ್‌ಗುಪ್ತ ಅವರಿಗೆ ನಾನು ಇಲ್ಲಿರುವುದು ತಿಳಿಸಿ" ಎಂದು ಹೇಳಿ ಆಕೆ ಬಿಪ್ಲಬನಿಗೆ ಇಟ್ಟಿದ್ದ ಅಡ್ಡ ಹೆಸರನ್ನು ಹೇಳುತ್ತಾಳೆ. ಹೇಳಿಕೇಳಿ ಬಿಪ್ಲಬ್ ಹಿರಿಯ ಅಧಿಕಾರಿ, ಈಕೆಗೆ ಹಿಂಸೆ ಕೊಡುವ ಮುನ್ನ ಒಮ್ಮೆ ವಿಚಾರಿಸೋಣ ಎಂದು ಅಮ್ರಿಕ್ ನಿರ್ಧರಿಸುತ್ತಾನೆ. ಆದರೆ ಬಿಪ್ಲಬ್ ಶ್ರೀನಗರದಿಂದ ಕಾರ್ಯನಿಮಿತ್ತ ದೂರವಿರುತ್ತಾನೆ. ತನ್ನ ಯೌವ್ವನದ ಗೆಳತಿ ಕೊಲೆಗಡುಕ ಸೈನ್ಯಾಧಿಕಾರಿ ಅಮ್ರಿಕ್‌ನ ಕೈಸೇರಿರುವುದರಿಂದ ಆಕೆಯನ್ನು ಅಲ್ಲಿಂದ ಬಿಡುಗಡೆಗೊಳಿಸಲು ತಮ್ಮ ಇನ್ನೋರ್ವ ಮಿತ್ರ ನಾಗ (ಆತ ಕಾಶ್ಮೀರ ಕುರಿತು ವರದಿ ಮಾಡಲು ಶ್ರೀನಗರಕ್ಕೆ ಬಂದಿರುತ್ತಾನೆ)ನಿಗೆ ಸೂಚಿಸುತ್ತಾನೆ. ಆದರೆ ಅಷ್ಟು ಹೊತ್ತಿಗೆ ಎಸಿಪಿ ಆಗಿರುವ ಅಮ್ರಿಕನ ಪ್ರೇಯಸಿಯೂ ಆಗಿರುವ ಪಿಂಕಿ ಎಂಬಾಕೆ ತಿಲೋಳ ತಲೆ ಬೋಳಿಸಿರುತ್ತಾಳೆ.

ತಿಲೋ ತಕ್ಷಣವೇ ದೆಹಲಿಗೆ ಹಿಂದಿರುಗುವುದಿಲ್ಲ, ಮೂಸನನ್ನು ಭೇಟಿ ಆಗುತ್ತಾಳೆ. ಅದೂ ಮೂಸನ 'ಅಂತ್ಯಕ್ರಿಯೆ' ಮುಗಿದನಂತರ. ಆಕೆ ಪೊಲೀಸರ ಮತ್ತು ಭಾರತದ ಸೈನ್ಯದ ಗಮನಕ್ಕೆ ಬಂದಿರುವುದರಿಂದ ಸುರಕ್ಷತೆಗಾಗಿ ಆಕೆ ತನ್ನ ರಾಜ್ಯವಾದ ಕೇರಳಕ್ಕೆ ಹಿಂದಿರುಗಬೇಕು ಅಥವಾ ಯಾರನ್ನಾದರೂ ಮದುವೆಯಾಗಿ ಸಾಮಾನ್ಯ ಬದುಕು ನಡೆಸಿದರೆ ಕ್ಷೇಮ ಎನ್ನುತ್ತಾನೆ ಮೂಸ.

ನಾಗನೊಂದಿಗೆ ದೆಹಲಿಗೆ ಹಿಂದಿರುಗಿದ ಕೆಲವೇ ದಿನಗಳಲ್ಲಿ ತಿಲೋ ನಾಗನನ್ನು ಮದುವೆಯಾಗುತ್ತಾಳೆ. ಆದರೆ ಆಕೆ ಮೂಸನ ಮಗುವನ್ನು ತನ್ನ ಗರ್ಭದಲ್ಲಿ ಇಟ್ಟುಕೊಂಡಿದ್ದಾಳೆ. ತಾನು ಬದುಕುತ್ತಿರುವ ಸಂದರ್ಭದಲ್ಲಿ ಆ ಮಗು ಬೇಡವೆಂದು ಅಬಾರ್ಷನ್ ಮಾಡಿಸಿಕೊಳ್ಳುತ್ತಾಳೆ. ಹದಿನಾಲ್ಕು ವರ್ಷ ಪತ್ರಕರ್ತ ನಾಗನ ಮಡದಿಯಾಗಿ ಜೀವನ ಸಾಗಿಸುತ್ತಾಳೆ. ಇದೇ ಹೊತ್ತಿನಲ್ಲಿ ಬಿಪ್ಲಬ್ ಹಿರಿಯ ಅಧಿಕಾರಿಯಾಗಿ ಹಲವಾರು ದೇಶಗಳಲ್ಲಿ ಕೆಲಸ ಮಾಡಿದ್ದಾನೆ. ಕೊನೆಗೆ ಆತನನ್ನು ಅಫಘಾನಿಸ್ತಾನಕ್ಕೆ ಕಳುಹಿಸಲಾಗಿದೆ. ಅಲ್ಲಿ ಬಾಂಬ್ ದಾಳಿಯಲ್ಲಿ ಕೂದಲಂಚಿನಲ್ಲಿ ಬಚಾವಾದ ಬಿಪ್ಲಬ್ ಮದ್ಯದ ದಾಸನಾಗುತ್ತಾನೆ. ಕಾಶ್ಮೀರದಲ್ಲಿ ಮೂಸ ಭೂಗತನಾಗಿ ಭಾರತದಿಂದ ಸ್ವಾತಂತ್ರ್ಯಕ್ಕಾಗಿ ತನ್ನ ಕಾರ್ಯಚಟುವಟಿಕೆಗಳನ್ನು ಮುಂದುವರೆಸುತ್ತಾನೆ.


ಕೊನೆಗೂ ತಿಲೋಗೆ ನಾಗನೊಂದಿಗಿನ ಬದುಕು ಸಾಕಾಗುತ್ತದೆ. ತಾನು ಆತನನ್ನು ಬಿಟ್ಟು ಹೊರಡುವುದಾಗಿ ಹೇಳುತ್ತಾಳೆ. ದೆಹಲಿಯಲ್ಲಿ ಬಿಪ್ಲಬ್ ಮಾಲೀಕತ್ವದ ಮನೆಯನ್ನು ಬಾಡಿಗೆಗೆ ಪಡೆಯುತ್ತಾಳೆ. ಅಲ್ಲಿ ಕೆಲವು ವರ್ಷಗಳ ಕಾಲ ಜೀವನ ಸಾಗಿಸುತ್ತಾಳೆ. ಆದರೆ ಜಂತರ್‌ಮಂತರ್‌ನಿಂದ ಆಕೆ ತೆಗೆದುಕೊಂಡು ಬಂದಿದ್ದ ಕೂಸಿಗಾಗಿ ಪೊಲೀಸರು ಹುಡುಕಲಾರಂಭಿಸಿದಾಗ ಆಕೆ ಅಲ್ಲಿಂದ ಕೂಸಿನೊಂದಿಗೆ ನಾಪತ್ತೆಯಾಗುತ್ತಾಳೆ. ಆಕೆ ಎಲ್ಲಿಗೆ ಹೋದಳು?

ಹೆಂಡದ ಸಹವಾಸ ಬಿಡಬೇಕೆಂದೂ, ಕೆಲವು ದಿನ ವಿಶ್ರಾಂತಿ ಪಡೆಯಬೇಕೆಂದೂ ಬಿಪ್ಲಬ್ ದೆಹಲಿಗೆ ಹಿಂದಿರುಗುತ್ತಾನೆ. ಆದರೆ ತಿಲೋ ಅಲ್ಲಿರುವುದಿಲ್ಲ. ಆಕೆ ಎಲ್ಲಿ ಹೋದಳು ಎಂದು ಪತ್ತೆ ಮಾಡಲು ಆಕೆ ಬಿಟ್ಟುಹೋಗಿರುವ ಬರಹಗಳನ್ನು ಓದಲಾರಂಭಿಸುತ್ತಾನೆ. ಅವನ ಕುತೂಹಲ ಕೆರಳಿಸುವುದು ಅಮ್ರಿಕ್ ಸಿಂಗ್‌ನ ನಿಗೂಢ ಸಾವು ಕುರಿತ ಬರಹಗಳು, ಕಾಶ್ಮೀರ ಕುರಿತ ಕತೆಗಳು ಮತ್ತು ವರದಿಗಳು. ಮೂಸ ಸತ್ತು ಹಲವು ವರ್ಷಗಳಾದರೂ ಯಾಕೆ ತಿಲೋಗೆ ಕಾಶ್ಮೀರದ ಹೋರಾಟದ ಬಗ್ಗೆ ಆಸಕ್ತಿ ಎಂದು ಬಿಪ್ಲಬ್ ಅಚ್ಚರಿಗೊಳ್ಳುತ್ತಾನೆ.

ಏನಾಗಿರುತ್ತದೆಂದರೆ, ನ್ಯಾಯವಾದಿ ಜಲೀಬ್ ಕದ್ರಿ ಎಂಬಾತನನ್ನು ಎನ್‌ಕೌಂಟರ್ ಮಾಡಿ ಕೊಂದದ್ದಕ್ಕೆ ಅಮ್ರಿಕ್ ಸಿಂಗ್ ವಿರುದ್ಧ ನ್ಯಾಯಾಲಯದಲ್ಲಿ ವಿಚಾರಣೆ ಪ್ರಾರಂಭವಾಗುತ್ತದೆ. ಆತ ಸೈನ್ಯದಲ್ಲಿ ಹಿರಿಯ ಅಧಿಕಾರಿ

▶▶ 05

ಕಾರವಾರ: ರೂಪಾಲಿ ಮಿಂಚು; ಸೈಲ್ ಸಂಚು!


ರೂಪಾಲಿ

ಕಡಲತಡಿಯ ಕಾರವಾರ-ಅಂಕೋಲೆಯ ರಾಜಕೀಯ ಅಂಕಣದಲ್ಲಿ ಶುರುವಾಗಿರುವ ಟಕೆಟ್ ಮ್ಯಾಚ್ ದಿನಕ್ಕೊಂದು ನಮೂನೆಯ ಕುತೂಹಲ ಕೆರಳಿಸುತ್ತಿದೆ. ಪಕ್ಷೇತರವಾಗಿ ಗೆದ್ದು ನಂತರ ಕಾಂಗ್ರೆಸ್ ಸಹ ಶಾಸಕನಾದ ಅದಿರು ಕಳ್ಳ ಸಾಗಾಣಿಕೆದಾರ ಸತೀಶ್ ಸೈಲ್ ಎಲ್ಲೂಸಲ್ಲದ ಕಾಗೆಯಂತಾಗಿ ಅತ್ತಿತ್ತ ಹಾರಾಡುತ್ತಲೇ ಇದ್ದಾನೆ. ರೊಕ್ಕದ ವಿಪರೀತ ಚಟ, ಅಹಂಕಾರ, ಅಧಿಕಪ್ರಸಂಗದ ಸೈಲ್‌ನ ಎಡಬಿಡಂಗಿತನ ಬಿಜೆಪಿಯ ಎಮ್ಮೆಲ್ಲೆ ಆಸೆಗಾರರ ತೆವಲು ಜೋರಾಗಿಸಿ ಬಿಟ್ಟಿದೆ! ಮ್ಯಾಗಿ-ದೋಷಪಾಂಡೆ ತಿಕ್ಕಾಟದಿಂದಾಗಿ ಒಂದು ದಶಕದ ಹಿಂದೆಯೇ ಸತ್ತು ಒರಗಿರುವ ಕಾಂಗ್ರೆಸ್ ಕಾರವಾರದಲ್ಲಿ ಮತ್ತೆ ಜೀವತಳೆವ ಲಕ್ಷಣವೇ ಕಾಣಿಸುತ್ತಿಲ್ಲ.

ಬೇಲೇಕೇರಿ ಬಂದರಿಂದ ಕೋಟ್ಯಾಂತರ ರೂ. ಕಬ್ಬಿಣದ ಅದಿರು ವಿದೇಶಕ್ಕೆ ಕದ್ದು ಕಳಿಸಿ ಸಿಕ್ಕಿಬಿದ್ದಿರುವ ಸೈಲ್ ಸಿಬಿಐ ಕೈದಿಯಾಗಿ ಒಂದು ವರ್ಷ ಜೈಲಲ್ಲಿ ಚಪಾತಿ-ಗಂಜಿ ತಿಂದು ಬಂದಿದ್ದಾನೆ. ಮತ್ಯಾವಾಗ ಜೈಲು ಸೇರುತ್ತಾನೋ ಆತನಿಗೇ ಗೊತ್ತಿಲ್ಲ. ಆದರೂ ರಾಜಕೀಯ ಅಧಿಕಾರದ ದುರಾಸೆ ಮಾತ್ರ ಕಮ್ಮಿಯಾಗಿಲ್ಲ. ಸೈಲ್ ಜೈಲಲ್ಲಿ ಇದ್ದಾಗ ಆತನ ಆತ್ಯಾಪ್ತ ಚೇಲ ಶಂಭುಶೆಟ್ಟಿ ಅನಧಿಕೃತ ಶಾಸಕನಾಗಿ ವಸೂಲಿ ಶುರು ಹಚ್ಚಿಕೊಂಡಿದ್ದ. ಜೈಲಿಂದ ಹೊರಬಂದ ನಂತರ ಸೈಲ್ ಶಂಭಣ್ಣನ ಮಾರ್ಗದರ್ಶನದಲ್ಲೇ ಕಲೆಕ್ಷನ್ ಆಡಳಿತ ನಡೆಸಿಕೊಂಡು ಬಂದಿದ್ದಾನೆ. ಸರ್ಕಾರಿ ಕಂಟ್ರಾಕ್ಟರಿಕೆ ಮಾಡುವವರು ಕಾಮಗಾರಿ ಮುಗಿವ ಮೊದಲೇ ಸೈಲ್ ಸಾಹೇಬರಿಗೆ ಶೇಕಡಾ ಹತ್ತರಷ್ಟು ಕಾಣಿಕೆ ಅರ್ಪಿಸಲೇಬೇಕು.


ಇಡೀ ಕಾರವಾರಕ್ಕೇ ಬೇಲಿ ಸುತ್ತಿ ಸಾಮ್ರಾಜ್ಯ ಸ್ಥಾಪಿಸುವ ಪಾಳೆಗಾರ ... ಸೈತಾನ ಈ ಸೈಲ್. ಅದಿರು ಅವ್ಯವಹಾರದ ಹಡಬೆ ಹಣದಿಂದ ಆತ ಕಾರವಾರದ ತುಂಬೆಲ್ಲ ಜಾಗ ಖರೀದಿಸಿದ್ದಾನೆ. ಹಲವರಿಗೆ ದೊಡ್ಡ ರೇಟು ಕೊಡುವ ಆಸೆ ಹುಟ್ಟಿಸಿ ಜಾಗದ ಜಿಪಿಎ ಪಡೆದು ಸತಾಯಿಸುತ್ತಿದ್ದಾನೆ. ಕಾರವಾರದಲ್ಲಿ ನೆಲೆಯೂರಿರುವ ತರತರದ ಲ್ಯಾಂಡ್ ಲೂಟ್‌ಮಾರ್‌ನ ಕಿಂಗ್ ಪಿನ್ನೇ ಈ ಸೈಲ್ ಸಾಹುಕಾರ್!

ಸೈಲ್‌ನಿಗೆ ಶಾಸಕ ಸ್ಥಾನದ ಘನತೆ-ಗೌರವ; ಕರ್ತವ್ಯ-ಕಳಕಳಿ ಅದ್ಹೇಗೆ ಅರ್ಥವಾದೀತು! ತಾನು ಶಾಸಕನಾಗಿರುವುದೇ ಲೂಟಿ ಹೊಡೆಯಲಿಕ್ಕೆಂಬ ಬಲವಾದ ನಂಬಿಕೆ ಸೈಲ್‌ನದು. ಶಂಭುಶೆಟ್ಟಿ, ಕೃಷ್ಣ ಕೇಳಸ್ಕರ್, ಮಂಗಲದಾಸ ಕಾಮತ್‌ನಂಥ ಜನ ಪೀಡಕರ ಗ್ಯಾಂಗ್ ಕಟ್ಟಿಕೊಂಡು ಸೈಲ್ ಕಾರವಾರ-ಅಂಕೋಲೆಯಲ್ಲಿ ಹಾವಳಿ ಎಬ್ಬಿಸಿ ಬಿಟ್ಟಿದ್ದಾನೆ. ಕಾರವಾರದ ಮಾಜಾಳಿ ಆಚೆಯ ಒಂದಿಷ್ಟು ಹಳ್ಳಿಗಳ ಸ್ವ-ಜಾತಿ ಕೊಂಕಣ ಮರಾಠರು ಬಿಟ್ಟರೆ ಮತ್ಯಾರೂ ಸೈಲ್‌ನ ನಂಬುವ ಸ್ಥಿತಿಯಲ್ಲಿಲ್ಲ! ಅಂಕೋಲೆ ಕಡೆಯಂತೂ ಸೈಲ್‌ನ ಹೆಸರೆತ್ತಿದರೆ ಕ್ಯಾಕರಿಸಿ ಉಗಿಯುತ್ತಾರೆ. ಜಿಪಂ ಎಲೆಕ್ಷನ್‌ನಲ್ಲಿ ಬುಡಕಟ್ಟು ಹಾಲಕ್ಕಿ ಒಕ್ಕಲಿಗರ ಸಮುದಾಯದ ಸಜ್ಜನ ಪಾಂಡುರಂಗ ಗೌಡರನ್ನು ಕಾಂಗ್ರೆಸ್ ಕ್ಯಾಂಡಿಡೇಟಾಗಿ ನಿಲ್ಲಿಸಿ ತಾನೇ ಹಠಕ್ಕೆ ಬಿದ್ದು ಸೋಲಿಸಿದ ಸೈಲ್‌ನಿಗೆ ಹಾಲಕ್ಕಿಗರ ಒಂದೇ ಒಂದು ಮತ ಮುಂದಿನ ಚುನಾವಣೆಯಲ್ಲಿ ಸಿಗೋದು ಅನುಮಾನ. ಜನಪರ ಕಾಂಗ್ರೆಸಿಗ ಉದಯ ನಾಯ್ಕ, ಮಡದಿ ಉಷಾ ನಾಯ್ಕರನ್ನು ಸೋಲಿಸಲು ಸೈಲ್ ಮಾಡಿದ ಕರಾಮತ್ತು ಕ್ಷೇತ್ರದ ಬಹುಸಂಖ್ಯಾತ 'ಕೋಮಾರಪಂಥ' ಜಾತಿಯವರನ್ನು ಕೆರಳಿಸಿದೆ.

ಹೀಗೆ ಕಳೆದ ನಾಲ್ಕು ವರ್ಷದಿಂದ ರಾಜಕೀಯ, ಸಾಮಾಜಿಕ, ಆಡಳಿತಾತ್ಮಕ ಎಡವಟ್ಟುಗಳನ್ನು ಒಂದರ ಹಿಂದೊಂದರಂತೆ ಮಾಡಿಕೊಂಡಿರುವ ಸೈಲ್ ಓಟು ಖರೀದಿಸಿಯೇ ಮತ್ತೆ ಗೆಲ್ಲುತ್ತೇನೆಂಬ ಭ್ರಮೆಯಲ್ಲಿದ್ದಾನೆ. ಆದರೆ ಆನಂದ ಅಸ್ನೋಟಿಕರ್‌ಗಿಂತಲೂ ಹೆಚ್ಚು ಹೆಸರು ಕೆಡಿಸಿಕೊಂಡಿರುವ ಭಂಡ ಶಾಸಕ ಸೈಲ್‌ನ ಮನೆಗೆ ಕಳಿಸಲು ಕಾರವಾರ ಮತ್ತು ಅಂಕೋಲಾ ತಾಲ್ಲೂಕುಗಳೆರಡರ ಮತದಾರರು ಕಾಯುತ್ತಿದ್ದಾರೆ. ಈತ ಹೆಸರಿಗಷ್ಟೇ ಕಾಂಗ್ರೆಸ್ ಸಹ ಶಾಸಕ. ದೀಪಕ್ ವೈಂಗಣಕರ್, ನಗರಸಭೆ ಅಧ್ಯಕ್ಷ ಗಣಪತಿ ನಾಯ್ಕ, ಅಶೋಕ್ ನಾಯ್ಕ ವಗೈರೆ ಮೂಲ ಕಾಂಗ್ರೆಸಿಗರಿಗೆ ಸೈಲ್ ತಲೆ ಕಂಡರಾಗದು. ಜಿಲ್ಲೆಯ ಪಾಲಿಟಿಕಲ್ ಡಾನ್ ದೇಶಪಾಂಡೆಯನ್ನು ಎದುರು ಹಾಕಿಕೊಂಡಿರುವ ಈತನನ್ನು ಮ್ಯಾಗಿಯೂ ನಂಬೋದಿಲ್ಲ. ಸಿಎಂ ಸಿದ್ದು ಕಾಲಿಗೆ ಬಿದ್ದು ಒಂದಿಷ್ಟು ಅನುದಾನ ತಂದಿರುವ ಸೈಲ್ ಆ ಹಣದ ಕಾಮಗಾರಿಯೆಲ್ಲ ತನ್ನ ಉಚಿತ ಕೊಡುಗೆ ಎಂಬಂತೆ ಒಣ ಪೋಸು ಕೊಡುತ್ತಿದ್ದಾನೆ.

ಕಾಂಗ್ರೆಸ್ ಮುಖ್ಯಮಂತ್ರಿ-ಮಂತ್ರಿಗಳಿಂದ ಕೆಲಸ ಮಾಡಿಸಿಕೊಂಡರೂ ಆ ಪಾರ್ಟಿ ಬಗ್ಗೆ ಒಂದೊಳ್ಳೆ ಮಾತಾಡದೆ, ಎದುರಾಳಿ ಬಿಜೆಪಿ ಭಂಡಾಟ ಬಗ್ಗೂ ಉಸಿರೆತ್ತದೆ ದಗಲುಬಾಜಿ ರಾಜಕಾರಣ ಮಾಡುವ ಸೈಲ್ ಈಗ ಪಕ್ಷೇತರನಾಗಿ ಸ್ಪರ್ಧಿಸಲೋ? ಕಾಂಗ್ರೆಸ್ ಕ್ಯಾಂಡಿಡೇಟಾಗಲೋ? ಅಥವಾ ಬಿಜೆಪಿ ಟಿಕೆಟ್‌ಗೆ ಕಟಿಪಿಟಿ ನಡೆಸಲೋ? ಎಂಬುದು ಅರ್ಥವಾಗದೇ ನಿದ್ದೆಗೆಡುತ್ತಿದ್ದಾನೆ. ಯಾವುದೇ ಸೈದ್ಧಾಂತಿಕ ಬದ್ಧತೆ, ಜನಪರ ಚಿಂತನೆ ಇಲ್ಲದ ಸೈಲ್ ಮೇಲೆ ಕ್ಷೇತ್ರದ ಬಹುಸಂಖ್ಯಾತ ಮೀನುಗಾರರೇ ಮುನಿದಿದ್ದಾರೆ. ದಿವಾಳಿಕೋರ ರಾಜಕಾರಣದ ಅಧಃಪತನಕ್ಕೆ ಬಿದ್ದಿರುವ ಸೈಲ್ ಅತ್ತ ಬಿಜೆಪಿಯ ಗಣಿಚೋರ ಜನಾರ್ದನ ರೆಡ್ಡಿ, ಕೇಂದ್ರ ರಸ್ತೆ ಮಂತ್ರಿ ನಿತಿನ್ ಗಡ್ಕರಿಯಂಥವರ ಸಖ್ಯ ಕುದುರಿಸುತ್ತಲೇ ಇತ್ತ ದೇಶಪಾಂಡೆ ವೈರಿಣಿ ಮ್ಯಾಗಿಯಜ್ಜಿಯ ಸೆರಗಿಡಿದು ಓಡಾಡುತ್ತಿದ್ದಾನೆ.

ದೇಶಪಾಂಡೆಗಷ್ಟೇ ಅಲ್ಲ, ಸ್ಥಳೀಯ ಹಳೆ ಕಾಂಗ್ರೆಸ್ ಕಿಂಗ್‌ಗಳಿಗೂ ಸೈಲ್ ಕಾಂಗ್ರೆಸ್ ಕ್ಯಾಂಡಿಡೇಟಾಗೋದು ಬೇಡವಾಗಿದೆ. ಬಿಜೆಪಿಯಲ್ಲಿ ಪಹರೆ ನಾಗನ ವಿರೋಧಿ ಗ್ಯಾಂಗ್ ಬಿಟ್ಟರೆ ಉಳಿದವರ್ಯಾರೂ ಸೈಲ್ ಆರೆಸ್ಸೆಸ್ ಚೆಡ್ಡಿ ತೊಡುವುದು ಸಹಿಸುವುದಿಲ್ಲ, ನಾಗರಾಜ್ ಜೋಶಿ-ಶೇಣ್ವಿಯಂಥ


ಗಂಗಾಧರ್ ಭಟ್

ಪರಮ ಚೆಡ್ಡಿ ಚತುರರಿಗೆ ಸೈಲ್‌ನ ಕಳ್ಳ ಗಂಟಿನ ಮೇಲೆ ಕಣ್ಣು. ಹೀಗಾಗಿ ಈ ಸಂಘಿಗಳು ಆತನನ್ನು ಕೇಂದ್ರ ಮಂತ್ರಿ ಗಡ್ಕರಿ ಬಳಿ ಕಳಿಸಿಕೊಟ್ಟಿದ್ದರು. ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ಯೋಜನೆಯ ಸಮಸ್ಯೆಗಳ ನೆಪ ಮಾಡಿಕೊಂಡು ನಾಗಪುರಕ್ಕೆ ಹೋಗಿದ್ದ ಸೈಲ್ ಅಲ್ಲಿ ಕೇಂದ್ರ ಸಾರಿಗೆ ಮಂತ್ರಿ ಗಡ್ಕರಿ ಕಾಲಿಗೆ ಬಿದ್ದು ಬಿಜೆಪಿ ಟಿಕೆಟ್ ಕೊಡುವಂತೆ ಕೇಳಿದ್ದೂ ಕಾರವಾರದಲ್ಲಿ ದೊಡ್ಡ ಸುದ್ದಿಯಾಗಿದೆ. ಗಡ್ಕರಿ "ನೋ... ನೋ... ಸಿಬಿಐ ಕೇಸ್ ಖುಲಾಸೆ ಆಗದೆ ಟಿಕೆಟ್ ಕೊಡಲಾಗದು..." ಎಂದುಬಿಟ್ಟಿದ್ದಾರೆ ಸೈಲ್‌ಗೆ.

ಈಗಾತನ ಸ್ಟ್ರೆಟಜಿ ಬದಲಾಗಿದೆ. ಕಾಂಗ್ರೆಸ್-ಬಿಜೆಪಿಯಲ್ಲಿನ ಲಿಂಕು-ಹಣ ಬಲ ಪ್ರಯೋಗಿಸಿ ಆ ಎರಡೂ ಪಾರ್ಟಿಯಿಂದ ದುರ್ಬಲ ಕ್ಯಾಂಡಿಡೇಟ್ ಕಣಕ್ಕೆ ಇಳಿವಂತೆ ಮಾಡಲು ಸೈಲ್ ಶತಾಯಗತಾಯ ಪ್ರಯತ್ನ ಮಾಡುತ್ತಿದ್ದಾನೆ. ಕಾಂಗ್ರೆಸ್ ಟಿಕೆಟ್‌ಗೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವೈಂಗಣಕರ್, ಮಾಧವ ನಾಯ್ಕ, ವ್ಯವಸ್ಥಿತ ಕಾರ್ಯಾಚರಣೆ ನಡೆಸಿದ್ದಾರೆ. ಆದರೆ ಸುರೇಂದ್ರ ನಾಯ್ಕ, ಎಂಬ ಟ್ರಾನ್ಸ್‌ಪೋರ್ಟ್ ಉದ್ಯಮಿಯೊಬ್ಬನ ಬಿಟ್ಟರೆ ಮತ್ಯಾರಿಗೂ ಜನ ಬೆಂಬಲ ಇಲ್ಲ, ಕಾರವಾರ-ಅಂಕೋಲಾದಲ್ಲಿ ನಿರ್ಣಾಯಕರಾದ ಕೋಮಾರಪಂಥ ಸಮುದಾಯದ ಸುರೇಂದ್ರ ನಾಯ್ಕ ಬಳಿ ಅಪಾರ ಹಣವಿದೆ. ಜನರೊಂದಿಗೆ ಬೆರೆವ ನಯ-ವಿನಯದ ಸಜ್ಜನಿಕೆಯೂ ಇದೆ. ಮ್ಯಾಗಿ ಬಂಟ ಅಶೋಕ್ ನಾಯ್ಕನ ಆತ್ಯಾಪ್ತನಾದ ಈ ಸುರೇಂದ್ರ ನಾಯ್ಕ ಕಾಂಗ್ರೆಸ್ ಕ್ಯಾಂಡಿಡೇಟಾದರೆ ಸೈಲ್ ಗೆಲ್ಲುವುದು ಸಾಧ್ಯವೇ ಇಲ್ಲ. ಬಿಜೆಪಿಯಿಂದ ಪಹರೆ ನಾಗ, ಗ್ಲಾಮರ್ ಪುಢಾರಿಣಿ ರೂಪಾಲಿ ನಾಯ್ಕ, ಚೆಡ್ಡಿ ಪರಿವಾರದ ನಯನಾ ನೀಲಾವರ್, ಮಾಜಿ ಶಾಸಕ ಗಂಗಾಧರ್ ಭಟ್... ಹೀಗೆ ಯಾರು ನಿಂತರೂ ಸುರೇಂದ್ರ ನಾಯ್ಕ‌ಗೆ ಸೆಡ್ಡು ಹೊಡೆಯಲು ಸಾಧ್ಯವೇ ಇಲ್ಲ. ಸುರೇಂದ್ರ ನಾಯ್ಕನ ಪ್ರಭಾವ ಕಂಡೇ ಆತನ ತಮ್ಮ ಗಣಪತಿ ನಾಯ್ಕನನ್ನು ಕಾರವಾರ ನಗರಸಭೆ ಅಧ್ಯಕ್ಷ ಮಾಡಿದ್ದಾನೆ ಸೈಲ್.

ಸುರೇಂದ್ರ ನಾಯ್ಕ ಎಲೆಕ್ಷನ್ ಅಖಾಡಕ್ಕೆ ಇಳಿಯಲಾರನೆಂಬ ಲೆಕ್ಕಾಚಾರ ಸೈಲ್‌ನದು. ಆತನ ತಮ್ಮನ ಟಿಎಂಸಿ ಅಧ್ಯಕ್ಷ ಮಾಡಿದ ಋಣಕ್ಕಾಗಿ ತನಗೇ ಬೆಂಬಲಿಸುತ್ತಾನೆಂದು ಭಾವಿಸಿದ್ದಾನೆ ಸೈಲ್. ಆದರೆ ಕಾಂಗ್ರೆಸ್ ಟಿಕೆಟ್ ಹಂಚಿಕೆಯಲ್ಲಿ ಮ್ಯಾಗಿ ಮಾತು ನಡೆದರೆ ಸುರೇಂದ್ರ ನಾಯ್ಕ ಕ್ಯಾಂಡಿಡೇಟಾಗೋದು ಗ್ಯಾರಂಟಿ. ಇದೆಲ್ಲ ಅರ್ಥವಾಗದ ಸೈಲ್ ಬಿಜೆಪಿ ಟಿಕೆಟ್ ಪಂದ್ಯಾಟದತ್ತ ಮಾತ್ರ ಗಮನ ಹರಿಸಿದ್ದಾನೆ. ಆತ ಬಿಜೆಪಿಯಲ್ಲಿ ಹೆದರೋದು ಮಾಜಿ ತಾಪಂ ಅಧ್ಯಕ್ಷೆ ರೂಪಾಲಿ ನಾಯ್ಕ ಎಂಬ 'ಆಕರ್ಷಕ ವ್ಯಕ್ತಿತ್ವ' ಮಹಿಳೆಯೊಬ್ಬಳಿಗೇ. ಈ ರೂಪಾಲಿ ನಾಯ್ಕ ಒಬ್ಬಳು ಮಾತ್ರ ಬಿಜೆಪಿ ಕ್ಯಾಂಡಿಡೇಟಾಗದಿದ್ದರೆ ಸಾಕೆಂದು ಕಳೆದೊಂದು ವರ್ಷದಿಂದ ದೇವರಲ್ಲಿ ಬೇಡಿಕೊಳ್ಳುತ್ತ ಬಂದಿದ್ದ ಸೈಲ್‌ಗೆ ಮೊನ್ನೆ ಯಡ್ಡಿ ಮಹಾತ್ಮ ಕಾರವಾರಕ್ಕೆ ಬಂದುಹೋದನಂತರ ಹಗಲಲ್ಲೂ ಆಕೆಯದೇ ದುಃಸ್ವಪ್ನ ಕಾಣತೊಡಗಿದೆ! ಯಡ್ಡಿ ಕಾರವಾರಕ್ಕೆ ಬಂದಾಗ ಬಿಜೆಪಿ ಟಿಕೆಟ್ ಆಕಾಂಕ್ಷಿಗಳಾದ ಪಹರೆ ನಾಗ, ನಯನಾ ನೀಲಾವರ್, ಮಾಜಿ ಶಾಸಕ ಗಂಗಾಧರ ಭಟ್ ಮುಂತಾದವರನ್ನು ಬದಿಗೆ ಸರಿಸಿ ಮಿಂಚಿದ್ದು ಈ ರೂಪಾಲಿ ಮಾತ್ರ!! ಸುಮಾರು ಹದಿನೈದು ಲಕ್ಷ ತನ್ನ ವ್ಯಾನಿಟಿ ಬ್ಯಾಗಿಂದ ತೆಗೆದು ಯಡ್ಡಿ ಫಂಕ್ಷನ್ ತಯಾರಿ ಮಾಡಿರುವ ರೂಪಾಲಿಯೇ ಬಿಜೆಪಿ ಹಿರಿಯರ ಫೇವರಿಟ್ ಕ್ಯಾಂಡಿಡೇಟ್ ಎಂಬ ಸಂದೇಶ ರವಾನೆ ಆಗಿದೆ. ಇದು ಸೈಲ್‌ಗೂ ಪಕ್ಕಾಗಿದೆ.


ಬಿಜೆಪಿ ನಡೆಸಿದ ಒಂದು ಕಚ್ಚಾ ಆಂತರಿಕ ಸರ್ವೆಯಲ್ಲಿ ರೂಪಾಲಿ ನಾಯ್ಕ ನಂಬರ್ ಒನ್ ಸ್ಥಾನದಲ್ಲಿದ್ದಾರೆ. ಆನಂತರ ನಿಂತಿರುವುದು ನಗರಸಭೆಯ ಮಾಜಿ ಅಧ್ಯಕ್ಷನೂ-ಆನಂದ ಅಸ್ನೋಟಿಕರ್‌ಗೆ ಬಂದರು ದಂಧೆ ವಿದ್ಯೆ ಕಲಿಸಿದ ಗುರುವೂ ಆಗಿರುವ ಗಣಪತಿ ಉಳ್ವೇಕರ್. ಸಂಘ ಪರಿವಾರದಲ್ಲಿ ಅದೃಶ್ಯ ಆಶ್ರಯದಾತರಿರುವ ನಗರಸಭೆ ಮಾಜಿ ಸದಸ್ಯ ನಯನಾ ನೀಲಾವರ್ ಕೂಡ ಈ ಸರ್ವೆಯಲ್ಲಿ ಪೈಪೋಟಿ ನೀಡಿದ್ದಾರೆ. ಆದರೆ ಪಹರೆ ನಾಗ ಮತ್ತು ಮಾಜಿ ಶಾಸಕ ಗಂಗಾಧರ ಭಟ್ ಎಂಬ ಸೊನಗಾರ ಶ್ರೇಷ್ಠ ಮುಗ್ಗರಿಸಿ ಮಕಾಡೆ ಮಲಗಿದ್ದಾರೆ. ಉಳ್ವೇಕರ್ ಮೀನುಗಾರ ಮುಖಂಡ. ನಿಷ್ಠಾವಂತ ಬಿಜೆಪಿಗ. ಆದರೆ ಈತನ ಬಗ್ಗೆ ಪುರೋಹಿತಶಾಹಿ


ನಯನಾ

ಮನಸ್ಥಿತಿಯ ಚೆಡ್ಡಿ ಪರಿವಾರಕ್ಕೆ ತಾತ್ಸಾರ. ಈತ ಶಾಸಕ ಕಾಗೇರಿ ಮಾಣಿ ಶಿಷ್ಯನೆಂಬ ಬೇಸರ ಸಂಸದ ಅನಂತ್ಮಾಣಿಗೆ. ಆದರೆ ಒಂದಂತೂ ಖರೆ. ರೂಪಾಲಿ ಬಿಟ್ಟರೆ ಬಿಜೆಪಿ ಮಾನ ಉಳಿಸುವ ಶಕ್ತಿಯಿರುವುದು ಈ ಉಳ್ವೇಕರ್ ಒಬ್ಬನಿಗಷ್ಟೇ. ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಹರಕೆ ಕುರಿಯಾಗಿಸಿ ಉಳ್ವೇಕರ್‌ಗೆ ಬಿಜೆಪಿ ಭೂಪರು ಮಾಡಿದ ಅನ್ಯಾಯಕ್ಕೆ ಪ್ರಾಯಶ್ಚಿತ್ತವಾಗಿ ಅಸೆಂಬ್ಲಿ ಟಿಕೆಟ್ ಸಿಗುತ್ತೆಂಬ ವಾದ ಬಿಜೆಪಿ ಬಿಡಾರದಲ್ಲಿ ಚಾಲ್ತಿಯಲ್ಲಿದೆ.

ಕಾರವಾರದ ಸುಪ್ರಸಿದ್ಧ ಮೀನೂಟದ ಹೊಟೇಲ್ 'ಅಮೃತ'ದ ಒಡೆಯನ ಹೆಂಡತಿ ನಯನಾ ನೀಲಾವರ್ ಸಂಘಿಗಳ ಅಚ್ಚುಮೆಚ್ಚಿನ ಅಭ್ಯರ್ಥಿ. ಈಕೆಯ ಅಣ್ಣ ಕೊಲ್ಹಾಪುರದಲ್ಲಿ ಆರ್‌ಎಸ್‌ಎಸ್‌ನ ಪ್ರಚಾರಕ. ನಾಗಪುರದ ಚೆಡ್ಡಿ ಹೆಡ್‌ಕ್ವಾಟ್ರರ್ಸ್‌ನಲ್ಲಿ ತೂಕದಾರನಾಗಿರುವ ಈತ ತಂಗಿಗೆ ಕಾರವಾರ ಕ್ಯಾಂಡಿಡೇಟ್ ಮಾಡುವ ತಂತ್ರಗಾರಿಕೆ ಹೆಣೆದಿದ್ದಾನೆ. ಕಾರವಾರದ ಅರಬ್ಬೀ ಸಮುದ್ರದ ನಡುವಿನ ದ್ವೀಪದಲ್ಲಿ ರೆಸಾರ್ಟ್ ನಡೆಸುವ ನೀಲಾವರ್ ಫ್ಯಾಮಿಲಿ ಹಲವು ಬಾರ್, ಹೊಟೇಲ್ ಉದ್ಯಮದಲ್ಲಿ ತೊಡಗಿದ್ದಾರೆ. ಜತೆಗೆ ಬಂಗಾರದ ಆಭರಣ ದಂಧೆಯೂ ಮಾಡುವ ನೀಲಾವರ್ ಕುಟುಂಬ ಕಮ್ಮಿಯೆಂದರೂ 200 ಕೋಟಿಗೆ ತೂಗುತ್ತದೆ. ಇಂಥ ಕ್ಯಾಂಡಿಡೇಟ್ ಬಿಜೆಪಿಯಿಂದ ನಿಂತರೆ ಸೈಲ್‌ನ ಕಳ್ಳ ಅದಿರು ದಂಧೆಯ ಕೋಟಿಗಳು ಲೆಕ್ಕಕ್ಕೇ ಬರಲಾರದು.

ದೈವಜ್ಞ ಬ್ರಾಹ್ಮಣ (ಸೊನಗಾರ) ಸಮುದಾಯದ ನಯನಾಗೆ ಟಿಕೆಟ್ ಕೊಡೋದಾದರೆ ಅದೇ ಜಾತಿಗೆ ಸೇರಿದ ತಾವೇನು ಕಮ್ಮಿ ಎನ್ನುತ್ತಿದ್ದಾರೆ ಮಾಜಿ ಶಾಸಕ ಗಂಗಾಧರ ಭಟ್ ಮತ್ತು ರಾಮು ರಾಯ್ಕರ್ ಎಂಬ ಚಿನ್ನದ ದಂಧೆದಾರರು. ಈ ಗಂಗಾಧರ ಭಟ್ ತನಗೇ ಅರಿವಿಲ್ಲದಂತೆ ಆಕಸ್ಮಿಕವಾಗಿ ಒಮ್ಮೆ ಎಮ್ಮೆಲ್ಲೆಯಾಗಿದ್ದಾತ. ಅಂದು ಮ್ಯಾಗಿ ವಿರೋಧಿ ಬಣದಲ್ಲಿದ್ದ ಆನಂದ ಅಸ್ನೋಟಿಕರ್ ಕಾಂಗ್ರೆಸ್ ಕ್ಯಾಂಡಿಡೇಟ್ ಅಶೋಕ್ ನಾಯ್ಕ ಎಂಬ ತನ್ನ ಆಜನ್ಮ ಶತ್ರುವನ್ನು ಸೋಲಿಸಬೇಕೆಂಬ ಹಠಕ್ಕೆ ಬಿದ್ದು ಮಾಡಿದ ಕುತಂತ್ರದ ಫಲವಾಗಿ ಗಂಗಾಧರ ಭಟ್‌ಗೆ ಅಸೆಂಬ್ಲಿ ಭಾಗ್ಯ ಬಂದಿತ್ತು. ಈತನಿಗೆ ಸೊನಗಾರರ ನಡುವೆಯೇ ಕಿಮ್ಮತ್ತಿಲ್ಲ. ಗಂಗಾಧರ್ ಭಟ್‌ಗಿಂತ ತಾನೆ ಸಮರ್ಥ ಹುರಿಯಾಳೆಂದು ಬಿಂಬಿಸಿಕೊಳ್ಳುತ್ತಿರುವ ರಾಮು ರಾಯ್ಕರ್ ಇತಿಹಾಸ-


ಸತೀಶ್ ಸೈಲ್

ಭೂಗೋಳ ರೋಚಕವಾಗಿದೆ. ಯಡ್ಡಿಯ ಶಿಮ... ಲಾಬಿಗೆ ಜೋತುಬಿದ್ದಿರುವ ಈ ಜನಿವಾರ ಹಾಕಿ... ಮೀನು ತಿನ್ನುವ ದೈವಜ್ಞ 'ಬ್ರಾಹ್ಮಣ' ಜಿಲ್ಲಾ... ಹಿಂದುಳಿದ ವರ್ಗದ ಮಹಾಮಹಿ... ಅವತರಿಸಿರುವುದೇ ದೊಡ್ಡ ಜೋಕು. ಯಡ್ಡಿ... ರಾಘುನಿಗೆ ಆಗಾಗ ಉದ್ದಂಡ ನಮಸ್ಕಾರ ಹಾಕುವ... ಅದೇ ತನಗೆ ಬಿಜೆಪಿ ಟಿಕೆಟ್ ಕೊಡಿಸುತ್ತದೆಂದು ನ...

ಆರು ತಿಂಗಳ ಹಿಂದೆ ತಾನೇ ಬಿಜೆಪಿ ... ಎಂಬಂತೆ ತುಂಡುಗುಪ್ಪಳ ಹೊಡೆಯುತ್ತಿದ್ದ ಪಹ... ಈಗ ಥಂಡ ಹೊಡೆದಿದ್ದಾನೆ. ಷಡ್ತಿ ಸಮಾಜದ... ಕ್ರಿಶ್ಚಿಯನ್ ಸಮುದಾಯದ ತಾಯಿಯ ಮಗಳಾದ ... ದಿನಗಳೆದಂತೆ ಬಿಜೆಪಿಯಲ್ಲಿ ಅಭ್ಯರ್ಥಿ... ಹೊರಹೊಮ್ಮುತ್ತಿರುವ ಪರಿಗೆ ಪಹರೆ... ಕಕ್ಕಾಬಿಕ್ಕಿಯಾಗಿದ್ದಾನೆ. ಆಕೆಯ ಗಂಡ ಬಹುಸ... ಕೊಂಕಣ ಮರಾಠ ಜಾತಿಗೆ ಸೇರಿದಾತ... ಮೂರು ಪ್ರಭಾವಿ ಜಾತಿಗಳ ನಂ... ರೂಪಾಲಿ ಗೆಲ್ಲುವ ಹುರಿಯಾಳೆಂಬುದು ದೊಡ್ಡವರ ಲೆಕ್ಕಾಚಾರ. ಲೋಕಸಭಾ ... ಒಂದರಂತೆ ಮಹಿಳಾ ಅಭ್ಯರ್ಥಿ ಕಣಕ್ಕೆ... ಬಿಜೆಪಿ ನಿಯಮವೂ ರೂಪಾಲಿ ಪರ... ಇದೆ. ಇದೆಲ್ಲ ಬೆಳವಣಿಗೆ ಪಹರೆ ... ಹತಾಶನಾಗಿಸಿಬಿಟ್ಟಿದೆ. ಬಿಜೆಪಿ ಸೇರಿ ಕೆಲ... ಹಳಹಳಿಕೆಯಲ್ಲಿರುವ ಪಹರೆ ನಾಗ ಕಳೆದ ... ಚುನಾವಣೆ ಹೊತ್ತಲ್ಲಿ ಕಾಂಗ್ರೆಸ್ ಕ್ಯಾಂಡಿಡೇ... ಸ್ವ-ಜಾತಿ ಬಂಧು ರಮಾನಂದ ನಾ... ಕಾರವಾರ ತಾಲ್ಲೂಕಿನ ಮ್ಯಾನೇಜರ್ ಆ... ಈತನ ಉಸ್ತುವಾರಿಯಲ್ಲಿ ಕಾಂ... ಕಾರವಾರದಲ್ಲಿ ಬಂದಿದ್ದು ಕೇವಲ 1451... ಈ ಸಾಧನೆಯೇ ಬಿಜೆಪಿಯ ಟಿಕೆಟ್ ಪ್ರತಿಸ್ಪ... ಈಗ ಅಸ್ತ್ರವಾಗಿದೆ. ಬಿಜೆಪಿ ಆಂತರಿಕ ಸಮೀಕ್ಷ... ಈ ಅಂಶ ಪರಿಗಣನೆಗೆ ಬಂದಿದೆಯಂತೆ!!

ತನಗೆ ಬಿಜೆಪಿ ಟಿಕೆಟ್ ಸಿಗಲಾರದೆಂಬುದು ... ನಾಗನಿಗೆ ಪಕ್ಕಾ ಆಗಿದೆ. ಹಾಗಂತ ಕೈಕಟ್ಟಿ ... ಪೈಕಿಯೂ ಆತನಲ್ಲ. ಟಿಕೆಟ್ ಆಸೆಯಿಂದ ಇ... ಹೂಡಿದ ಹಣದ ಉರಿ ಆತನನ್ನು ಟಿಕೆಟ್ ಪ್ರಯ... ಹಿಂದೆ ಸರಿಯಲು ಬಿಡುತ್ತಿಲ್ಲ. ಯಡ್ಡಿಯ ಸ... ಮಗ ಸಿದ್ದಲಿಂಗಸ್ವಾಮಿ ಮತ್ತು ಕಾರವಾರದಲ್ಲಿ ... ನಿವೃತ್ತನಾಗಿರುವ ಲಿಂಗಧಾರಿ ಒಬ್ಬರ ಮೂಲಕ... ನಾಗ ಟಿಕೆಟ್ ಕಟಿಪಿಟಿ ಮಾಡುತ್ತಿದ್ದಾನೆ. ಕಾರ... ನ್ಯಾಯಾಧೀಶನಾಗಿದ್ದಾಗ ಸದ್ರಿ 'ಲಿಂಗವಂತನ' ಸಂಗ... ಕುದುರಿಸಿಕೊಂಡಿದ್ದ ನಾಗ ಆತ ಯಡ್ಡಿ ಸಿಎಂ ... ವಿಧಾನಸೌಧದ ಕಾನೂನು ವಿಭಾಗದಲ್ಲಿ ... ಹಿಡಿದುಕೊಂಡಾಗಲೂ ದೋಸ್ತಿ ಇಟ್ಟುಕೊಂಡಿದ್ದ... ನಗದಾಗುವ ಆಸೆಯಲ್ಲಿದ್ದಾನೆ ಪಹರೆ ನಾಗ.


ಚುನಾವಣೆಗೆ ಒಂದು ವರ್ಷ ಇರುವಾಗಲೇ ಕಾ... ಖಾಲಿಬರಡು ರಾಜಕಾರಣ ಕೆಟ್ಟು ಖರಾಬಾಗಿ ... ಚುನಾವಣೆ ಹತ್ತಿರತ್ತಿರ ಬಂದಾಗ ಹಣ-ಗ್ಲಾಮರ್ ... ರೋಚಕ ರಂಗೇರೋದು ಗ್ಯಾರಂಟಿ. ಬಿಜೆಪಿ ರಣೋತ್ಸಾ... ಶಾಸಕ ಸೈಲ್ ಸೋಗಲಾಡಿ ಸರ್ಕಸ್‌ನಲ್ಲಿದ್ದಾನೆ. ಕಾಂಗ್ರೆಸ್... ಆಗಿದೆ. ಆದರೂ ಕಾಂಗ್ರೆಸಿಗರು ಪಕ್ಷ ನಿಷ್ಠೆನಿಯತ್ತು ಬಿ... ಸುರೇಂದ್ರ ನಾಯ್ಕ ಎಂಬ ಕಳಂಕರಹಿತನಿಗೆ ಕ್ಯಾ... ಮಾಡಿದ್ದೇ ಆದರೆ ಎದುರಾಳಿಗಳು ಮಣ್ಣು ಮುಕ್ಕ... ಯಾವ ಅನುಮಾನವೂ ಇಲ್ಲ.

ಇದು ಕಾರವಾರ-ಅಂಕೋಲೆಯ ಜನರ ಪ್ರಾ... ವ್ಯಾಮೋಹಗಳಿಲ್ಲದ ಸರ್ವೆ!!

ಸಿದ್ದು-ಪರಮ್‌ಗೆ ಇದು ಗೊತ್ತಾ?!

■ ವರ...

ಪ್ಲಾಸ್ಟಿಕ್ ಅಕ್ಕಿ ಮೊಟ್ಟೆ ಸುದ್ದಿಯಿಂದೆ ಯಾರವ್ರುರೆ ಗೊತ್ತೆ?



• ಬಿ.ಚಂದ್ರೇಗೌಡ

ಕಟ್ಟೆಪುರಾಣ

ಮುಗಿಲು ಊದಿಕೊಂಡಿತ್ತೇ ಹೊರತು ಮಳೆಯ ಸೊಲ್ಲೇ ಇರಲಿಲ್ಲ. ಆದರೂ ಎಲ್ಲರೂ ಭರವಸೆಯ ಮುಖ ಹೊತ್ತು ಕುಳಿತಿದ್ದರು. ಆಗ ವಾಟಿಸ್ಸೆ,

"ಮಿಸ್ಟರ್ ಜಯರಾಂ, ಸುಗರಲ್ಲಿ ಪ್ಲಾಸ್ಟಿಕ್ ಪುಡಿ ಇದ್ದಂತೆ. ನೀನೇನಾರ ನೋಡಿದ್ದಿಯಾ?" ಎಂದ.

"ಅದ್ಯಂಗಿರತದೊ ಅಂತ ಇವತ್ತಿಗೂ ನೋಡಿಲ್ಲ" ಎಂದ ಜಯರಾಮ.

"ಜುಮ್ಮಕ್ಕ, ನೀನು ಮಾಡೊ ಅನ್ನದಲ್ಲಿ ಪ್ಲಾಸ್ಟಿಕ್ ರೈಸ್ ಇತ್ತೆ?"

"ಯಾರ್ಯಾರೊ ಅಂಗಂತರಪ್ಪ, ನಾನಂತೂ ನೋಡಿಲ್ಲ"

"ಸೊಸೈಟಿ ಅಕ್ಕಿಲಿ ಇದ್ದತಂತೆ ಕಂಡ್ಯ" ಎಂದ ಸೀರ.

"ಇದ್ದತಂತೆ ಅನ್ನಬ್ಯಾಡ ಚಿಗಪ್ಪ, ನೀನು ಅನ್ನಭಾಗ್ಯದ ಅಕ್ಕಿನೆ ಉಣತಾ ಇರದು. ನಿನಿಗೆ ಗೊತ್ತಾಗಲಿಲವೆ?"

"ಅವುನಿಗ್ಯಂಗ್ನ ಗೊತ್ತಾದತೂ. ಅವುನೆದ್ದಿ ಬೇಸ್ಯಾಕ್ತಳೆ. ಇವುನು ಉಂಡುಬುಟ್ಟು ಬತ್ತನೆ" ಎಂದಳು ಜುಮ್ಮಿ.

"ಅದ್ರು ನೋಡಕ್ಕ, ಸೊಸೈಟಿ ಅಕ್ಕಿಲಿ ಪ್ಲಾಸ್ಟಿಕ್ ಅಕ್ಕಿ ಇದ್ದಂತೆ ಅಂತ ಹೇಳ್ತನೆ ಚಿಗಪ್ಪ, ಇಂತ ಜನಗಳಿಂದ್ಲೆ ಇವತ್ತು ಹಿಂಗಾಗಿರದು" ಎಂದ ವಾಟಿಸ್ಸೆ.

"ಸೀರಣ್ಣಂದು ಇರ್ಲಿ ಕಣೊ. ಅವುಳ್ಯಾರೊ ಮಳವಳ್ಳಿ ಕಡಿಯೋಳು ಟೀವಿಲಿ ಕಾಣಿಸಿಗಂಡು 'ಮದ್ಲು ನಾನು ನೋಡಿದೆ. ಅಕ್ಕಿವಳಿಗೆ ಪ್ಲಾಸ್ಟಿಕ್ ಇತ್ತು, ಮಟ್ಟೆನೂ ಪ್ಲಾಸ್ಟಿಕ್ನವಾಗಿದ್ದೊ' ಅಂದ್ಲು, ಅವುಳ ಮುಂದೆ ಟಿ.ವಿಯೋರು ಪರೀಕ್ಷೆ ಮಾಡಿ ಸುಳ್ಳು ಅನ್ನದ ಸಾಬೀತುಮಾಡಿದ್ರು. ಆಗವುಳೂ ಒಪ್ಪಿಗಂಡೋಗಿದ್ಲು, ಆದ್ರೆ ತಿರಗ ಇನ್ನೊಂದು ಟಿ.ವಿಯೋರು ಕರದಾಗ 'ಪ್ಲಾಸ್ಟಿಕ್ ಅಕ್ಕಿ, ಮೊಟ್ಟೆ ನಿಜ. ನನ್ನತ್ರ ಇದ್ದ ಇಪ್ಪತ್ತನಾಕು ಮಟ್ಟೆಲಿ ಇಪ್ಪತ್ತು ಹಾಳಾಗಿದ್ದೊ' ಅಂದ್ಲು, ಇದಕೇನೇಳ್ತಿ?" ಎಂದ ಉಗ್ರಿ.

"ಹೇಳದೇನೊ, ಅಂಥೋರಿಂದ ಹಿಂಗಾಗಿರದು. ಜನ ಯಾವುದ್ನು ಸುಲಭಕ್ಕೆ ಒಪ್ಪಿಗತ್ತಾಯಿಲ್ಲ, ಅನುಮಾನನೆ ನಿಜ ಅನ್ನಕಂಡು ಕುಂತವೆ."

"ಉಂಡೇಟಿಗೆ ಮಟ್ಟೆನವ್ನ ಬತ್ತದೆ ಅಂತರಲ್ಲ" ಎಂದಳು ಜುಮ್ಮಿ.

"ಬತ್ತದೆ ಕಣಕ್ಕ, ಬತ್ತದೆ. ನೀನಂಗೇ ನೋಡಿದ್ರೆ ಯಾರೂ ಹೆಲ್ತಿಯಾಗಿಲ್ಲ, ಪ್ರೈವೇಟ್ ಮತ್ತೆ ಸರಕಾರಿ ಆಸುಪತ್ರೆಗೆ ಹೋಗಿ ನೋಡಿದ್ರೆ ಗೊತ್ತಾಯ್ತದೆ. ಈ ದೇಶದಲ್ಲಿ ಪ್ರಧಾನಿಯಿಂದ ಹಿಡದು ಪರಿಚಾರಕನಗಂಟ ಯಲ್ಲ ಮಾತ್ರೆ ನುಂಗತಾ ಅವುರೆ. ಅಂತಾದ್ದರಲ್ಲಿ ನೀನ್ಯಾವುದೇ ಕಾಯಿಲೆ ಹೇಳು, ನನಿಗೂ ಇರಬವುದೇನೊ ಅಂತ ತಿಳಕತ್ತರೆ. ಅಂಗೆ ಪ್ಲಾಸ್ಟಿಕ್ ಅಕ್ಕಿ ಬಂದವೆ ಅಂದ್ರು ಸಾಕು. ಅನ್ನ ಉಣ್ಣೊ ಯೂಸ್‌ಲೆಸ್ ಫೆಲೋಗಳ್ಯಲ್ಲ ನನಿಗೂ ಮಟ್ಟೆನೋವು ಅಂತವೆ. ಯಾಕಂದ್ರೆ ಸುಳ್ಳು ಸುದ್ದಿಗೆ ಸುಳ್ಳು ಕಾಯಿಲೆ ಹರಡೊ ಶಕ್ತಿನೂ ಇರತದೆ ಕಣಕ್ಕ, ಅಂತದೇ ಈ ಮಟ್ಟೆನೋವು" ಎಂದ ವಾಟಿಸ್ಸೆ.

"ಅಂಗರಿದು ಸುಳ್ಳು ಸುದ್ದಿನೆ?"

"ಊ ಕಣಕ್ಕ, ನೀನು ಇದೇ ಸೊಸೈಟಿಲಿ ಅಕ್ಕಿ ತಗಂಡೆ. ನೀನು ತಗಳಂಗಿಲ್ಲ, ಓನ್ಲಿ ಬಿಪಿಎಲ್ ಕಾರ್ಡಿನೋರು ಮಾತ್ರ ತಗಬೇಕು. ಅದ್ರು ತಗಂಡೆ. ಯಾಕೆ ತಗಂಡೆ ಹೇಳು?"

"ಚನ್ನಾಗಿದ್ವೋ ತಗಂಡೆ."

"ಈಟಿಗೆ ಸೊಸೈಟಿಗೆ ಚನ್ನಾಗಿರೊ ಅಕ್ಕಿ ಬತ್ತಾ ಅವೆ. ಯಾಕಂದ್ರೆ ಇದು ಕಡೆ ವರ್ಸ. ಯಲಕ್ಷನ್ ಬತ್ತಾ ಅದೆ. ಅದ್ಕೆ ಸಿದ್ದರಾಮಯ್ಯನ ಸರಕಾರ ವಳ್ಳೆ ಅಕ್ಕಿ ಸರಬರಾಜು ಮಾಡ್ತ ಅದೆ. ಎಷ್ಟೇ ಪಾಲ್ಸಿಗಳಿದ್ರು ಇದೊಂದು ಕಾರ್ಯಕ್ರಮ ಮಾತ್ರ ಸಿದ್ದರಾಮಯ್ಯನಿಗೆ ಅನ್ನದಾತ ಅನ್ನೊ ಹೆಸುರು ತಂದದೆ. ಇದು ಸಕ್ಸಸ್ ಆದ್ರೆ ಸರಕಾರಕ್ಕೆ ವಳ್ಳೆ ಹೆಸರು ಬತ್ತದೆ. ಅಲವೇನಕ್ಕ?"

"ಅದೇನೊ ನಿಜ ಕಂಡ್ಯ. ಬೆಂಗಳೂರಲ್ಲಿರೋರು ಅಕ್ಕಿ



ಕೊಡೊ ಟೈಮಿಗೆ, ಮದುವೆ ಅಟ್ಟಿ ತಕ್ಕೆ ಹಸದೋರು ಬಂದಂಗೆ ಸೊಸೈಟ್ಟಿತ್ರ ಬಂದು ನಿಂತಗತ್ತರೆ, ತಗಂಡೋಯ್ತರೆ."

"ಅವುರದಿರಲಿ ಕಣಕ್ಕ, ಅಕ್ಕಿ ಕೊಡೋ ಸೊಸೈಟಿ ಹತ್ರಕ್ಕೆ ಕನಿಷ್ಠ ಇಪ್ಪತ್ತರಿಂದ ಮೂವತ್ತು ಬೈಕು ಬಂದು ನಿಂತಗತ್ತವೆ. ಪರೆಡ್ ಏಳು ಕೆ.ಜಿ. ಅಕ್ಕಿಯಂಗೆ ಇಪ್ಪತ್ತೆಂಟು ಕೆಜಿ ಅಕ್ಕಿ ತಗಂಡೋಗೊ ಬೈಕ್ ಬತ್ತವೆ. ಅಂದ್ರೆ ಬೈಕು, ಸ್ಕೂಟ್ರು, ಗಾಡಿ ಮಡಗಿರೋರು ಕೂಡ ಅನ್ನಭಾಗ್ಯದ ಫಲಾನುಭವಿಗಳಾಗ್ಯವುರೆ."

"ಅದೇನೊ ನಿಜ ಬುಡು."

"ಅಂದ್ರೆ ಸಾಮಾಜಿಕವಾಗಿ ಶ್ರೀಮಂತ್ರ ಅನ್ನಕಳೋರು ಅಕ್ಕಿ ವಿಷಯದಲ್ಲಿ ಕೈಯೊಡ್ಡತರೆ. ಇಂತದೊಂದು ಕಾರ್ಯಕ್ರಮನ ಹಾಳು ಮಾಡಕ್ಕೆ ಅಂತರಜಾಲದಲ್ಲಿ ಯಾರ ಕಣ್ಣಿಗೂ ಕಾಣದಂಗಿರೊ ಪುರೋಹಿತರ ಪಿಂಡಗಳು ಇಂತ ಸುದ್ದಿಯ ಹಬ್ಬಿಸಿಬುಟ್ಟವುರೆ ಕಣಕ್ಕ, ಆಗ ಗಣೇಶನಿಗೆ ಹಾಲು ಕುಡಿಸಿದ್ದೊರು ಇವ್ರುರೆಯ."

"ಅಯ್ಯೋ ಅವುರ ಮನಿಯಾಳಾಗ. ಅವುರಿಗೇನು ಬತ್ತ?"

"ಈ ಸರಕಾರ ನಮಿಗೆ ಇಲ್ಲಿಗಂಟ ಪ್ಲಾಸ್ಟಿಕ್ ಅಕ್ಕಿ ತಿನ್ನಿಸ್ಯದೆ ಅಂತ ಬಡವರು ಸಿಟ್ಟಾಗಿ ಬಜೆಪಿಗೆ ಓಟಾಕ್ತರೆ. ಅದ್ಕೆ ಅಂತ ಸುಳ್ಳು ಸುದ್ದಿಯ ಹಬ್ಬಿಸಿ ಪೇಪರು, ಟಿವಿ ಮುಂದೆ ಮಕ್ಕಳ್ಯಲ್ಲ ಹಗಲೂ ರಾತ್ರಿ ಹರದು ಬಿಸಾಕಿದ್ರು ಕಣಕ್ಕ."

"ಅವುರ್ಯಾರು ತೋರ್ಸ, ಬರ್ಲಲ್ಲೆ ವಡದು ಮಕ್ಕುಗಿತಿನಿ."

"ಕಾಣಲ್ಲ ಕಣಕ್ಕ, ಅವುರು ಆಗೋಚರವಾಗಿರತರೆ. ಅದೆ ಸಮಸ್ಯೆ ಇಲ್ಲ ಅಂದ್ರೆ ನಿನ್ನ ಕೈಲೆ ಅವುರಿಗೆ ಕೊಳೆತ ಮಟ್ಟೆಲೆ ವಡುಸ್ತಿದ್ದೆ."

"ಕೋಳಿಮಟ್ಟೆನೂ ಪ್ಲಾಸ್ಟಿಕ್ ಬಂದವಂತೆ ಕಂಡ್ಯಾ."

"ಇದೂ ಅಂತದೇ ಸುದ್ದಿ ಕಣಕ್ಕಾ, ಸಾವುರಾರುಪಾಯಿ ಖರ್ಚು ಮಾಡಿದ್ರು ಒಂದು ಕೋಳಿ ಮಟ್ಟೆ ತಯಾರಿಸಕ್ಕಾಗ ದಿಲವಂತೆ. ಅಂತದ್ರಲ್ಲಿ ಪ್ಲಾಸ್ಟಿಕ್ ಮಟ್ಟೆ ಬಂದವೆ ಅಂದ್ರೂ ಈ ಜನ ಕೆಟ್ಟೋಗಿರೊ ಮಟ್ಟೆನ್ಯಲ್ಲ ವಡುದು ನಿಜ ಅಂದೇ ಬುಟ್ರು."

"ಜನ ಯೇಚನಾ ಸಗತಿನ ಕಳಕಂಡವುರೆ ಕಣೊ" ಎಂದ ಉಗ್ರಿ.

"ಅದು ಗೊತ್ತಾಗೆ ಅಲವೇನೊ ಬಿಜೆಪಿಗಳು ಸುಳ್ಳು ಸುದ್ದಿ ಮನೆಗೆ ಮಾಡಿಕಂಡು ಹಬ್ಬುಸ್ತಾಯಿರದು. ಸ್ಕೂಲುಡುಗರಿಗೆ ಕೋಳಿಮಟ್ಟೆ ಕೊಡ್ತಾಯಿರೊದ್ರಿಂದ ಮಕ್ಕಳು ಮನಸು, ಅವುರಪ್ಪ ಅವ್ವರೀರ ಮನಸ ಹಾಳು ಮಾಡಿದ್ರಾಯ್ತಲ್ಲ, ನಾಳೆ ಅವುರೆ ಸರಕಾರದ ವಿರುದ್ಧ ತಿರುಗಿ ಬೀಳ್ತರೆ. ಅದ್ಕೆ ಕೋಳಿ ಮಟ್ಟೆನೆ ಪ್ಲಾಸ್ಟಿಕ್ ಅಂದುಬುಟ್ರುತ್ತ" ಎಂದ ವಾಟಿಸ್ಸೆ.

ತುಂಬ ಗಾಢವಾಗಿ ಕುಳಿತಿದ್ದ ಕಾಳಮಾವ,

"ಏನೀ ಬಿಜೆಪಿಗಳು ಹಿಂಗಾದರಲ್ಲಾ?" ಎಂದ.

"ಅವುರಿರದೆ ಅಂಗಲವೆ ದೊಡಪ್ಪ, ಆಗದೆಲ್ಲಿ ಬತ್ತೂ"

"ಅಲ್ಲಾ ಕಂಡ್ಯ, ಪಾಂಡುಪುರದಲ್ಲಿ ಗಾಂಧಿಮಾತ್ಮನ ಕೊಂದ ಗೂಡುಸೆ ಹಬ್ಬ ಮಾಡಿದರಂತಲ್ಲಾ, ಎಲ್ಲಿಗೆ ಬತ್ತು ಕಾಲ" ಎಂದ ಸೀರ.

"ಮಾಡಿಕಂಡು ಹಾಳಾಗೋಗ್ಲಿ ಚಿಗಪ್ಪ, ಆದ್ರೆ ಗಾಂಧಿ ಕೊಂದೊನು ನೆಹರು, ಮೂರನೆ ಗುಂಡು ಎಲ್ಲಿಂದ ಬತ್ತು ಅಂತ ಅಂದವೆ. ಆ ಬಡ್ಡೆತ್ತವುಕೆ ಬಿಜೆಪಿಗಳೆ ಉತ್ತರ ಕೊಡಬೇಕು."

"ಅಂತವುಕ್ಯಲ್ಲ ಬಿಜೆಪಿಗಳು ಉತ್ತರ ಕೊಡದಿಲ್ಲ ಕಣೊ. ಅದೆ ಅಂಗನ್ನಿ ಅಂತ ಹೇಳಿ ಕಳಿಸಿರತವೆ" ಎಂದ ಉಗ್ರಿ.

"ರಾಜೀವಗಾಂಧಿ ಮಗ ಬಂದಿದ್ನಂತೆ. ಏನೇಳಿ ಹೋದುನ್ನ?" ಎಂದ ಸೀರ.

"ಯಲ್ಲ ವಗ್ಗಟ್ಟಾಗಿ ಹೋಗಿ ಅಂದವುನೆ ಚಿಗಪ್ಪ"

"ಸಿವುಕುಮಾರೇನೊ ಸಿಟ್ಟಾಗಿದ್ದನಂತೆ."

"ಸಿಟ್ಟಾಗ್ಯುವುನೆ. ಯಾಕಂದ್ರೆ ಈ ಸಿದ್ದರಾಮಯ್ಯ ಯಾಕೋ ದ್ಯಾವೇಗೌಡನ ಕಂಡ್ರ ಮ್ಯತ್ರಾಗಿದ್ದನಂತೆ. ಅದ್ಕೆ ಇವುನು ಶಡವಾಗ್ಯವುನೆ."

"ಎಡೂರಪ್ಪಾಕೊ ಮ್ಯತ್ರಾಗ್ಯವುನಲ್ಲ?"

"ಅವುನು ದಲಿತ್ರ ಮನಿಗೋಗಿ ಮಟ್ಟೆತುಂಬ ಉಂಡು ಸ್ವಲುಪ ಹೆಲ್ತ ಪ್ರಾಬ್ಲಮ್ಮಾಗ್ಯದಂತೆ."

"ಅದ್ಯಾಕ್ಲ ಅಂಗುಂಡ?"

"ಶೋಬಕ್ಕ ಎದಿರಿಗೆ ಕುಂತಗಂಡು ಇನ್ನೊಸಿ ಅನ್ನ ಹಾಕಿಸಿಗಳಿ, ಪಲ್ಯ ಹಾಕಿಸಿಗಳಿ ಅಂತ ಹುರಿದುಂಬಿಸಿ ಬುಟ್ಟವುಳೆ. ಇವುನು ಸರಿಯಾಗಿ ಬಾರಿಸಿ ಈಗ ಈಚಲಕಾಯಿ ತಿಂದ ಹ್ಯಾತನಂಗಾಗ್ಯವುನೆ. ಪಾಪ ಅವುಳಿಲ್ಲ."

"ಎಲ್ಲಿಗೋಗ್ಯವುಳೆ?"

"ಪಾರಿನ್ನಿಗೋಗ್ಯವುಳೆ. ಅವುಳು ಬರಗಂಟ ಇವುನು ಡಲ್ಲು ಕಣಕ್ಕ."

"!?" ■

---

03 ◀◀

ಆಗಿದ್ದರೂ ಆತ ನಿಗೂಢವಾಗಿ ತನ್ನ ಕುಟುಂಬ ಸಮೇತ ಅಮೆರಿಕಕ್ಕೆ ಪರಾರಿ ಆಗುತ್ತಾನೆ. ಅಲ್ಲಿ ಆತ ತನ್ನ ಹೆಸರನ್ನು ಬದಲಾಯಿಸಿಕೊಂಡು ಲಾರಿ ಓಡಿಸಿಕೊಂಡು ಜೀವನ ಸಾಗಿಸುತ್ತಿರುತ್ತಾನೆ. ಒಮ್ಮೆ ಆತ ತನ್ನ ಹೆಂಡತಿಯನ್ನು ಅಮಾನುಷವಾಗಿ ಬಡಿದಾಗ ಆಕೆ ಪೊಲೀಸರಿಗೆ ದೂರುತ್ತಾಳೆ. ವಿಚಾರಣೆ ವೇಳೆ ಆತನ ಅಸಲಿ ಬಣ್ಣ ಬಯಲಾಗುತ್ತದೆ. ಕೊಲೆಗಡುಕ ಅಮ್ರಿಕ್ ಸಿಂಗ್ ಅಮೆರಿಕದಲ್ಲಿ ವಾಸಿಸುತ್ತಿರುವುದು ಕಾಶ್ಮೀರದ ಜನಕ್ಕೂ, ಹೋರಾಟಗಾರರಿಗೂ ಗೊತ್ತಾಗುತ್ತದೆ. ಅವನ ಬೆನ್ನು ಹತ್ತುತ್ತಾರೆ. ಎಲ್ಲಿ ತನ್ನನ್ನು ಭಾರತದ ವಶಕ್ಕೆ ಕೊಡುತ್ತಾರೋ ಎಂದು ಹೆದರುವ ಅಮ್ರಿಕ್ ತನ್ನ ಹೆಂಡತಿ ಮತ್ತು ಮಕ್ಕಳನ್ನು ಕೊಂದು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

(ಅಮ್ರಿಕ್ ಸಿಂಗ್ ವೃತ್ತಾಂತ ಅರುಂಧತಿ ರಾಯ್ ಅವರ ಕಲ್ಪನೆಯಲ್ಲ, ಮೇಜರ್ ಅವತಾರ್ ಸಿಂಗ್ ಎಂಬಾತನ ನೈಜ ಕಥೆ ಇದು. ಜಲೀಲ್ ಅಂದ್ರಾಬಿ ಎಂಬ ವಕೀಲ ಮತ್ತು ಮಾನವ ಹಕ್ಕು ಹೋರಾಟಗಾರನನ್ನು ಶ್ರೀನಗರದಲ್ಲಿ ಅಕ್ರಮವಾಗಿ ಕೊಂದು ಅಮೆರಿಕಕ್ಕೆ ಪರಾರಿಯಾಗಿದ್ದ ಅವತಾರ್ ಸಿಂಗ್ 2012ರಲ್ಲಿ ತನ್ನ ಕುಟುಂಬವನ್ನು ಕೊಂದು ಆತ್ಮಹತ್ಯೆ ಮಾಡಿಕೊಂಡಿದ್ದ)

ಕಾಶ್ಮೀರದಲ್ಲಿ ನಿಯೋಜನೆಗೊಂಡಿರುವ ಸೈನಿಕರಲ್ಲಿ ತಮಿಳುನಾಡಿನ ಮುರುಗೇಸನ್ ಕೂಡ ಒಬ್ಬ. ಕಾಶ್ಮೀರದ ಚಳಿಯಲ್ಲಿ ಮುರುಗೇಸನ್ ಸಿಗರೇಟ್ ಸೇದುತ್ತಿರುವಂತೆ ಆತನ ಬಾಯಿಯಿಂದ ಆವಿಯನ್ನು ಬಿಡುವುದನ್ನು ನೋಡಿ ಜನರು ಆತನನ್ನು ರಜನಿಕಾಂತ್ ಎಂದು ಕರೆಯುತ್ತಿರುತ್ತಾರೆ. ಮುರುಗೇಸನ್ ನೆಲ ಬಾಂಬ್‌ಗೆ ಬಲಿಯಾದಾಗ ಸಕಲ ಮರ್ಯಾದೆಗಳೊಂದಿಗೆ ಆತನ ಶವವನ್ನು ಆತನ ಊರಿಗೆ ಕಳುಹಿಸಲಾಗುತ್ತದೆ. ಆದರೆ ಮುರುಗೇಸನ್ ದಲಿತನಾಗಿದ್ದರಿಂದ ಆತನ ಶವವನ್ನು ಮೇಲ್ಜಾತಿಯ ಜನರ ಕೇರಿಯಲ್ಲಿ ಎತ್ತಿಕೊಂಡು ಹೋಗಬಾರದೆಂದು ವನ್ನಿಯಾರರು ತಕರಾರು ತೆಗೆಯುತ್ತಾರೆ. ಆದರೂ ಶವಸಂಸ್ಕಾರ ಮುಗಿದನಂತರ ಹಳ್ಳಿಯ ದಲಿತರು ಊರಿನ ಹೊರಭಾಗದಲ್ಲಿ ಆತನ ಪ್ರತಿಮೆಯನ್ನು ಸ್ಥಾಪಿಸುತ್ತಾರೆ. ಮುರುಗೇಸನ ಆರು ತಿಂಗಳ ಕೂಸು ಪ್ರತಿಮೆಯನ್ನು ನೋಡಿದಾಗಲೆಲ್ಲ 'ಅಪ್ಪಪ್ಪಪ್ಪ' ಎಂದು ತೊದಲಿಸುತ್ತಿರುತ್ತದೆ. ಊರಿನ ಹೊರಭಾಗದಲ್ಲಿ ದಲಿತನ ಪ್ರತಿಮೆಯನ್ನು ವನ್ನಿಯಾರರು ಸಹಿಸುವುದಾದರೂ ಹೇಗೆ? ಒಂದು ದಿನ ಪ್ರತಿಮೆಯ ಕೈ ತುಂಡಾಗುತ್ತದೆ. ದಲಿತರು ದೂರಿದರೂ ಪೊಲೀಸರು ಯಾವ ಕ್ರಮವನ್ನೂ ತೆಗೆದುಕೊಳ್ಳುವುದಿಲ್ಲ, ಅದಾದನಂತರ ಅದರ ರುಂಡವೂ ಬೀಳುತ್ತದೆ. ಸ್ವಲ್ಪ ದಿನಗಳಲ್ಲೇ ಪ್ರತಿಮೆ ವಿಕಾರಗೊಳ್ಳುತ್ತದೆ. ಆದರೂ ಆತನ ಕೂಸು ಅದನ್ನು ನೋಡಿದಾಗಲೆಲ್ಲ 'ಅಪ್ಪಪ್ಪಪ್ಪ' ಎನ್ನುತ್ತಲೇ ಇರುತ್ತದೆ.

ತಿಲೋ ಎಲ್ಲಿದ್ದಾಳೆಂದು ಬಿಪ್ಲಾಬ್ ಇನ್ನೂ ಹುಡುಕುತ್ತಿದ್ದಾನೆ. ಆಗೊಮ್ಮೆ ಇದ್ದಕ್ಕಿದ್ದಂತೆ ಬಿಪ್ಲಾಬ್ ಮುಂದೆ ಮೂಸ ಪ್ರತ್ಯಕ್ಷನಾಗುತ್ತಾನೆ. 'ಸತ್ತಿರುವ' ಮೂಸನನ್ನು ಕಂಡು ಬಿಪ್ಲಾಬನಿಗೆ ಅಚ್ಚರಿ; ತಿಲೋ ಬದಲು ಬಿಪ್ಲಾಬನನ್ನು ನೋಡಿ ಮೂಸನಿಗೆ ಆತಂಕ. ಆದರೆ ತಾನು ಗುಪ್ತಚರ ಇಲಾಖೆಯನ್ನು ತೊರೆದಿರುವುದಾಗಿ ಬಿಪ್ಲಾಬ್ ಹೇಳಿದಾಗ ಮೂಸ ನಿರಾಳನಾಗುತ್ತಾನೆ. ಕಾಶ್ಮೀರದಲ್ಲಿ ಬಿಪ್ಲಾಬ್ ಭಾರತ ಸರ್ಕಾರದ ನಿಲುವನ್ನು ಸಮರ್ಥಿಸುತ್ತಾ "ನೀವು ಎಂದೂ ಗೆಲ್ಲುವುದಿಲ್ಲ" ಎನ್ನುತ್ತಾನೆ. ಅದಕ್ಕೆ ಮೂಸ "ನಾವಾಗಲೇ ಗೆದ್ದಾಗಿದೆ" ಎಂದು ಉತ್ತರಿಸುತ್ತಾನೆ. ಅದಕ್ಕೂ ಹಿಂದೆ ಸಂರಕ್ಷಿಸಿ ಇಡಬೇಕೆಂದು ತಿಲೋಳಿಗೆ ಮೂಸಾ ಕಳುಹಿಸಿದ್ದ ದಾಖಲೆಗಳು, ಹಲವಾರು ನಕಲಿ ಪಾಸ್‌ಪೋರ್ಟ್ ಇತ್ಯಾದಿಗಳನ್ನು ಬಿಪ್ಲಾಬ್ ಆತನಿಗೆ ಕೊಡುತ್ತಾನೆ. ಅಷ್ಟು ಹೊತ್ತಿಗೆ ತಿಲೋ ಎಲ್ಲಿದ್ದಾಳೆಂದು ಮೂಸನಿಗೆ ಗೊತ್ತಾಗುತ್ತದೆ. ಆತ ಹೊರಟುನಿಲ್ಲುತ್ತಾನೆ. ಹೊರಡುವ ಮುನ್ನ ಬಿಪ್ಲಾಬ್ "ನೀನು ಮೇಜರ್ ಅಮ್ರಿಕ್ ಸಿಂಗ್‌ನನ್ನು ಕೊಂದೆಯಾ?" ಎಂದು ಪ್ರಶ್ನಿಸುತ್ತಾನೆ. ಅದಕ್ಕೆ ಮೂಸ "ಇಲ್ಲ ನಾನು ಕೊಲ್ಲಲಿಲ್ಲ. ಆದರೆ ಆತನೇ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಿದೆವು. ಆತನ ವಿರುದ್ಧ ಆಗಲೇ ಭಾರತ ಸರ್ಕಾರ ಕ್ರಮ ತೆಗೆದುಕೊಂಡಿದ್ದರೆ ಆತನ ಅಮಾಯಕ ಪತ್ನಿ ಮತ್ತು ಮಕ್ಕಳು ಇವತ್ತು ಜೀವಂತವಾಗಿರುತ್ತಿದ್ದರು" ಎಂದು ಉತ್ತರಿಸುತ್ತಾನೆ.

ಕೊನೆಯ ಮಾತಾಗಿ "ಒಂದು ದಿನ ಭಾರತ ಸ್ವಯಂ ಧ್ವಂಸವಾಗುವಂತೆ ಕಾಶ್ಮೀರ ಮಾಡುತ್ತದೆ. ಅಷ್ಟು ಹೊತ್ತಿಗೆ ನೀವು ನಿಮ್ಮ ಪೆಲ್ಲೆಟ್ ಗನ್‌ಗಳಿಂದ ನಮ್ಮನ್ನೆಲ್ಲ ಕುರುಡರನ್ನಾಗಿಸಿರಬಹುದು. ಆದರೂ ನೀವು ನಮಗೆ ಏನು ಮಾಡಿದ್ದೀರೆಂದು ನೋಡುವ ಕಣ್ಣುಗಳು ನಮಗಿರುತ್ತವೆ. ನೀವು ನಮ್ಮನ್ನ ನಾಶ ಮಾಡುತ್ತಿಲ್ಲ, ನೀವು ನಮ್ಮನ್ನು ನಿರ್ಮಿಸುತ್ತಿದ್ದೀರಿ. ನೀವು ನಾಶ ಮಾಡಿಕೊಳ್ಳುತ್ತಿರುವುದು ನಿಮ್ಮನ್ನೇ" ಎನ್ನುತ್ತಾನೆ.

ಅಲ್ಲಿಂದ ಮೂಸ ತಿಲೋಳನ್ನು ಸೇರುತ್ತಾನೆ. ತಿಲೋ ಆಗಲೇ ಅಂಜುಮ್‌ಳ ಜನ್ನತ್ ಗೆಸ್ಟ್‌ಹೌಸ್‌ನಲ್ಲಿ ವಾಸಿಸುತ್ತಿದ್ದಾಳೆ. ಅಲ್ಲಿ ಆಕೆ ತನಗೆ ಸಿಕ್ಕ ಕೂಸಿಗೆ ಮೂಸನ ಮಗಳ ಹೆಸರನ್ನೇ (ಜಬೀನ್) ಇಟ್ಟಿದ್ದಾಳೆ. ಅಲ್ಲಿ ಮೂರು ದಿನ ತಂಗಿದ ನಂತರ ಮೂಸ ಕಾಶ್ಮೀರಕ್ಕೆ ಹಿಂದಿರುಗುತ್ತಾನೆ. ಅಲ್ಲಿ ಆತ ಮುಂದೊಂದು ದಿನ ಸಾಯುತ್ತಾನೆ - ಅನಾಮಿಕ ಗೋರಿಯಲ್ಲಿ ಅನಾಮಿಕ ವ್ಯಕ್ತಿಯಾಗಿ ಅಂತ್ಯಗೊಳ್ಳುತ್ತಾನೆ. ಕಾಶ್ಮೀರದಿಂದ ತಿಲೋಳಿಗೆ ಒಂದು ಫೋಟೊ ಬರುತ್ತದೆ. ಅದು ಮೂಸ ಮತ್ತು ಗುಲ್ರೇಜ್ ಅಕ್ಕಪಕ್ಕ ನಿಂತಿರುವ ಫೋಟೊ. ಫೋಟೋದ ಮೇಲೆ "ಈಗ ಕಮಾಂಡರ್‌ಗಳಾದ ಗುಲ್ರೇಜ್ ಮತ್ತು ಗುಲ್ರೇಜ್‌ಗಳು ಜೊತೆಯಾಗಿದ್ದಾರೆ" ಎಂದು ಬರೆಯಲಾಗಿರುತ್ತೆ.


ಒಂದು ದಿನ ಡಾ. ಆಜಾದ್ ಭಾರತೀಯನ ಮೂಲಕ ಜನ್ನತ್‌ಗೆ ಒಂದು ಪತ್ರ ಬರುತ್ತದೆ. ಪತ್ರ ಬರೆದ ಮಹಿಳೆ ತಾನು ಆಂಧ್ರದವಳೆಂದೂ, ನಕ್ಸಲ್ ಹೋರಾಟಗಾರ್ತಿ ಎಂದೂ, ಆ ಕಾರಣಕ್ಕೇ ಆರು ಪೊಲೀಸರು ತನ್ನನ್ನು ಅಪಹರಿಸಿ, ಚಿತ್ರಹಿಂಸೆ ನೀಡಿ, ತನ್ನ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದರೆಂದೂ, ಅದರ ಫಲವೇ ಈ ಕೂಸು ಎಂದೂ ವಿವರಿಸಿರುತ್ತಾಳೆ. ತಾನು ಕೂಸನ್ನು ನೋಡಿಕೊಳ್ಳುವ ಸ್ಥಿತಿಯಲ್ಲಿ ಇಲ್ಲವೆಂದೂ, ನಕ್ಸಲ್ ಚಳವಳಿಯ ವಿರುದ್ಧದ ಹೋರಾಟದಲ್ಲಿ ಆದಿವಾಸಿಗಳಿಗೆ ಆಗುತ್ತಿರುವ ಅನ್ಯಾಯವನ್ನು ಜನರ ಗಮನಕ್ಕೆ ತರಲು ತಾನು ಜಂತರ್‌ಮಂತರ್‌ಗೆ ಬಂದಿದ್ದೇನೆಂದೂ, ತನ್ನ ಮಗುವನ್ನು ಸರಿಯಾದವರಿಗೆ ಕೊಡಲು ಆಜಾದ್ ಭಾರತೀಯನೇ ಸೂಕ್ತ ವ್ಯಕ್ತಿಯೆಂದೂ ಆಕೆ ಹೇಳಿರುತ್ತಾಳೆ. ಜೊತೆಗೆ ಈ ಪತ್ರ ಆಜಾದ್ ಭಾರತೀಯನ ಕೈಗೆ ಸೇರುವ ಹೊತ್ತಿಗೆ ತಾನು ಪೊಲೀಸರಿಗೆ ಬಲಿಯಾಗಿರುತ್ತೇನೆ ಮತ್ತು ತನ್ನ ಮಗಳ ಹೆಸರು ಉದಯಾ ಎಂದು ಹೇಳಿರುತ್ತಾಳೆ. ಆಗ ಆ ಮಗು ಹೆಸರನ್ನು ಮಿಸ್ ಉದಯಾ ಜಬೀನ್ ಎಂದು ಎಲ್ಲರೂ ಬದಲಾಯಿಸುತ್ತಾರೆ.

ನಿಧಾನವಾಗಿ ಜನ್ನತ್ ಗೆಸ್ಟ್‌ಹೌಸ್ ಕ್ರಿಯಾಶೀಲ ಜನರ ಆಲಯವಾಗಿ, ಜನರ ಈಜುಕೊಳವಾಗಿ, ಜನರ ಶಾಲೆಯಾಗಿ ಪರಿವರ್ತನೆಗೊಳ್ಳುತ್ತದೆ. ಆದರೆ ಹೊರಗೆ ಇರುವ 'ದುನಿಯಾ' ಜನರ ಬದುಕು ಅತಂತ್ರವಾಗಿ ಮುಂದುವರೆಯುತ್ತದೆ.

... ಹೀಗೆ ಭಾರತದ ಹಲವಾರು ಹೋರಾಟಗಳ, ಸಮಸ್ಯೆಗಳ ಚಿತ್ರಣವನ್ನು ನೀಡುವ ಈ ಕಾದಂಬರಿ ಅಂತ್ಯಗೊಳ್ಳುವುದು ಈ ಮಾತುಗಳ ಮೂಲಕ: "ಎಲ್ಲವೂ ಬದಲಾಗಬೇಕು, ಬದಲಾಗುತ್ತದೆ. ಯಾಕೆಂದರೆ ಮಿಸ್ ಜಬೀನ್, ಮಿಸ್ ಉದಯಾ ಜಬೀನ್ ಆಗಮಿಸಿದ್ದಾರೆ." ಅಂದರೆ ಆ ಕೂಸು ಭಾರತದ ಭವಿಷ್ಯದ ಪ್ರತೀಕ.

ಈ ಅದ್ಭುತ ಕಾದಂಬರಿ ಕುರಿತು ಹೇಳುವುದು ಬೇಕಾದಷ್ಟಿದೆ. ಆದರೆ ಸಮಯ ಮತ್ತು ಸ್ಥಳಾವಕಾಶದಿಂದಾಗಿ ಇಲ್ಲಿಗೆ ನಿಲ್ಲಿಸುತ್ತೇನೆ. ಒಟ್ಟಾರೆಯಾಗಿ ಎಲ್ಲರೂ ಓದಲೇಬೇಕಾದ ಕಾದಂಬರಿ 'ದಿ ಮಿನಿಸ್ಟ್ರಿ ಆಫ್ ಅಟ್‌ಮೋಸ್ಟ್ ಹ್ಯಾಪಿನೆಸ್.' ■

ಮಳವಳ್ಳಿ: ಪುಡಿರೌಡಿ ಫಣೀಶ್ ಫಿನಿಷ್



ರೌಡಿ ಫಣೀಶ್

ಕಳೆದೊಂದು ದಶಕದಿಂದೀಚೆಗೆ ಯಾವುದೇ ರೌಡಿಗಳ ಆರ್ಭಟವಿಲ್ಲದೆ ತಣ್ಣಗಾಗಿದ್ದ ಮಳವಳ್ಳಿಯಲ್ಲಿ ಕಳೆದ ಸೋಮವಾರ ಬೆಳ್ಳಂಬೆಳಗ್ಗೆಯೇ ಲಾಂಗು-ಮಚ್ಚುಗಳು ಆರ್ಭಟಿಸಿದ್ದವು. ಎರಡು ವರ್ಷಗಳ ಹಿಂದಷ್ಟೇ ರೌಡಿಸಂಗೆ ಕಾಲಿಟ್ಟಿದ್ದ ರೌಡಿ ಫಣೀಶ್‌ನನ್ನು ದುಷ್ಕರ್ಮಿಗಳ ತಂಡ ಕಣ್ಣಿಗೆ ಖಾರದಪುಡಿ ಎರಚಿ ಭೀಕರವಾಗಿ ಹತ್ಯೆ ಮಾಡಿದೆ. ತಮಿಳುನಾಡಿನ ಡ್ರೈವರ್ ಪಳನಿ ಎಂಬಾತನನ್ನು ಕಾರಿನ ಸಮೇತ ಅಪಹರಿಸಿ ಕೊಂದು ಜೈಲು ಸೇರುವ ಮೂಲಕ ಪಾತಕ ಜಗತ್ತಿಗೆ ಕಾಲಿಟ್ಟಿದ್ದ ಫಣೀಶ ಪಾತಕಲೋಕ ಮತ್ತೊಂದು ದುರಂತ ಅಧ್ಯಾಯವಾಗಿ ಮಣ್ಣು ಸೇರಿದ್ದಾನೆ.


ಜೂನ್ 12ರ ಸೋಮವಾರ ರೌಡಿ ಫಣೀಶ್ ತನ್ನ ಸ್ನೇಹಿತ ಗಿರೀಶ್ ಜೊತೆ ಸುಲ್ತಾನ್ ರಸ್ತೆಯಲ್ಲಿ ವಾಕಿಂಗ್ ಮುಗಿಸಿ ಅಕ್ಷಯ ಸವಿಗಂಗಾ ಕಲ್ಯಾಣ ಮಂಟಪದ ಬಳಿ ವಿಶ್ರಾಂತಿ ಪಡೆಯುತ್ತಾ ಕೂತಿದ್ದ ಆಗ ಸ್ಕಾರ್ಪಿಯೋ ಕಾರಿನಲ್ಲಿ ಬಂದ ಆರು ಮಂದಿ ಹಂತಕರು ಮಚ್ಚು-ಲಾಂಗುಗಳಿಂದ ಅವನ ಮೇಲೆ ಮುಗಿಬಿದ್ದಿತ್ತು. ಕಣ್ಣಿಗೆ ಖಾರದ ಪುಡಿ ಎರಚಿದ ಹಂತಕರು ಫಣೀಶ್‌ನ ಮುಖ, ತಲೆ, ಎದೆ ಮೇಲೆಲ್ಲ ಮಚ್ಚು-ಲಾಂಗುಗಳಿಂದ ಭೀಕರವಾಗಿ ಹಲ್ಲೆ ಮಾಡಿದ್ದರು. ಜೊತೆಗಿದ್ದ ಗಿರೀಶ್ ಹಂತಕರ ಕೈಗೆ ಸಿಗದೆ ತಪ್ಪಿಸಿಕೊಂಡು ಓಡಿಹೋಗಿ ಮಳವಳ್ಳಿ ಪೊಲೀಸರಿಗೆ ಸುದ್ದಿ ಮುಟ್ಟಿಸುವಷ್ಟರಲ್ಲಿ ಫಣೀಶನ ದೇಹ ರಕ್ತದ ಮಡುವಿನಲ್ಲಿ ಶವವಾಗಿ ಚೆಲ್ಲಿಕೊಂಡಿತ್ತು. ಸ್ನೇಹಿತ ಗಿರೀಶ್ ಅಪಾಯದಿಂದ ಪಾರಾಗಿರುವುದನ್ನು ನೋಡಿದರೆ ಹಂತಕರ ಜೊತೆ ಈತನೂ ಶಾಮೀಲಾಗಿದ್ದಾನೆಂಬ ಅನುಮಾನವೂ ಮೂಡಿದೆ. ಸದ್ಯಕ್ಕೆ ಹಂತಕರು ಬಂದಿದ್ದ ಸ್ಕಾರ್ಪಿಯೋ ತಮಿಳುನಾಡು ಮೂಲದ್ದೆಂದು ತಿಳಿದುಬಂದಿದ್ದು ಡಿವೈಎಸ್ಪಿ ಮ್ಯಾಥ್ಯು ಥಾಮಸ್, ಸಿಪಿಐ ಶ್ರೀಕಾಂತ್, ಎಸ್‌ಐ ರವಿಕುಮಾರ್ ತನಿಖೆ ನಡೆಸುತ್ತಿದ್ದಾರೆ.

ತನ್ನ ಮಗ ಫಣೀಶನನ್ನು ರೌಡಿ ಕಾರ್ ಮುತ್ತುವಿನ ಅಕ್ಕನ ಮಗ ಜಿಮ್ ಶಿವ ಅಲಿಯಾಸ್ ಶಿವಪ್ರಸಾದ್‌ನೇ ಹತ್ಯೆ ಮಾಡಿದ್ದಾನೆಂದು ಫಣೀಶನ ತಂದೆ ಸ್ಟ್ಯಾಂಪ್‌ವೆಂಡರ್ ಬಸವರಾಜ ಅರಸು ಪೊಲೀಸರ ಮುಂದೆ ಆರೋಪ ಮಾಡಿದ್ದಾನೆ. ಈ ಹಿಂದೆ ಫಣೀಶನಿಗೂ ಶಿವನಿಗೂ ಭಾರೀ ಜಗಳವಾಗಿತ್ತು.


ಕೆಲವು ತಿಂಗಳ ಹಿಂದೆ ಪಟ್ಟಣದ ಗಂಗಾಮತಸ್ಥ ಬೀದಿಯ ಒಂದಾನೊಂದು ಕಾಲದ ರೌಡಿ ಕಾರುಮುತ್ತು ಆತನ ಅಕ್ಕನ ಮಗ ಜಿಮ್ ಶಿವುಗೂ ಫಣೀಶನಿಗೂ ರೋಲ್‌ಕಾಲ್ ವಿಷಯದಲ್ಲಿ ಜಗಳವಾಗಿತ್ತು. ಈ ವಿಷಯ ಪೊಲೀಸ್ ಠಾಣೆ ಮೆಟ್ಟಿಲೇರಿ ಆಗಿನ ಡಿವೈಎಸ್ಪಿ ಸಮಾಧಾನ ಮಾಡಿ ಕಳುಹಿಸಿದ್ದರು. ಆದರೆ ಜಿಮ್ ಶಿವು ಜಿದ್ದು ಬಿಟ್ಟಿರಲಿಲ್ಲ. ಫಣೀಶನ ತಂದೆ ಮತ್ತು ಅಣ್ಣ ಇಬ್ಬರೂ ಜಿಮ್ ಶಿವನ ಮೇಲೆ ಅನುಮಾನ ವ್ಯಕ್ತಪಡಿಸಿದ್ದರಿಂದ ಆತನನ್ನು ಪೊಲೀಸರು ಹುಡುಕಿ ಹೊರಟರೆ ಆತ ನಾಪತ್ತೆಯಾಗಿದ್ದಾನೆ ಮಾತ್ರವಲ್ಲ, ಅವನ ಮೊಬೈಲ್ ಸ್ವಿಚ್ ಆಫ್ ಆಗಿದೆ.

ರೌಡಿ ಫಣೀಶ್ ಹಿನ್ನೆಲೆ

ಮಳವಳ್ಳಿಯ ಉಪನೋಂದಣಾಧಿಕಾರಿ ಕಚೇರಿ ಮುಂದೆ ಅಂಗಡಿ ಇಟ್ಟುಕೊಂಡಿರುವ ಬಸವರಾಜ್ ಅರಸುರದ್ದು ಸ್ಟ್ಯಾಂಪ್‌ವೆಂಡರ್ (ಪತ್ರಬರಹಗಾರ) ವೃತ್ತಿ. ಆ ವೃತ್ತಿಯಲ್ಲೇ ಕೋಟಿಗಟ್ಟಲೇ ಆಸ್ತಿ ಮಾಡಿದ್ದಾನೆ. ಮಳವಳ್ಳಿಯ ಮನೆಯೇ ಕೋಟ್ಯಾಂತರ ಬೆಲೆ ಬಾಳುತ್ತದೆ. ಈತನ ಇಬ್ಬರು ಮಕ್ಕಳಲ್ಲಿ ಹಿರಿಯ ಮಗ ಅಪ್ಪನ ಜೊತೆಯಲ್ಲಿದ್ದುಕೊಂಡು ಪತ್ರ ಬರಹಗಾರ ವೃತ್ತಿ ಕಲಿತರೆ, ಕಿರಿಯ ಮಗ ಫಣೀಶ್ ತಂದೆ ಮಾಡಿಟ್ಟಿದ್ದ ಹಣವನ್ನು ಕರಗಿಸುತ್ತಾ ಚಿಕ್ಕ ವಯಸ್ಸಿಗೆ ಹಾದಿ ತಪ್ಪಿದ್ದ. ಹಾಗಾಗಿ ಪುಂಡ ಗೆಳೆಯರ ದೊಡ್ಡ ಗುಂಪನ್ನೇ ಕಟ್ಟಿಕೊಂಡಿದ್ದ.



ಶಿವಕುಮಾರ್ ದಂಡಿನ್



ಸಿಪಿಐ ಶ್ರೀಕಾಂತ್

ಈಗ್ಗೆ ಒಂದೂವರೆ ವರ್ಷದ ಹಿಂದೆ ಫಣೀಶ್ ತನ್ನ ಮೂವರು ಪುಂಡ ಗೆಳೆಯರ ಜೊತೆ ತಮಿಳುನಾಡಿಗೆ ಟ್ರಿಪ್ ಹೋಗಿದ್ದ. ಆತನ ಬಳಿಯಿದ್ದ ಹಣವೆಲ್ಲ ಖರ್ಚಾಗಿ ಹೋದಾಗ ಯಾರನ್ನಾದರೂ ಕಿಡ್ನಾಪ್ ಮಾಡಿ ಹಣ ದೋಚಲು ಸ್ಕೆಚ್ ಹಾಕಿದ್ದರು. ಮಳವಳ್ಳಿಗೆ ವಾಪಾಸ್ ಬರಲು ಬಾಡಿಗೆ ಕಾರನ್ನು ಬುಕ್ ಮಾಡಿಕೊಂಡ ಅವರು ಸ್ವಲ್ಪ ದೂರ ಬಂದ ಮೇಲೆ ನಿರ್ಜನ ಪ್ರದೇಶದಲ್ಲಿ ಡ್ರೈವರ್ ಪಳನಿಯನ್ನೇ ದೋಚಲು ಮುಂದಾಗಿದ್ದರು. ಆತ ಪ್ರತಿರೋಧ ತೋರಿದ್ದರಿಂದ ಅಲ್ಲೇ ಕೊಲೆ ಮಾಡಿ ಶವವನ್ನು ಡಿಕ್ಕಿಯಲ್ಲಿ ತುರುಕಿಕೊಂಡು ಮಳವಳ್ಳಿ ಬಳಿಯ ತೊರೆಕಾಡನಹಳ್ಳಿ ಶಿಂಷಾ ನದಿಗೆ ಬಿಸಾಡಿದ್ದರು. ಅಪಹರಿಸಿದ್ದ ಕಾರನ್ನು ಮಳವಳ್ಳಿಗೆ ತಂದು ಆರಾಮವಾಗಿ ಓಡಾಡಿಸಿಕೊಂಡಿದ್ದರು.



ಫಣೀಶ್ ಕೊಲೆಯಾಗಿರುವುದು.

ಅತ್ತ ಡಿವೈಎಸ್ಪಿ ಶಿವಕುಮಾರ್ ದಂಡಿನ್‌ರು ಶಿಂಷಾ ನದಿಯಲ್ಲಿ ಸಿಕ್ಕ ಶವದ ಸುತ್ತ ಅಪರಿಚಿತ ಶವದ ತನಿಖೆ ಶುರು ಮಾಡಿದ್ದರು. ವಾರಸುದಾರರಿಲ್ಲದ ಶವವನ್ನು ಪೊಲೀಸರೇ ದಫನ್ ಮಾಡಿದ್ದರು. ಯಾವಾಗ ಕೊಲೆ ನಡೆದು ಕೆಲ ದಿನಗಳಾದರು ತಮ್ಮ ಮೇಲೆ ಅನುಮಾನ ಬರಲಿಲ್ಲವೆಂಬುದು ಖಾತ್ರಿಯಾಯ್ತೊ ಆಗ ತಮಿಳುನಾಡು ನೋಂದಣಿ ಸಂಖ್ಯೆ ಹೊಂದಿದ್ದ ಕಾರನ್ನು ರಾಜಾರೋಷವಾಗಿ ಓಡಾಡಿಸಲು ಶುರು ಮಾಡಿದ್ದರು. ಅದೊಂದು ರಾತ್ರಿ 12ರ ಸಮಯದಲ್ಲಿ ಡಿವೈಎಸ್ಪಿ ಶಿವಕುಮಾರ್ ಮಳವಳ್ಳಿ ಕೆಎಸ್‌ಆರ್‌ಟಿಸಿ ಬಸ್‌ಸ್ಟ್ಯಾಂಡ್ ಎದುರು ಪಾರ್ಕಿಂಗ್ ಕಲ್ಲುಗಳನ್ನು ಹಾಕಿಸುವ ಕೆಲಸದಲ್ಲಿ ನಿರತರಾಗಿರುವಾಗ ಅವರ ಮುಂದೆಯೇ ತಮಿಳುನಾಡು ರಿಜಿಸ್ಟರ್ ಹೊಂದಿದ್ದ ಕಾರು ಹಾದುಹೋಗಿತ್ತು. ಅನುಮಾನಗೊಂಡ ಅವರು ಆ ಕಾರಿನ ಬೆನ್ನತ್ತಿ ಹೋದಾಗ ರೌಡಿ ಫಣೀಶನ ಗ್ಯಾಂಗು ಕಾರನ್ನು ಬಿಟ್ಟು ಓಡಿಹೋಗಿತ್ತು.

ಮಾರನೇ ದಿನ ಕಾರು ಕೇಳಿಕೊಂಡು ಫಣೀಶನ ಸ್ನೇಹಿತನೊಬ್ಬ ಠಾಣೆಗೆ ಬಂದಿದ್ದ. ಅವನನ್ನು ಲಾಕ್ ಮಾಡಿಕೊಂಡು ರುಬ್ಬಿದಾಗ ಫಣೀಶ್ ಗ್ಯಾಂಗ್ ಮಾಡಿದ್ದ ಕೊಲೆಯ ವೃತ್ತಾಂತ ಆಚೆಗೆ ಬಂದಿತ್ತು. ಆ ಕೇಸಿನಲ್ಲಿ ಸ್ವಲ್ಪ ಕಾಲ ಜೈಲಿನಲ್ಲಿದ್ದು ಜಾಮೀನಿನ ಮೇಲೆ ಫಣೀಶ್‌ನ ಗ್ಯಾಂಗ್ ಹೊರಬಂದಿತ್ತು. ಜೈಲಿನಿಂದ ಬಂದ ಮೇಲೆ ಫಣೀಶ್‌ನ ತಲೆ ಸ್ವಲ್ಪ ಜೋರಾಗಿಯೇ ತಿರುಗುತ್ತಿತ್ತು. ರೌಡಿಸಂ ಆಕರ್ಷಣೆಗೆ ಬಿದ್ದ ಫಣೀಶ್ ಬೆಂಗಳೂರಿನ ಕೆಲ ರೌಡಿಗಳ ಸಂಪರ್ಕದಲ್ಲಿದ್ದ. ಆಗಲೇ ಮಳವಳ್ಳಿಯ ಮತ್ತೊಬ್ಬ ಮಾಜಿ ರೌಡಿ ಕಾರ್‌ಮುತ್ತು ಅಕ್ಕನ ಮಗ ಜಿಮ್ ಶಿವು ಜೊತೆ ಕಿತ್ತಾಡಿಕೊಂಡ.

ಈ ಪ್ರಕರಣದಲ್ಲಿ ಮಗ ಫಣೀಶ್‌ನನ್ನು ಬಚಾವು ಮಾಡಿ ಎಂದು ಸ್ಟ್ಯಾಂಪ್‌ವೆಂಡರ್ ಬಸವರಾಜ್ ಅ... ಕೆಲ ತಿಂಗಳ ಹಿಂದಷ್ಟೇ ಕರ್ತವ್ಯಲೋಪದ ಕಾರಣ... ವರ್ಗಾವಣೆಯಾದ ಸರ್ಕಲ್ ಇನ್ಸ್‌ಪೆಕ್ಟರ್ ಎಲ್.ಕೆ.ರಮೇ... ಬಳಿ ಎಡತಾಕಿದ್ದ. ಬಸವರಾಜ ಅರಸ್‌ನಿಂದ ಲ... ರೊಕ್ಕ ಪಡೆದ ರಮೇಶ್ ಕೊಲೆಯಾದ ಪಳನಿ ಕುಟುಂ... ದೊಡ್ಡ ಮೊತ್ತವನ್ನು ಕೊಟ್ಟು ಕೇಸ್ ಉಲ್ಟಾ ಹೊಡೆ... ಎಲ್ಲಾ ಕಾರ್ಯ ಮಾಡಿದ್ದ. ನೋಟು ಅಮಾ... ಸಂದರ್ಭದಲ್ಲಿ ಶಿಂಷಾ ನದಿ ಬಳಿ ಇಸ್ಪೀಟ್ ಆಡು... ಗ್ಯಾಂಗ್ ಮೇಲೆ ಬಿದ್ದ ನುಂಗಣ್ಣ ರಮೇಶ್ ಲಕ್ಷಗ... ಹಣ ದೋಚಿದ್ದ ಹಣ ಕಳೆದುಕೊಂಡ ಆಸಾಮಿ ರಾಮ... ಜಿಲ್ಲೆಯ ಪ್ರಭಾವಿ ಮಂತ್ರಿಯೊಬ್ಬರ ಶಿಷ್ಯನಾಗಿದ್ದ... ದೋಚಿದ್ದ ದುಡ್ಡನ್ನೆಲ್ಲ ರಮೇಶ ವಾಪಸ್ ತಂದುಕೊ... ಎಂದು ಮಳವಳ್ಳಿ ಜನರೇ ಮಾತನಾಡುತ್ತಾರೆ. ... ಹಿನ್ನೆಲೆಯಲ್ಲಿ ಎಸ್ಪಿ ಸುಧೀರ್‌ಕುಮಾರ್ ರೆಡ್ಡಿ ರಮೇ... ಫನಿಷ್‌ಮೆಂಟ್ ಟ್ರಾನ್ಸ್‌ಫರ್ ಮಾಡಿ ಮಳವಳ್ಳಿಯಿ... ಬೇರೆಡೆಗೆ ಕಳುಹಿಸಿದ್ದರು. ಇಂತಹ ನುಂಗಣ್ಣ ರಮೇಶ್... ಹಿಡಿದುಕೊಂಡು ಬಸವರಾಜ ಅರಸ್, ಡ್ರೈವರ್ ... ಕೊಲೆ ಕೇಸಿನಲ್ಲಿ ಅವರ ಕುಟುಂಬದ ಜೊತೆ ... ಮಾಡಿಕೊಂಡಿದ್ದ. ಈ ಪ್ರಕರಣ ನ್ಯಾಯಾಲಯ... ಬಿದ್ದುಹೋಗುವ ಹುಮ್ಮಸ್ಸಿನಲ್ಲಿದ್ದ ಫಣೀಶನ ರೌ... ಮತ್ತಷ್ಟು ಹೆಚ್ಚಾಗಿತ್ತು.

ರೌಡಿ ಫಣೀಶ್ ಜಿಮ್ ಶಿವುನನ್ನು ತೆಗೆಯುವ... ತನ್ನ ಗೆಳೆಯರ ಬಳಿ ಹೇಳಿಕೊಂಡಿದ್ದ. ಈ ಹಿನ್ನೆಲೆ... ಗಂಗಾಮತಸ್ಥ ಕೇರಿಯ ಶಿವು ಕೂಡ ಫಣೀಶ್‌ನನ್ನು ... ಬಿಟ್ಟರೆ ಮುಂದೊಂದು ದಿನ ತನಗೆ ತಲೆನೋವು ... ಕೊಂಡು ತನ್ನ ಗೆಳೆಯರ ಜೊತೆ ಸೇರಿ ಫಣೀಶ... ಕೊಲ್ಲುವ ನಿರ್ಧಾರಕ್ಕೆ ಬಂದು ಬಿಟ್ಟಿದ್ದ ಎನ್ನಲಾಗು... ಯಾವುದಕ್ಕೂ ಪೊಲೀಸರು ಶಿವನನ್ನು ಅರೆಸ್ಟ್ ... ತಂದಾಗಲೇ ಅಸಲಿ ವಿಚಾರ ಬಯಲಿಗೆ ಬರುತ್ತೆ. ಅ... ಇರಲಿ, ರೌಡಿಸಂನ ಇಂತಹ ದುರಂತ ಅಧ್ಯಾಯ... ಬಯಲಿಗೆ ಬಂದಷ್ಟೂ ಯುವಜನತೆಗೆ ಅದರ ಸೆ... ಸಿಲುಕುವುದು ಹೆಚ್ಚಾಗುತ್ತಲೇ ಇರುವುದು ಮಾತ್ರ ದು...

■ ಮಂಡ್ಯ ನಾಗೇ...

ಮೋನಾಕನ ಹೋಟೇಲ್


ಸೆವಾಯ ರಾತ್ರಿ ಸುಮಾರು ಒಂಭತ್ತೂ ಕಾಲಾಗಿರಬಹುದು. ಮೋನಾಕ ಹೋಟೇಲಿನ ಬಾಗಿಲು ಮುಚ್ಚುವ ತರಾತುರಿಯಲ್ಲಿ ಲಗುಬಗನೇ ಟೇಬಲ್ ಒರೆಸಿ ಹೋಟೇಲ್‌ನ ಹಿಂಬದಿಯ ಸಾರ್ವಜನಿಕ ನಲ್ಲಿಯ ಸುತ್ತ ಪಾತ್ರೆಗಳನ್ನು ಹರಡಿ ಕೂತಿದ್ದರು. ಮಸಿ ತುಂಬಿದ ದೊಡ್ಡ ಪಾತ್ರೆಯೊಂದನ್ನು ತೆಂಗಿನ ಸಿಪ್ಪೆಯ ನಾರಿನಿಂದ ತಿಕ್ಕುತ್ತಿರಬೇಕಾದರೆ ಕೀರಲು ಧ್ವನಿಯಿಂದ ಯಾರೋ ಮೋನಾಕ ಎಂದು ಕರೆದರು. ಧ್ವನಿ ಕೇಳಿ ಬಂದೆಡೆಗೆ ಕತ್ತು ತಿರುಗಿಸಿದರು. ಕಿರಿಕತ್ತಲಲ್ಲಿ ತನ್ನಿಂದ ಅನತಿ ದೂರದಲ್ಲಿ ಮನುಷ್ಯಾಕೃತಿಯೊಂದು ನಿಂತಿರುವುದು ಕಾಣಿಸಿತು. ಯಾರು ಎಂದು ಮೋನಾಕ ಕೇಳಿದಾಗ "ನಾನು" ಎಂದು ಮತ್ತೆ ಆ ಧ್ವನಿ ಪ್ರತಿಧ್ವನಿಸಿತು. ತೀರಾ ಪರಿಚಿತ ದನಿಯೆಂದೆನಿಸಿ ಪಕ್ಕದಲ್ಲೇ ಇರಿಸಿದ್ದ ಚಾರ್ಜರ್ ಲೈಟನ್ನು ಎತ್ತಿ ಹಿಡಿದರು. ಯಾರೆಂದು ತಿಳಿಯಲಿಲ್ಲ. ಬಲಗೈಯಲ್ಲಿದ್ದ ತೆಂಗಿನ ಸಿಪ್ಪೆಯ ನಾರನ್ನು ತಿಕ್ಕುತ್ತಿದ್ದ ಪಾತ್ರೆಯೊಳಗೆ ಇಟ್ಟು ಎದ್ದು ನಿಂತು ಮುಂದೆ ನಡೆದರು. "ಅರೆ..... ಆನಂದಣ್ಣ.....! ಏನಿದು ಈ ಹೊತ್ತಿನಲ್ಲಿ ಇಲ್ಲಿ...? ಎಲ್ಲಿ ಹೋಗಿದ್ದಿರಿ ಇಷ್ಟು ದಿನ...? ಇದೇನು ಏಕ್‌ದಂ ಪರಬ (ಮುದುಕ) ಆಗಿಬಿಟ್ಟಿದ್ದೀರಿ.....?" ಎಂದು ಮೋನಾಕ ಕೇಳಿದರು.

"ಮೋನಾಕ, ಮೋನಾಕ ನನ್ನನ್ನು ಕ್ಷಮಿಸಿಬಿಡಿ" ಎಂದು ಗಳಗಳನೇ ಅಳುತ್ತಾ ಮೋನಾಕನ ಕಾಲಿನತ್ತ ಆನಂದಣ್ಣ ಬಾಗಿದರು. ಎರಡು ಹೆಜ್ಜೆ ನಿಂತಲ್ಲಿಂದಲೇ ಹಿಂದೆ ಇಟ್ಟ ಮೋನಾಕ "ಛೆ ಛೆ ಏನಿದೆಲ್ಲಾ ಆನಂದಣ್ಣಾ....? ಅಂತದ್ದೇನಾಗಿದೆ ಈಗ.....? ನಿಮ್ಮನ್ನು ಕ್ಷಮಿಸುವಷ್ಟು ದೊಡ್ಡ ಜನ ನಾನಲ್ಲ....." ಅಂದರು.


"ಮೋನಾಕ..... ಅಂದು........ ನಾನು...." ಎಂದು ಮತ್ತೆ ಬಿಕ್ಕಿಬಿಕ್ಕಿ ಅಳತೊಡಗಿದರು ಆನಂದಣ್ಣ.

ಮೋನಾಕನ ನೆನಪು ವರ್ಷದ ಹಿಂದಕ್ಕೆ ಓಡಿತು. ಮೋನಾಕ ಸುಮಾರು ಇಪ್ಪತ್ತು ವರ್ಷಗಳಿಂದೀಚೆಗೆ ತಾಳಿಪ್ಪಾಡಿ ಆರ್‌ಟಿಓ ಚೆಕ್‌ಪೋಸ್ಟ್ ಬಳಿ ತೆಂಗಿನ ಸೋಗೆಯ ಮಾಡಿನ ಪುಟ್ಟ ತಟ್ಟಿ ಹೋಟೇಲೊಂದನ್ನು ನಡೆಸುತ್ತಾ ಬಂದಿದ್ದರು. ತಾಳಿಪ್ಪಾಡಿ ಚೆಕ್‌ಪೋಸ್ಟ್‌ನ ಬಳಿ ಮೋನಾಕನಂತಹದ್ದೇ ನಾಲ್ಕು ತಟ್ಟಿ ಹೋಟೇಲ್‌ಗಳಿದ್ದವು. ಆದರೆ ಅವರ್ಯಾರಿಗೂ ಮೋನಾಕನಿಗಿದ್ದ ವ್ಯಾಪಾರದ ಅರ್ಧ ವ್ಯಾಪಾರವಿರಲಿಲ್ಲ. ಮೋನಾಕನ ಹೋಟೇಲ್‌ನಲ್ಲಿರುವುದು ಎರಡು ಬೆಂಚು ಎರಡು ಟೇಬಲ್‌ಗಳು ಮಾತ್ರ. ಹೆಚ್ಚೆಂದರೆ ಎಂಟು ಜನ ಕುಳಿತುಕೊಳ್ಳಬಹುದು. ಸಂಜೆ ಐದೂವರೆಯಿಂದ ರಾತ್ರೀ ಎಂಟೂವರೆಯವರೆಗೆ ಮೋನಾಕನಿಗೆ ಅಂದು ತುರಿಸಲೂ ಸಮಯವಿಲ್ಲದಷ್ಟು ಭರ್ಜರಿ ವ್ಯಾಪಾರ. ಹೆಚ್ಚಿನ ಗಿರಾಕಿಗಳೆಲ್ಲಾ ಅಲ್ಲೇ ಪಕ್ಕದ ಅರಳಿಮರದ ಕಟ್ಟೆಯಲ್ಲಿ ಮತ್ತು ಹೋಟೇಲ್‌ನ ಹೊರ ಬದಿ ಎರಡೆರಡು ಕಲ್ಲುಗಳನ್ನು ಎರಡೂ ಬದಿಗ... ಅದರ ಮೇಲೆ ಇರಿಸಲಾಗಿದ್ದ ಹಲಗೆಯ ತುಂಡಿನ ಬೆ... ಮೇಲೆ ಕೂರುತ್ತಿದ್ದರು.. ಮೋನಾಕನ ಸಂಜೆಯ ಭ... ವ್ಯಾಪಾರದ ಗುಟ್ಟು ಪತ್ತಿರ್ (ಅಕ್ಕಿ ರೊಟ್ಟಿ) ಮತ್ತು ಬ... ಸುಕ್ಕದಲ್ಲಿತ್ತು. ಚೆಕ್‌ಪೋಸ್ಟ್ ಪ್ರದೇಶವಾದುದರಿ... ಮೋನಾಕನ ಗಿರಾಕಿಗಳಲ್ಲಿ ವಿವಿಧ ಭಾಷೆ, ವಿವಿಧ ರಾ... ಜನರಿದ್ದರು. ನಾಲ್ಕನೇ ಕ್ಲಾಸು ಓದಿರುವ ಮೋನಾಕ ಬ... ಭಾಷಾ ಪ್ರವೀಣ. ಅವರಿಗೆ ಬ್ಯಾರಿ ತುಳುವಿನಿಂದ ಹಿ... ಕನ್ನಡ, ತಮಿಳು, ಮಲಯಾಳಂ, ಹಿಂದಿಯವರೆಗೆ ... ಭಾಷೆಗಳಲ್ಲಿ ತಕ್ಕಮಟ್ಟಿಗೆ ಹಿಡಿತವಿತ್ತು. ಅವರು ಆ... ಭಾಷೆಗಳನ್ನು ಕಲಿತದ್ದು ತನ್ನದೇ ತಟ್ಟಿ ಹೋಟೇಲ... ವಿಶ್ವವಿದ್ಯಾನಿಲಯದಲ್ಲಿ...... ಅದೇ ಅವರ ಬದು... ಕಲೆಯಾಗಿತ್ತು.

ಮೋನಾಕನ ಪತ್ತಿರ್ ಸುಕ್ಕದ ರುಚಿ ಸವಿಯ... ಅಕ್ಕಪಕ್ಕದ ಊರುಗಳಿಂದ ಜನ ಜಾತಿಮತಗಳಿಗತೀತ... ಬರುತ್ತಿದ್ದರು. ಮೋನಾಕ ಪತ್ತಿರ್ ಮತ್ತು ಸುಕ್ಕ... ಮನೆಯಲ್ಲೇ ತಯಾರಿಸಿ ತಂದು ಬಡಿಸುತ್ತಿದ್ದರು. ಮೋನ... ಈ ಭರ್ಜರಿ ವ್ಯಾಪಾರ ಅಕ್ಕಪಕ್ಕದ ಹೋಟೇಲ್‌ಗಳ... ಹೊಟ್ಟೆ ಉರಿಸುತ್ತಿತ್ತು. ಅವರೆಲ್ಲಾ ತಮ್ಮ ತಿಂಡಿ ತಿನಿಸು... ದರವನ್ನು ಅರ್ಧಕ್ಕಿಳಿಸಿ ಮೋನಾಕನಿಗೆ ಸ್ಪರ್ಧೆ ನೀ... ಪ್ರಯತ್ನ ಮಾಡಿದರು. ತಂತ್ರಿಗಳ ತಗಡು ತಂತ್ರವೂ, ದಿ... ಕೋಯಾಗಳ ಮಣ್ಣು ಮಂತ್ರವೂ ಮೋನಾಕನ ಪ... ಸುಕ್ಕದ ಜನಪ್ರಿಯತೆಯನ್ನು ತಗ್ಗಿಸಲಿಲ್ಲ. ಅದೇ ... ಹೋಟೇಲಲ್ಲಿ ದುಡಿದೇ ಶ್ರಮಜೀವಿ ಮೋನಾಕ ಒ... ಆರ್.ಸಿ.ಸಿ. ಮನೆ ಕಟ್ಟಿಸಿದ್ದರು. ಇಬ್ಬರು ಹೆಣ್ಮಕ್ಕ... ಒಳ್ಳೆಯ ಸಂಬಂಧಕ್ಕೆ ಮೈ ತುಂಬಾ ಚಿನ್ನ ಕೈ ತು... ವರದಕ್ಷಿಣೆ ನೀಡಿಯೇ ಕೊಟ್ಟಿದ್ದರು. ಒಬ್ಬ ಮಗ...



ಗಂಗಾವತಿ: ಅನ್ಸಾರಿ 'ಬ್ರೇಕಿಂಗ್ ನ್ಯೂಸ್' ಹಿಂದಿನ ಹಕೀಕತ್ತು!


ಕ್ಬಾಲ್ ಅನ್ಸಾರಿ

ಇತ್ತೀಚೆಗೆ ಕೆಲ ಕನ್ನಡದ 'ಟೀ'ವಿ ಚಾನೆಲ್‌ಗಳಲ್ಲಿ ಕಿಂಗ್ ನ್ಯೂಸ್ ಒಂದು ಬಿತ್ತರವಾಯ್ತು. ಅದು ಗಾವತಿಯ ಪಕ್ಷ-ವಂಚಿತ ಶಾಸಕ ಇಕ್ಬಾಲ್ ಸಾರಿಗೆ ಸಂಬಂಧಿಸಿದ್ದು. ಅನ್ಸಾರಿ ತನ್ನ ಪಿತ್ರಾರ್ಜಿತ ಯನ್ನೆಲ್ಲ ಎರಡನೇ ಹೆಂಡತಿ ಕಂ ನಟಿ ಪಂಚಮಿ ರಿಗೆ ಬರೆದಿಟ್ಟು ಒಡಹುಟ್ಟಿದ ತಮ್ಮಂದಿರಿಗೆ ಸ ಮಾಡಿದ್ದಾರೆ ಅನ್ನೋದು ಇಡೀ ವೃತ್ತಾಂತದ ರಣ. ಅದಕ್ಕೆ ಸಾಥ್ ನೀಡುವಂತೆ ಅನ್ಸಾರಿಯ ಮ್ಮಂದಿರಿಬ್ಬರು ಮಾಧ್ಯಮದ ಮುಂದೆ ಅಣ್ಣನ ರುದ್ಧ ಹರಿಹಾಯ್ದ ಬೂಸ್ಟ್ ಬೇರೆ. ಒಟ್ಟಿನಲ್ಲಿ ನ್ಸಾರಿಯನ್ನು ವಿಲನ್ ಮಾಡಬೇಕೆನ್ನುವ ಉದ್ದೇಶಕ್ಕೆ ಲ್ಲಿ ಒಗ್ಗರಣೆಗಳು ಬೇಕಿದ್ದವೋ ಅವೆಲ್ಲವನ್ನೂ ರಿಗೆ ಒಟ್ಟೊಟ್ಟಿಗೆ ಬಡಿಸಿ ತಬ್ಬಿಬ್ಬು ಮಾಡಲಾಯ್ತು. ರೆ ಇದರ ಹಿಂದೆ ಇದ್ದದ್ದು ಒಂದು ಕ್ಷುಲ್ಲಕ ನಾವಣಾ ರಾಜಕಾರಣದ ಕಾಲೆಳೆಯುವ ಹಕೀಕತ್ತು ನ್ನೋದನ್ನು ಮಾತ್ರ ಯಾರೂ ಅರ್ಥ ಡಿಕೊಳ್ಳಲೇ ಇಲ್ಲ.

ಭುಗಿಲೆದ್ದ ಆ ಹೈಡ್ರಾಮಾದ ಸೂತ್ರ ಹಿಡಿದು ತದ್ದು ಗಂಗಾವತಿ ಬಿಜೆಪಿಯ ಪರಣ್ಣ ಮುನವಳ್ಳಿ. ಲಿಗೆ ಈ ಬಿಜೆಪಿಗರಿಗೆ ಜನರ ಜೊತೆ ನಿಂತ ್ರಾಸವೇ ಇಲ್ಲ. ಹಾಗಾಗಿ ತಾವು ಗೆಲ್ಲಬೇಕೆಂದರೆ ರರನ್ನು ಆಕರ್ಷಿಸುವ ಗಿಮಿಕ್ ಡಬೇಕೆನ್ನುವುದನ್ನು ಚೆನ್ನಾಗಿ ಕರಗತ ಡಿಕೊಂಡಿದ್ದಾರೆ. ಅದರಲ್ಲೂ ತಮ್ಮ ಎದುರಿಗೆ ಸ್ಲಿಂ ಅಭ್ಯರ್ಥಿ ಇದ್ದರಂತೂ ಇವರಿಗೆ ಹಬ್ಬವೋ ್ಬ. ಕೋಮುದಳ್ಳುರಿ ಹಚ್ಚಿ ಜನರನ್ನು ಧರ್ಮದ ಾರದಲ್ಲಿ ಎತ್ತಿಕಟ್ಟಿ ಬೇಳೆ ಯಿಸಿಕೊಂಡುಬಿಡುತ್ತಾರೆ. ಕೆಲ ದಿನಗಳ ಹಿಂದೆ ಣ್ಣ ಮುನವಳ್ಳಿ ಅನ್ಸಾರಿಯ ವಿರುದ್ಧ ಇಂತದ್ದೇ ದು ಪ್ರಯತ್ನ ನಡೆಸಿದ್ದ. ಹನುಮಜಯಂತಿ ನೆಪದಲ್ಲಿ ಜರಂಗಿ ಭಕ್ತರನ್ನು ಮುಂದೆ ಬಿಟ್ಟು ಗಲಭೆ ಎಬ್ಬಿಸಲು ಸಕಲ ಸನ್ನದ್ಧನಾಗಿದ್ದ. ಆದರೆ ಶಾಸಕ ಅನ್ಸಾರಿ ಸಂದರ್ಭವನ್ನು ಎಚ್ಚರಿಕೆಯಿಂದ ನಿಭಾಯಿಸಿದ್ದರಿಂದ ಪರಣ್ಣ ತನ್ನ ಮೈಯನ್ನು ಪರಪರ ಕೆರೆದುಕೊಂಡು ಕೈಕೈ ಹಿಸುಕಿಕೊಂಡಿದ್ದ. ಯಾವಾಗ ಅದು ಸಾಧ್ಯವಾಗಲಿಲ್ಲವೋ ಆಗ ಆತ ಕೈಹಾಕಿದ್ದೇ ಅನ್ಸಾರಿಯ ವೈಯಕ್ತಿಕ ಬದುಕನ್ನು ಕೆದಕಿ ಬೀದಿಗೆಸೆವ ಚೀಪ್ ಪಾಲಿಟಿಕ್ಸ್‌ಗೆ. ಅದಕ್ಕೆ ಆತನಿಗೆ ನೆರವಾಗಿ ನಿಂತದ್ದು 'ಲಿಕ್' ಸಂಸ್ಕೃತಿಯ ಚಾನೆಲ್‌ನ ಲೋಕಲ್ ವರದಿಗಾರ.

'ಮುಕ್ಕು'ವುದಕ್ಕೆ ಹೆಸರಾದ ಆ ವರದಿಗಾರ ತನ್ನದೇ ಲಿಂಗಾಯತ ಜಾತಿಯ ಪರಣ್ಣ ಮುನವಳ್ಳಿಯ ಅಪ್ಪಟ ಫಾಲೋವರ್. ಪರಣ್ಣ ಮುನವಳ್ಳಿ ಸುಮ್ಮನೇ ಹಚ್ಯಾ ಅಂದರೆ ಸಾಕು ಮೈಲು ದೂರಕ್ಕೆ ಓಡಿಹೋಗಿ ವಾಪಾಸ್ ಕಾಲಬುಡಕ್ಕೇ ಬಂದುಬೀಳುವಷ್ಟು ನಿಯತ್ತಿನ ಪ್ರಾಣಿ. ತನ್ನ ಒಂದಷ್ಟು ಚೇಲಾಗಳನ್ನು ಜೊತೆ ಮಾಡಿ ಆ ವರದಿಗಾರನನ್ನು ಅನ್ಸಾರಿಯ ಖಾಸಗಿ ಬದುಕು ಬೆದಕುವ ಕೆಲಸಕ್ಕೆ ಪರಣ್ಣ ನೇಮಿಸಿದ್ದ. ಆ ಕಾಯಕದಲ್ಲಿ ಅವರಿಗೆ ಸಿಕ್ಕಿದ್ದು ಅನ್ಸಾರಿ ತನ್ನ ಒಂದು ಬಾರ್ ಅನ್ನು ಎರಡನೇ ಹೆಂಡತಿ ಪಂಚಮಿ ಹೆಸರಿಗೆ ಬರೆದದ್ದು. ಈ ಮೊದಲೇ ಆಸ್ತಿ ವಿಚಾರವಾಗಿ ಅಣ್ಣ ಇಕ್ಬಾಲ್ ಅನ್ಸಾರಿಯ ವಿರುದ್ಧ ಸುಪ್ರೀಂಕೋರ್ಟ್‌ವರೆಗೆ ದಾವೆ ಕೊಂಡೊಯ್ದು ಮುಖಕ್ಕೆ ಮಂಗಳಾರತಿ ಮಾಡಿಸಿಕೊಂಡಿದ್ದ ತಮ್ಮಂದಿರಾದ ಅಮ್ಜದ್ ಅನ್ಸಾರಿ, ಅಜರ್ ಅನ್ಸಾರಿಗಳೂ ಆ ವರದಿಗಾರನೊಟ್ಟಿಗೆ ಕೈಜೋಡಿಸಿದ್ದರು.




ಅಸಲಿ ವಿಚಾರವೇನೆಂದರೆ ಚಾನೆಲ್ ಬಿತ್ತರಿಸಿದಂತೆ ಅದು ತಾಜಾ ವಿಷಯವೇನೂ ಆಗಿರಲಿಲ್ಲ. ಐದಾರು ವರ್ಷಗಳ ಹಿಂದೆಯೇ ಕುಟುಂಬದ ಎಲ್ಲರ ಸಮ್ಮುಖದಲ್ಲಿ ಇತ್ಯರ್ಥವಾಗಿ ತುಕ್ಕು ಹಿಡಿದಿದ್ದ ರದ್ದಿ ಸಮಾಚಾರ. ಅನ್ಸಾರಿ ಮತ್ತು ಕಿರುತೆರೆ ನಟಿ ಪಂಚಮಿ ಇಬ್ಬರೂ ಒಬ್ಬರಿಗೊಬ್ಬರು ಇಷ್ಟಪಟ್ಟು ಮದುವೆಯಾದವರು. ಅನ್ಸಾರಿಯ ತಾಯಿಯೇ ಮುಂದೆ ನಿಂತು 2005ರಲ್ಲಿ ಇವರಿಬ್ಬರ ಮದುವೆ ಮಾಡಿಸಿ ದ್ದರು. ಹಾಗಿರುವಾಗ ಅದು ಅನ್ಸಾರಿಯ ಅನೈತಿಕ ಸಂಬಂಧ ಹೇಗಾಗುತ್ತೆ? ಆ ಬಗ್ಗೆ ಚಾನೆಲ್ ತಲೆಕೆಡಿಸಿಕೊಳ್ಳಲಿಲ್ಲ.



ಆಮೇಲೆ ಮಾಧ್ಯಮಗಳು ಆರೋಪಿಸಿದಂತೆ ಅನ್ಸಾರಿ ತನ್ನೆಲ್ಲಾ ಪಿತ್ರಾರ್ಜಿತ ಆಸ್ತಿಯನ್ನು ತಮ್ಮಂದಿರಿಗೆ ವಂಚಿಸಿ ಪಂಚಮಿ ಹೆಸರಿಗೆ ಬರೆದದ್ದಲ್ಲ. ಅವರ ಪಿತ್ರಾರ್ಜಿತ ಆಸ್ತಿ ಈ ಮೊದಲೇ ಇತ್ಯರ್ಥವಾಗಿತ್ತು. ಪರಮ ಅಪಾಪೋಲಿಗಳಾಗಿದ್ದ ಅಮ್ಜದ್ ಅನ್ಸಾರಿ ಮತ್ತು ಅಜರ್ ಅನ್ಸಾರಿ ತಮ್ಮ ಪಾಲಿನ ಆಸ್ತಿ ಉಳಿಸಿಕೊಳ್ಳಲಾಗದೆ ಕಳೆದುಕೊಂಡು ನಂತರ ಅಣ್ಣ ಅನ್ಸಾರಿಯ ಮೇಲೆ ಕೇಸ್ ಹಾಕಿದ್ದರು. ಜೆಎಂಎಫ್‌ಸಿ ನ್ಯಾಯಾಲಯವೇ ಅವರ ವಾದವನ್ನು ತಳ್ಳಿಹಾಕಿತ್ತು. ಆಮೇಲೆ ಹೈಕೋರ್ಟ್, ಸುಪ್ರೀಂ ಕೋರ್ಟ್ ಸಹ ಅವರಿಬ್ಬರ ಬೇಡಿಕೆಯಲ್ಲಿ ಹುರುಳಿಲ್ಲ ಎಂದು ವಜಾ ಮಾಡಿದ್ದವು. ಆಗಿನಿಂದಲೂ ಅಣ್ಣನ ಮೇಲೆ ಅವರಿಗೆ ಸಿಟ್ಟು ಇದ್ದೇ ಇತ್ತು.

ಇನ್ನು ಅನ್ಸಾರಿ, ಪಂಚಮಿ ಹೆಸರಿಗೆ ಬರೆದಿರೋದು ಕೇವಲ ಒಂದು ಬಾರ್ ಅನ್ನು ಅಷ್ಟೆ. ಇನ್ನುಳಿದಂತೆ 20ಕ್ಕೂ ಹೆಚ್ಚು ಆತನ ಹೆಸರಿನಲ್ಲಿರುವ ಬಾರ್‌ಗಳು ತನ್ನ ಮತ್ತು ಮೊದಲ ಕುಟುಂಬದ ಹೆಸರಿನಲ್ಲೇ ಇವೆ. ಇದರಲ್ಲಿ ಅಬ್ಬರಿಸಿ ಬೊಬ್ಬಿರಿ ಯುವಂತಹ ವಂಚನೆಯೇ ಇಲ್ಲ. ತೀರಾ ಸ್ಪಷ್ಟವಾದ ಖಾಸಗಿ ವಿಚಾರ. ಖುದ್ದು ಇಕ್ಬಾಲ್ ಅನ್ಸಾರಿಯ ತಾಯಿಯೇ "ಇದರಲ್ಲಿ ತಮ್ಮ ಹಿರಿ ಮಗನ ತಪ್ಪೇನೂ ಇಲ್ಲ, ಆಸ್ತಿಯಲ್ಲಿ ಆತ ತಮ್ಮಂದಿರಿಗೆ ಮೋಸ ಮಾಡಿಲ್ಲ ಹಾಗೂ ಪಂಚಮಿಯನ್ನು ನಮ್ಮ ಒಪ್ಪಿಗೆಯಲ್ಲೇ ಮದುವೆಯಾಗಿದ್ದಾನೆ" ಎಂದು ಹೇಳಿಕೊಂಡಿದ್ದಾರೆ. ಇನ್ನು ಅನ್ಸಾರಿಯ ಮತ್ತಿಬ್ಬರು ತಮ್ಮಂದಿರು ಸಹ ಪತ್ರಿಕಾಗೋಷ್ಠಿ ನಡೆಸಿ "ನಮ್ಮ ಸಹೋದರ ಇಕ್ಬಾಲ್ ಅನ್ಸಾರಿಯನ್ನು ಸೋಲಿಸಲು ಬಿಜೆಪಿಯವರು ನಮ್ಮ ಕುಟುಂಬದವರನ್ನೇ ಹಾದಿತಪ್ಪಿಸಿ ಹುಟ್ಟುಹಾಕಿದ ಕೀಳು ಪ್ರಯತ್ನ ಇದು. ನಮ್ಮ ಕುಟುಂಬದಲ್ಲಿ ಅಂತಹ ಯಾವ ವಂಚನೆಯೂ ನಡೆದಿಲ್ಲ" ಎಂಬುದಾಗಿ ಸ್ಪಷ್ಟ ಮಾತುಗಳಲ್ಲಿ ಹೇಳಿದ್ದಾರೆ. ಇದಿಷ್ಟು ಸಾಕಲ್ಲವೆ ಅನ್ಸಾರಿ ಸ್ಟೋರಿ ಹಿಂದಿನ ಹಕೀಕತ್ತನ್ನು ಬಿಚ್ಚಿಡಲು.



ಆದರೆ ಪರಣ್ಣ ಮುನವಳ್ಳಿಯ ಋಣಕ್ಕೆ ಬಿದ್ದ ವರದಿಗಾರನೊಬ್ಬ ಅದಕ್ಕೆ ಅನೈತಿಕ ಸಂಬಂಧದ ತಿರುವು ಕೊಟ್ಟು, ಪಿತ್ರಾರ್ಜಿತ ಆಸ್ತಿ ವಂಚನೆಯ ಮಸಿ ಬಳಿದು ಹಗಲೂರಾತ್ರಿ ಜಗ್ಗಾಡಿದ್ದಾನೆ. ಇದಕ್ಕೆ ಸ್ಪಷ್ಟನೆ ಕೊಡಬೇಕಿದ್ದ ಅನ್ಸಾರಿ ಆತುರಕ್ಕೆ ಬಿದ್ದು ಆ ವರದಿಗಾರನಿಗೆ ಧಮಕಿ ಹಾಕಿಸಿದ್ದು ಅವರು ಮಾಡಿದ ಮಹಾ ತಪ್ಪು. ಅಲ್ಲಿಗೆ ರೋಗಿ ಬಯಸಿದ್ದು ಹಾಲುಅನ್ನ, ವೈದ್ಯ ಹೇಳಿದ್ದೂ ಹಾಲು ಅನ್ನ ಅನ್ನೋ ಹಾಗಾಯ್ತು ಪರಣ್ಣನ ಪಾಲಿಗೆ. ಅನ್ಸಾರಿ ವಿರುದ್ಧ ವರ್ಣರಂಜಿತ ನೆಗೆಟಿವ್ ಸ್ಟೋರಿಯೊಂದು ರೂಪುಗೊಂಡ ಬಗೆ ಇದು.

ಇಕ್ಬಾಲ್ ಅನ್ಸಾರಿಯನ್ನು ಸೋಲಿಸಲು ಪರಣ್ಣ ಇಂತಹ ಕೀಳು ಟ್ರಿಕ್ಸ್ ಮಾಡುವುದೇ ಬೇಕಾಗಿರಲಿಲ್ಲ. ಯಾಕೆಂದರೆ ಕ್ಷೇತ್ರದಲ್ಲಿ ಇಕ್ಬಾಲ್ ಅನ್ಸಾರಿ ಈಗಾಗಲೇ ತಕ್ಕಮಟ್ಟಿಗೆ ವಿಶ್ವಾಸ ಕಳೆದುಕೊಂಡಿರುವುದರಿಂದ ಮುಂದಿನ ಬಾರಿ ಅವರು ಗೆಲ್ಲುವುದು ಕಷ್ಟವೇ. ಜೆಡಿಎಸ್‌ನಿಂದ ಬಂಡಾಯವೆದ್ದು ಕಾಂಗ್ರೆಸ್‌ನೊಳಗೆ ಒಂದು ಕಾಲು ತೂರಿಸಿ ಅತಂತ್ರವಾಗಿರುವ ಆತನಿಗೆ ಕಾಂಗ್ರೆಸ್ ಟಿಕೆಟ್ ತಪ್ಪಿಸಲು ಕಾಂಗ್ರೆಸ್‌ನ ಮಾಜಿ ಎಂಎಲ್‌ಸಿ ಎಸ್.ಆರ್.ಶ್ರೀನಾಥ್ ತೀವ್ರ ಕಸರತ್ತು ನಡೆಸುತ್ತಿದ್ದಾರೆ. ಅಲ್ಲದೇ ಕೋಮುದಾದಕ್ಕೆ ದಿಟ್ಟ ಉತ್ತರ ಕೊಡುವಲ್ಲಿ ಅನ್ಸಾರಿ ಸೋತಿರುವುದು ಅವರಿಗೆ ಮುಂದಿನ ಬಾರಿ ಮುಳುವಾಗಲಿದೆ. ಆದರೂ ತನ್ನ ರಾಜಕೀಯ ಬದುಕಿನುದ್ದಕ್ಕೂ ಇಂಥದ್ದೇ ಕೀಳು ಟ್ರಿಕ್‌ಗಳ ಮೂಲಕ, ಬೇರೆಯವರ ತೇಜೋವಧೆಯ ಮೂಲಕ, ಎಲ್ಲಕ್ಕಿಂತ ಮುಖ್ಯವಾಗಿ ಸಮಾಜದಲ್ಲಿ ಕೋಮುಶಾಂತಿಯನ್ನು ಕದಡುವ ಬಿಜೆಪಿಯ ಪರಣ್ಣನಿಗಿಂತ ಅನ್ಸಾರಿಯೇ ವಾಸಿ ಎಂಬ ಭಾವನೆ ಜನರಲ್ಲಿದೆ. ಅದನ್ನು ಪರಣ್ಣ ಟೀವಿ ವರದಿಗಾರನ ಮೂಲಕ ಮತ್ತೆ ಸಾಬೀತು ಮಾಡಿಕೊಂಡಿದ್ದಾನೆ.

■ ವರದಿಗಾರ

ಕತೆ

.ಬಿ.ಎ. ಓದಿಸಿ ವಿದೇಶಕ್ಕೆ ಕಳುಹಿಸಿದ್ದರು. ಮತ್ತೊರ್ವ ನಿಗೆ ಒಳ್ಳೆಯ ವ್ಯಾಪಾರವೊಂದನ್ನು ಹಾಕಿ ಕೊಟ್ಟಿದ್ದರು. ರೆ ಮೋನಾಕ ಮಾತ್ರ ಬದಲಾಗಲೇ ಇಲ್ಲ. ಅಲ್ಲಲ್ಲಿ ತು ಬಿದ್ದ ಮಸಿ ಮೆತ್ತಿದ ಬನಿಯನು, ಚೌಕುಳಿ ಲಾಣ ಲುಂಗಿ, ಇಳಿಜಾರಿನಾಕಾರ ಸವೆದ ಬೈಕಾಫ್ ಲಿ, ಹಳೇ ಹೀರೋ ಸೈಕಲ್, ಮತ್ತದೇ ಪುರಾತನ ಹೊಟೇಲ್. ಕೈಯಲ್ಲಿ ಚೆನ್ನಾಗಿ ಕಾಸು ಓಡುತ್ತಿದ್ದರೂ ಡ್ಡಸ್ತ, ಧಿಮಾಕು ಮೋನಾಕನ ಹತ್ತಿರವೂ ಸುಳಿದಿರಲಿಲ್ಲ. ಪಕ್ಕದ ಯಾವುದೇ ಜಾತಿಯ ಬಡ ಹೆಣ್ಮಕ್ಕಳ ಮದುವೆಗೆ ೀನಾಕನ ಐದು ಸಾವಿರ ಗ್ಯಾರಂಟಿ.

ಹೀಗೆ ಮೋನಾಕನ ಕಾರುಬಾರು ಸಲೀಸಾಗಿ ಸಾಗುತ್ತಿತ್ತು. ದು ಸಂಜೆ ಸುಮಾರು 7.30 ರ ಹೊತ್ತಿರಬಹುದು. ಟೇಲ್‌ನ ಒಳಗೆ ಮತ್ತು ಹೊರಗಿನ ಅರಳಿಮರದ ಯ ಸುತ್ತೆಲ್ಲಾ ಮೋನಾಕನ ಗಿರಾಕಿಗಳು ಪಕ್ವಿರ್ ಸುಕ್ಕ ಬ್ಬುತ್ತಿದ್ದರು. ಯಮವೇಗದಲ್ಲಿ ಅದೆಲ್ಲಿಂದಲೋ ಎರಡು ಯಲ್ ಎನ್‌ಫೀಲ್ಡ್ ಬುಲೆಟ್‌ಗಳು ಮೋನಾಕನ ಟೇಲ್‌ನ ಒಳನುಗ್ಗಿ ಚಿಂದಿ ಉಡಾಯಿಸಿದವು. ಅದರ ದೆಸೀ ಮುಂಗೈ ಮಣಿಗಂಟಿಗೆ ಎರಡಿಂಚು ದಪ್ಪದಲ್ಲಿ ಢ ಬಣ್ಣಗಳ ದಾರಗಳನ್ನು ಕಟ್ಟಿದ್ದ ಹಣೆಯ ನಡುಭಾಗಕ್ಕೆ ದ್ದನೆಯ ಕೆಂಪು ಮತ್ತು ಕೇಸರಿ ನಾಮ ಬಳಿದಿದ್ದ ಯುವಕರ ಗುಂಪೊಂದು "ಜೈ ಶ್ರೀರಾಮ್, ಜೈ ಭಜರಂಗ ಬಲಿ" ಎನ್ನುತ್ತಾ ಜೀಪೊಂದರಿಂದ ಧುಮುಕಿ ತಮ್ಮ ಕೈಯಲ್ಲಿದ್ದ ದೊಣ್ಣೆಗಳನ್ನು ಯದ್ವಾತದ್ವಾ ಬೀಸಿದರು. ಅನಿರೀಕ್ಷಿತ ದಾಳಿಯಿಂದ ಹೆದರಿ ಕಂಗೆಟ್ಟ ಗಿರಾಕಿಗಳು ಜೀವವಿದ್ದರೆ ಬೇಡಿ ತಿಂದೇವು ಎಂಬಂತೆ ಅಲ್ಲಿಂದ ಕಾಲ್ಕಿತ್ತರು. ಮೋನಾಕನಿಗೆ ಮುಖ, ಮುಸುಡಿ ನೋಡದೇ ಬಡಿದರು. ಮೋನಾಕನ ಮುಂದಿನ ಎರಡು ಹಲ್ಲುಗಳು ಕಿತ್ತು ಹೋದವು. ಬಲಗೈಯ ಮೂಳೆ ಮುರಿಯಿತು. ಓಡಲಾಗದ ಮೋನಾಕ ಅರ್ಧ ಫರ್ಲಾಂಗ್ ದೂರದಲ್ಲಿ ಕುಸಿದು ಬಿದ್ದರು. ಮೋನಾಕನ ಕಣ್ಮುಂದೆಯೇ ಅವರ ಹೊಟೇಲ್ ಹೊತ್ತಿ ಭಸ್ಮವಾಯಿತು. ಇದನ್ನು ಕಣ್ಣಾರೆ ಕಂಡು ಮೋನಾಕ ಪ್ರಜ್ಞೆ ತಪ್ಪಿ ಬಿದ್ದರು. ಎಚ್ಚರವಾಗುವಾಗ ಅವರು ಆಸ್ಪತ್ರೆಯ ಬೆಡ್‌ನಲ್ಲಿದ್ದರು. ಸುಮಾರು ವಾರಗಟ್ಟಲೆ ಆಸ್ಪತ್ರೆಯಲ್ಲಿ ಮಲಗಿದ ಮೋನಾಕ ಎರಡು ತಿಂಗಳ ವಿಶ್ರಾಂತಿಯ ಬಳಿಕ ಮತ್ತದೇ ಸ್ಥಳದಲ್ಲಿ ತೆಂಗಿನ ಸೋಗೆಯ ತಟ್ಟಿ ಕಟ್ಟಿ ಹೊಟೇಲ್ ಪುನರಾರಂಭಿಸಿದರು. ಆದರೆ ಈ ಬಾರಿ ಮೋನಾಕನ ಮೆನುವಿಗೆ ಬೀಫ್ ಸುಕ್ಕ ಹರಾಂ ಆಗಿ ಚಿಕನ್ ಸುಕ್ಕ ಹಲಾಲ್ ಆಯಿತು. ಸ್ವಲ್ಪ ದಿನಗಳಲ್ಲೇ ಮೋನಾಕನ ವ್ಯಾಪಾರ ಮತ್ತೆ ಚಿಗಿತುಕೊಂಡಿತು.

ತನ್ನ ಹೊಟೇಲ್ ಮೇಲಿನ ದಾಳಿಯ ರೂವಾರಿ ಅನ್ನಪೂರ್ಣ ಹೊಟೇಲ್‌ನ ಆನಂದಣ್ಣ ಎಂಬುವುದು ಮೋನಾಕನಿಗೆ ಆಗಲೇ ತಿಳಿದಿತ್ತಾದರೂ ಮೋನಾಕ ಯಾರ ಮೇಲೂ ಹಗೆ ಸಾಧಿಸಲಿಲ್ಲ. ಕೆಲವು ಬ್ಯಾರಿ ಹುಡುಗರು ಕೇಸು ಕೊಡದ್ದಕ್ಕಾಗಿ ಮೋನಾಕನ ಮೇಲೆ ಮುನಿಸಿಕೊಂಡಿದ್ದರು. ಅವರಿಗೆಲ್ಲಾ ಮೋನಾಕ ಹೇಳಿದ್ದಿಷ್ಟೆ "ಅಲ್ಲಾಹು ನೋಡಿಕೊಳ್ಳುತ್ತಾನೆ."

ಮೋನಾಕ ಹೊಟೇಲ್ ಪುನರಾರಂಭಿಸಿ ಮೂರು ತಿಂಗಳಾಗುವಷ್ಟರಲ್ಲಿ ಅನ್ನಪೂರ್ಣ ಹೊಟೇಲ್ ಮುಚ್ಚಿತು. ಸಾಲದ ಶೂಲದಿಂದ ತಪ್ಪಿಸಲಾಗದ ಆನಂದಣ್ಣನಿಗೆ ಹೊಟೇಲ್ ಮುಚ್ಚುವುದು ಅನಿವಾರ್ಯವಾಗಿತ್ತು.

ದಿನೇದಿನೇ ತೂಕ ಕಳೆದುಕೊಂಡ ಆನಂದಣ್ಣ ನಿತ್ರಾಣರಾದರು. ಆನಂದಣ್ಣನ ಮಕ್ಕಳು ವ್ಯವಹಾರದಲ್ಲಿ ನಷ್ಟವಾದುದರಿಂದ ಚಿಂತೆಯಲ್ಲಿ ಹೀಗಾಗಿರಬಹುದೆಂದೇ ತಿಳಿದಿದ್ದರು. ಆದರೆ ದಿನಗಳುರುಳುತ್ತಲೇ ಆನಂದಣ್ಣನ ಸ್ಥಿತಿ ಬಿಗಡಾಯಿಸಿತು. ನಡೆದಾಡಲೂ ಶಕ್ತಿಯಿಲ್ಲದಂತಾಯಿತು. ಆಸ್ಪತ್ರೆಗೆ ದಾಖಲಿಸಿ ಪರೀಕ್ಷಿಸಿದಾಗ ಅವರಿಗೆ ಟಿ.ಬಿ. ಕಾಯಿಲೆಯಿರುವುದು ಪತ್ತೆಯಾಯಿತು. ಕಾಯಿಲೆ ಉಲ್ಬಣಗೊಂಡಿದ್ದರಿಂದ ತಿಂಗಳುಗಳ ಕಾಲ ಆಸ್ಪತ್ರೆಯಲ್ಲೇ ಕಳೆಯಬೇಕಾಗಿ ಬಂದಿತ್ತು. ಆನಂದಣ್ಣನನ್ನು ಡಿಸ್ಚಾರ್ಜ್ ಮಾಡುವಾಗ ವೈದ್ಯರು ಹೇಳಿದ್ದಿಷ್ಟೆ: "ಬರೇ ಮಾತ್ರೆಯಿಂದ ಏನೂ ಆಗದು. ಮುಂಚಿನಂತೆ ಆರೋಗ್ಯವಂತರಾಗಬೇಕಾದರೆ ಕನಿಷ್ಠ ವಾರಕ್ಕೆ ಮೂರು ಬಾರಿಯಾದರೂ ದನದ ಮಾಂಸ ತಿನ್ನಬೇಕು." ಆಗ ಆನಂದಣ್ಣನಿಗೆ ನೆನಪಾದುದು ಮೋನಾಕನ ಹೊಟೇಲ್ ಮಾತ್ರ.....

■ ಇಸ್ಮತ್ ಫಜೀರ್



ಪ್ಲಾಸ್ಟಿಕ್ ಭೂತ

ಟಾರ್ಗೆಟ್ ಅನ್ನಭಾಗ್ಯ!

ಮದ್ದೂರು ತಾಲ್ಲೂಕು ನಗರಕೆರೆ ಗ್ರಾಮದ ಎಳೆನೀರು ಕೃಷ್ಣನ ಮನೆಯಲ್ಲಿ ಪ್ಲಾಸ್ಟಿಕ್ ಅನ್ನ ತಿಂದವರಿಗೆಲ್ಲ ಹೊಟ್ಟೆ ನೋವಂತೆ. ಆತ 1200 ರೂಪಾಯಿ ತೆತ್ತು ಕೊಂಡ 25 ಕೆಜಿಯ ಅಕ್ಕಿಯ ಮೂಟೆಯ ತುಂಬೆಲ್ಲಾ ಪ್ಲಾಸ್ಟಿಕ್ಕಿನದ್ದೇ ಅಕ್ಕಿಯಂತೆ. ಆದರಿಂದ ಮಾಡಿದ ಅನ್ನ ಪೂರ್ತಿ ಮುದ್ದೆಯಂತೆ. ಉಂಡೆ ಮಾಡಿ ನೆಲಕ್ಕೆ ಬಡಿದರದು ಕ್ರಿಕೆಟ್ ಚೆಂಡಿನಂತೆ ಪುಟಪುಟದು ಕುಣಿಯಿತಂತೆ. ಅದನ್ನು ತಿನ್ನುವುದನ್ನು ನಿಲ್ಲಿಸಿದಾಗಲೇ ಮನೆಮಂದಿಯ ಹೊಟ್ಟೆನೋವೂ ನಿಂತಿತಂತೆ!

* ನಾಗಮಂಗಲದ ಚಿಲ್ಲರೆ ಅಂಗಡಿಯೊಂದರಲ್ಲಿ ಯಾರೋ ಮೋಹನ್ ಎಂಬಾತ ಕೊಂಡ ಡಜನ್ ಕೋಳಿ ಮೊಟ್ಟೆಯಲ್ಲಿ ಮೂರು ಮೊಟ್ಟೆಗಳು ಪ್ಲಾಸ್ಟಿಕ್ಕಂತೆ. ಆಮ್ಲೆಟ್ ಮಾಡಲು ಹೋದರೆ ಪ್ಲಾಸ್ಟಿಕ್‌ನ ಪೊರೆ ಬಂತಂತೆ. ಅದನ್ನು ಆಹಾರ ಇಲಾಖೆಯ ಅಧಿಕಾರಿಗಳು ಮೈಸೂರಿನ ಸಿಎಫ್‌ಟಿಆರ್‌ಐಗೆ ಹೆಚ್ಚಿನ ಪರೀಕ್ಷೆಗೆಂದು ಕಳಿಸಿದ್ದಾರಂತೆ!!

* ಮದ್ದೂರು ತಾಲ್ಲೂಕು ಗೆಜ್ಜಲಗೆರೆಯ ಹೆದ್ದಾರಿಯಲ್ಲಿ ಮೂಟೆಗಟ್ಟಲೆ ಪ್ಲಾಸ್ಟಿಕ್ ಸಕ್ಕರೆ ಸಾಗಿಸುತ್ತಿದ್ದ ಟಾಟಾ ಏಸ್ ಗಾಡಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆಯಿತಂತೆ. ಅದರಿಂದ ಬದ್ದಿದ್ದ ಸಕ್ಕರೆಯೇ ಪ್ಲಾಸ್ಟಿಕ್ ಸಕ್ಕರೆಯೆಂದು ಪತ್ತೆ ಹಚ್ಚಿದ ಗ್ರಾಮಸ್ಥರೆಲ್ಲ ಸಕ್ಕರೆಯನ್ನು ಮದ್ದೂರು ತಹಸೀಲ್ದಾರ್ ಹರ್ಷರಿಗೊಪ್ಪಿಸಿ ದೂರು ದಾಖಲಿಸಿದ್ದಾರಂತೆ.

* ಹಾಸನದಲ್ಲೂ ಪ್ಲಾಸ್ಟಿಕ್ ಅಕ್ಕಿಯಂತೆ. ಉತ್ತರ ಕರ್ನಾಟಕದ ಕೊಪ್ಪಳದಲ್ಲಿ ಪ್ಲಾಸ್ಟಿಕ್ ಅಕ್ಕಿಯ ಜೊತೆ ಸಕ್ಕರೆಯೂ ಪತ್ತೆಯಂತೆ. ಬೀದರ್‌ನ ಯಾವುದೋ ಗ್ರಾಮದಲ್ಲಿ ಪ್ಲಾಸ್ಟಿಕ್ ಅಕ್ಕಿ ತಿಂದವರು ಅಸ್ವಸ್ಥರಂತೆ. ಚಾಮರಾಜನಗರದ ಸಮಾಜ ಕಲ್ಯಾಣ ಇಲಾಖೆಯ ದಲಿತರ ಹಾಸ್ಟೆಲಿನ ಹುಡುಗರೆಲ್ಲ ಪ್ಲಾಸ್ಟಿಕ್ ಅನ್ನ ತಿಂದು ವಾಂತಿ ಮಾಡಿಕೊಂಡರಂತೆ. ಗುಲಬರ್ಗದಲ್ಲಿ ಪ್ಲಾಸ್ಟಿಕ್ ಮೊಟ್ಟೆ ತಿಂದವರಿಗೆ ಏನೂ ಆಗೇ ಇಲ್ಲವಂತೆ...!

ಹೀಗೆ ರಾಜ್ಯದ ಮೂಲೆಮೂಲೆಗಳಿಂದ ಪುಂಖಾನು ಪುಂಖ ಹರಿದುಬರುತ್ತಲೇ ಇದೆ ಪ್ಲಾಸ್ಟಿಕ್ ಮೊಟ್ಟೆ, ಅಕ್ಕಿ ಸಕ್ಕರೆಗಳ ಬೊಬ್ಬೆಯೋ ಬೊಬ್ಬೆ. ಯಾವ ನ್ಯೂಸ್ ಚಾನಲ್ ನೋಡಿದರೂ ಪ್ಲಾಸ್ಟಿಕ್ಕು, ಯಾವ ಟಿವಿ ಹಾಕಿದರೂ ಪ್ಲಾಸ್ಟಿಕ್ಕು, ಎಲ್ಲೆಲ್ಲಿಯೂ ಪ್ಲಾಸ್ಟಿಕ್ಕು, ಅಂಗಡಿಗಳಿಗೆ ಬಂದ ಮೊಟ್ಟೆಯನ್ನು ಖರೀದಿಸುವವರಿಲ್ಲ, ನ್ಯಾಯ ಬೆಲೆ ಅಂಗಡಿಗಳ ಅಕ್ಕಿಗೆ ಹಿಂದಿನ ಬೇಡಿಕೆಯಿಲ್ಲ, ತಂದ ಸಕ್ಕರೆ ನೀರಲ್ಲಿ ಕರಗುತ್ತೋ ಇಲ್ಲವೋ ನೋಡಿಕೊಂಡ ಮೇಲೂ ಕಾಫಿ, ಟೀ ಕುಡಿಯುವವರಿಗೆಂತದೋ ತಳಮಳ. ಭಾರತದ ಪರಮ ಶತ್ರು ಪಾಕಿಸ್ತಾನದ ಮಿತ್ರ ಚೀನಾ ಇಂಥದೊಂದು ಪ್ಲಾಸ್ಟಿಕಾ ಸುರನ ಸೃಷ್ಟಿಕರ್ತ. ಅದಕ್ಕೆ ಭಾರತವನ್ನು ಸರ್ವನಾಶಗೈಯಲು ಈ ಪ್ಲಾಸ್ಟಿಕ್ ಎಂಬ ಬ್ರಹ್ಮಾಸ್ತ್ರವೇ ಬೇರೆಲ್ಲ ಅಸ್ತ್ರಗಳಿಗಿಂತಲೂ ಹೆಚ್ಚು ಪರಿಣಾಮಕಾರಿಯಂತೆ. ಚೀನಾದಿಂದ ಬಂದ ಲೋಡುಗಟ್ಟಲೇ ಪ್ಲಾಸ್ಟಿಕ್ ಅಕ್ಕಿ, ಸಕ್ಕರೆ, ಕೋಳಿಮೊಟ್ಟೆಗಳನ್ನು ಕರ್ನಾಟಕದ ಭ್ರಷ್ಟ ಸರ್ಕಾರ ಕಮೀಷನ್ ಪಡೆದು ಮಾರುಕಟ್ಟೆಗೆ ಬಿಟ್ಟ ಪರಿಣಾಮವೇ ಈ ಪ್ಲಾಸ್ಟಿಕ್ ಪ್ರಕೋಪ!?

ವಿಲನ್ ಚೀನಾ....?

ವಾಟ್ಸಪ್, ಫೇಸ್‌ಬುಕ್, ಟ್ವಿಟ್ಟರ್‌ಗಳಲ್ಲೂ ಕಳೆದೊಂದು ತಿಂಗಳಿಂದ ಈ ಪ್ಲಾಸ್ಟಿಕ್ ದಿನಸಿಯದ್ದೇ ಅಬ್ಬರ. ಶುರುವಿನಲ್ಲಿ ಪತ್ರಿಕೆ, ಟೀವಿಗಳ ಸಂದಿಗೊಂದಿಗಳಲ್ಲಿ ಕಂಡುಬರುತ್ತಿದ್ದ ಈ ಪ್ಲಾಸ್ಟಿಕ್ ಅಕ್ಕಿಯ ಪ್ರಲಾಪ ಇದ್ದಕ್ಕಿದ್ದಂತೆ ಸಮೂಹ ಸನ್ನಿಯಾಗಿ ಮಾರ್ಪಟ್ಟಿದ್ದು ಹೇಗೆ, ಏಕೆ ಮತ್ತು ಇದರ ಮರ್ಮವಾದರೂ ಏನು? ನಿಜಕ್ಕೂ, ಪ್ಲಾಸ್ಟಿಕ್ ಅಕ್ಕಿಯೆಂಬುದು ಮಾರುಕಟ್ಟೆಯಲ್ಲಿದೆಯೆ? ಪ್ಲಾಸ್ಟಿಕ್‌ನಿಂದ ಸಕ್ಕರೆ ಮಾಡುತ್ತಾರೆಯೆ? ಪ್ಲಾಸ್ಟಿಕ್ ಮೊಟ್ಟೆ ಮಾರುಕಟ್ಟೆಗೆ



ಸಿದ್ದರಾಮಯ್ಯ

ಬಿಟ್ಟು ಚೀನಾ ಭಾರತವನ್ನು ನಿರ್ನಾಮ ಮಾಡಲು ಸಾಧ್ಯ ಅಸಲಿಗೆ ಈ ಪ್ಲಾಸ್ಟಿಕ್ ಅಕ್ಕಿ, ಪ್ಲಾಸ್ಟಿಕ್ ಸಕ್ಕರೆ ಮ ಪ್ಲಾಸ್ಟಿಕ್ ಕೋಳಿಮೊಟ್ಟೆಯ ಹಿಂದಿರುವ ಉದ್ದೇಶವೇ


ಇಂಥ ಪ್ರಶ್ನೆಗಳ ಹುತ್ತಕ್ಕೆ ಕೈಹಾಕುವುದಕ್ಕೂ ಮ ಇತ್ತೀಚಿನ ದಿನಗಳಲ್ಲಿ ಈ ಬಗ್ಗೆ ಕರ್ನಾಟಕದಲ್ಲಿ ನ ಘಟನಾವಳಿಗಳನ್ನೇ ಪರಿಗಣಿಸೋಣ. ಇಲ್ಲಿಗೆ ಎಂಟು ತಿ ಹಿಂದೆ ಕನ್ನಡದ ನ್ಯೂಸ್ ಚಾನಲ್ಲೊಂದು ವಿ ಸುದ್ದಿಯೊಂದನ್ನು ಬಿತ್ತರಿಸಿತು. ಅದು ಚೀನಾದ ಪ್ಲಾ ಕೋಳಿಮೊಟ್ಟೆ. ಕರ್ನಾಟಕದ ಪ್ರಮುಖ ನಗರಗ ಬಿಕರಿಯಾಗುತ್ತಿರುವುದು ಚೀನಾದಿಂದ ಆಮದಾಗಿ ಬ ಕೋಳಿಮೊಟ್ಟೆಯೆಂದೂ ಅದರೊಳಗೆ ದ್ರಾವಕ ರೂ ಪ್ಲಾಸ್ಟಿಕ್ ಲೋಳೆಯಿದೆ ಎಂದೂ ಬೇಯಿಸಿದಾಗ ಅ ತವದ ಮೇಲೆ ಆಮ್ಲೆಟ್ ಮಾಡಲು ಸುರಿದಾಗ ಕೆಲವೊ ಬೆಂಕಿ ಹತ್ತಿಕೊಂಡು ದುರ್ನಾತ ಬರುತ್ತದೆಯೆಂ ಹಾಗೊಮ್ಮೆ ಪ್ಲಾಸ್ಟಿಕ್ ಸುಟ್ಟು ವಾಸನೆ ಬರದೇ ಹೋದ ಅದು ಹೊಟ್ಟೆ ಸೇರಿದ ಮೇಲೆ ಕ್ಯಾನ್ಸರ ಕಾರಣವಾಗುತ್ತದೆಯೆಂಬುದು ಆ ವರದಿಯ ಸಾರಾಂ

ಮೊದಮೊದಲು ಚೀನಾ ದೇಶದ ನಕಲಿ ದ ಕೋರರು ಲಾಭಕ್ಕಾಗಿ ಇಂಥದೊಂದು ಪಾಪಕ್ಕೆ ಕೈಯಿಟ್ ರೆಂಬಂತೆ ಹುಟ್ಟಿಕೊಂಡ ಈ ಸುದ್ದಿ ಕಾಲಕ್ರಮೇ ತರಕಾರಿಗೂ ವ್ಯಾಪಿಸಿತು. ಪ್ಲಾಸ್ಟಿಕ್ ಕ್ಯಾಬೇಜ್, ಪ್ಲಾ ಹೂಕೋಸು, ಪ್ಲಾಸ್ಟಿಕ್ ಈರುಳ್ಳಿ ಇತ್ಯಾದಿಗಳೂ ಮಾರು ಹೊಕ್ಕಿವೆಯೆಂಬಂತೆ ಅಪರೂಪಕ್ಕೊಂದು ಸುದ್ದಿಯ ತೊಡಗಿತ್ತು, ಇಂಥ ಸುದ್ದಿಗಳ ಸಾಮಾನ್ಯ ಲಕ್ಷಣವೇ ಪ್ಲಾಸ್ಟಿಕ್ ದ್ರಾವಣವನ್ನು ಎರಕ ಹುಯ್ದು ಹೂಕೋ ಎಲೆ, ಕ್ಯಾಬೇಜ್ ಪದರಗಳನ್ನು ಯಾರೋ ಚೀ ಜಪಾನಿಯನಂತೆ ಕಾಣುತ್ತಿದ್ದ ವ್ಯಕ್ತಿಯೊಬ್ಬ ನಕಲಿಯ ಸೃಷ್ಟಿಸುತ್ತಿದ್ದ ವೀಡಿಯೋ ಅದು. ಆದರೆ ಆ ವೀಡಿಯ ಭಾರತದ ಯಾವ ಊರಿನಲ್ಲಿ ಚಿತ್ರೀಕರಿಸಿದ್ದು? ವಿಡಿಯ ಸೆರೆ ಹಿಡಿದದ್ದು ಯಾರು? ಈ ಬಗ್ಗೆ ಸರ್ಕಾರದ ಯ ಇಲಾಖೆ ಏನು ಕ್ರಮಕೈಗೊಂಡಿದೆ? ಇತ್ಯಾದಿ ಯಾವೊ ವಿವರಗಳೂ ಇರುತ್ತಿರಲಿಲ್ಲ.

ಕೋಳಿಮೊಟ್ಟೆ!

ಹೀಗೆ ಪ್ಲಾಸ್ಟಿಕ್‌ನಿಂದ ತಯಾರಿಸಿದ ತರಕಾರಿಗ ಯಾರಾದರೂ ಎಲ್ಲಾದರೂ ಮಾರಿದ್ದಾರಾ? ಯಾರಾದ ಖರೀದಿಸಿದ್ದಾರಾ? ಕರ್ನಾಟಕ ಹಾಳಾಗಲಿ ಭಾರ ಎಲ್ಲಾದರೂ ಇಂಥ ತರಕಾರಿಯನ್ನು ಯಾರಾದರೂ ಕ ಉಂಡವರುಂಟಾ? ಇತ್ಯಾದಿ ಯಾವೊಂದು ವಿವರ ಇಂಥ ವರದಿಯಲ್ಲಿರುತ್ತಿರಲಿಲ್ಲ, ನೋಡಿದ ಜನಕ್ಕೆ ಅರ್ಥವಾಗದ ಕಾರಣ ಇದ್ದರೂ ಇರಬಹುದ ಗೊಂದಲವಂತೂ ಇರುತ್ತಿತ್ತು. ಈ ಬಗ್ಗೆ ಸರ್ಕಾರವಾ ಯಾವುದೇ ಸಂಘಟನೆಗಳಾಗಲಿ ಯಾರೂ ಕೆಡಿಸಿಕೊಳ್ಳಲಿಲ್ಲ. ಮೊದಮೊದಲು ಪ್ಲಾಸ್ಟಿಕ್ ಹೂಕೋ ಪ್ಲಾಸ್ಟಿಕ್ ಎಲೆಕೋಸಿಗೆ ಸೀಮಿತವಾಗಿದ್ದ ಚೀನಾದ ಪ ಕೋಳಿಮೊಟ್ಟೆಗೆ ವಿಸ್ತರಿಸಿದ್ದು ಇಲ್ಲಿಗೆ 6 ತಿಂಗಳ ಹಿ ಕನ್ನಡದ ಒಂದೆರಡು ನ್ಯೂಸ್ ಚಾನಲ್‌ಗಳಲ್ಲೂ ವರದಿಯಾಯಿತು. ಆದರೆ ಎಲ್ಲಿ ಏನು ಎತ್ತ ಇ ಏನೊಂದು ವಿವರಗಳಿರುತ್ತಿರಲಿಲ್ಲ. ಸಾರ್ವಜನಿಕ ಸಾರ್ವಜನಿಕರಲ್ಲಿ ಪ್ಲಾಸ್ಟಿಕ್ ಕೋಳಿ ಮೊಟ್ಟೆಯ ಹುಳವ

40 ರೂ. ಕೇಜಿ ಅಕ್ಕಿಗೆ 400 ರೂ. ಸುರಿಯುವ ಮೂರ್ಖರುಂಟೇನು?




ಪ್ಲಾಸ್ಟಿಕ್ ಅಕ್ಕಿ, ಪ್ಲಾಸ್ಟಿಕ್ ಸಕ್ಕರೆ ಅಥವಾ ಪ್ಲಾಸ್ಟಿಕ್ ಮೊಟ್ಟೆಯನ್ನು ಕೃತಕವಾಗಿ ಪ್ಲಾಸ್ಟಿಕ್ಕಿನಿಂದ ಸೃಷ್ಟಿಸುವುದಕ್ಕೂ, ನೈಸರ್ಗಿಕವಾಗಿ ಸೃಷ್ಟಿಯಾಗುವ ಅಕ್ಕಿ, ಸಕ್ಕರೆ ಮೊಟ್ಟೆಗೂ ಇರುವ ತಾರ್ಕಿಕ ಮತ್ತು ಆರ್ಥಿಕ ವ್ಯತ್ಯಾಸದ ಕನಿಷ್ಠ ಪರಿಜ್ಞಾನವೇನಾದರೂ ಬಿಜೆಪಿ, ಆರೆಸ್ಸೆಸ್, ಸಂಘೀ ಶೂರರಿಗಿದ್ದಿದ್ದರೆ ಬಹುಶಃ ಅವರ್‍ಯಾರೂ ಇಂಥದೊಂದು ಮೂರ್ಖತನಕ್ಕೆ ಕೈ ಹಾಕುತ್ತಿರಲಿಲ್ಲವೇನೋ!

ಮಾರುಕಟ್ಟೆಯಲ್ಲಿ ಕೇಜಿ ಅಕ್ಕಿಗೆ ನಲವತ್ತೋ ಐವತ್ತೋ ರೂಪಾಯಿ ಬೆಲೆಯಿದೆ. ಅಂದರೆ ಒಂದು ಕೇಜಿ ಅಕ್ಕಿ ಸೃಷ್ಟಿಸಲು ಒಂದು ಕೇಜಿಯಷ್ಟು ಪ್ಲಾಸ್ಟಿಕ್ ಬೇಕೇಬೇಕು. ಆದರೆ ಮಾರುಕಟ್ಟೆಯಲ್ಲಿ ಕೇಜಿ ಪ್ಲಾಸ್ಟಿಕ್ಕಿನ ಬೆಲೆ ಇನ್ನೂರರಿಂದ ಇನ್ನೂರೈವತ್ತು ರೂಪಾಯಿಯಿದೆ. ಇದು ಕಚ್ಚಾ ಪ್ಲಾಸ್ಟಿಕ್ಕಿನ ಬೆಲೆ. ಇನ್ನು ಅಕ್ಕಿ ಸೃಷ್ಟಿಸಬೇಕೆಂದರೆ ಅದಕ್ಕೆ ಉತ್ತಮ ಗುಣಮಟ್ಟದ ಪ್ಲಾಸ್ಟಿಕ್ಕೇ ಬೇಕು. ಮಾರ್ಕೆಟ್ಟಿನಲ್ಲಿ ಒಳ್ಳೇ ಕ್ವಾಲಿಟಿ ಪ್ಲಾಸ್ಟಿಕ್ಕೆಂದರೆ ಮೂನ್ನೂರರಿಂದ ಮೂನ್ನೂರೈವತ್ತು ರೂಪಾಯಿಯಿದೆ. ಅಂಥಾ ಗುಣಮಟ್ಟದ ಪ್ಲಾಸ್ಟಿಕ್ಕನ್ನು ತಂದು ಅದಕ್ಕೆ ಬಣ್ಣ ಹಾಕಿ ಅದನ್ನು ಅಕ್ಕಿಯ ಗಾತ್ರಕ್ಕೆ ಕಾಳನ್ನಾಗಿಸಬೇಕೆಂದರೆ ವಿಶಿಷ್ಟ ತಂತ್ರಗಾರಿಕೆ, ಪರಿಶ್ರಮ ಎಲ್ಲವೂ ಸೇರಿತೆಂದರೆ ಕೇಜಿ ಅಕ್ಕಿ ಸೃಷ್ಟಿಸಲು ಏನಿಲ್ಲವೆಂದರೂ 400 ರೂಪಾಯಿ ತಗಲುತ್ತದೆ!

40 ರೂಪಾಯಿಯ ಕೇಜಿ ಅಕ್ಕಿಯನ್ನು ಯಾವ ಮುಠ್ಠಾಳನಾದರೂ 400 ರೂಪಾಯಿ ಖರ್ಚು ಮಾಡಿ ಏಕೆ ಸೃಷ್ಟಿಸುತ್ತಾನ್ವೆ? ನಾನೂರು ರೂಪಾಯಿ ತೆತ್ತು ಯಾವ ಹುಚ್ಚನಾದರೂ ಪ್ಲಾಸ್ಟಿಕ್ ಅಕ್ಕಿ ಖರೀದಿಸುತ್ತಾನಾ? ಹತ್ತು ಕೇಜಿಯ ದರತೆತ್ತು ಯಾರಾದರೂ ಒಂದು ಕೇಜಿ ಮಾರುವುದಾಗಲಿ ಕೊಳ್ಳುವುದಾಗಲಿ ಮಾಡುತ್ತಾರೆಂದರೆ ಒಂದೋ ಆತನ ತಲೆ ಕೆಟ್ಟಿರಬೇಕು ಅಥವಾ ಶೂನ್ಯನಿಂದ ಪ್ಲಾಸ್ಟಿಕ್ ಸೃಷ್ಟಿಸಬಲ್ಲ ದೇವರಾಗಿರಬೇಕು!

ದೇವರಾದರೂ ಜನಕ್ಕೆ ಪ್ಲಾಸ್ಟಿಕ್ ತಿನ್ನಿಸಿ ಹಾಳು ಮಾಡುವ ಮುರ್ಖತನಕ್ಕೆ ಏಕಿಳಿಯುತ್ತಾನೆ? ಮೋದಿ ಭಕ್ತರ ಮೂರ್ಖ ತಂತ್ರಗಳಿಗಿದು ಒಂದು ಉದಾಹರಣೆಯಷ್ಟೇ!












ಬಾಬಾ ರಾಂದೇವ್‌ನ ದುರ್ಬುದ್ಧಿ ಮತ್ತು ಪತಂಜಲಿ ಅಕ್ಕಿಯ ಸಮೃದ್ಧಿ!



ಇತ್ತ ಸಂಘೀ ಮೂಲದ ಮೀಡಿಯಾಗಳಲ್ಲಿ ಪ್ಲಾಸ್ಟಿಕ್ ಅಕ್ಕಿಯ ಪ್ರಲಾಪ ಪ್ರಕೋಪವಾಗಿದ್ದಕ್ಕೂ, ಮತ್ತೊಂದೆಡೆ ಬಾಬಾ ರಾಂದೇವ್‌ನ ಪತಂಜಲಿ ಬ್ರಾಂಡ್‌ನ ಸಾವಯವ ಅಕ್ಕಿಯ ಪುಂಖಾನುಪುಂಖ ಜಾಹಿರಾತು ಇದೇ ಮೀಡಿಯಾಗಳಲ್ಲಿ ವಿಜೃಂಭಿಸಿದ್ದಕ್ಕೂ, ವಿಷಯ ಮತ್ತು ವಸ್ತುವಾಗಿ ಬೇರೆ ಬೇರೆಯಾದರೂ ಕಾಕತಾಳೀಯವೆನಿಸುವುದಿಲ್ಲ.

ಎರಡೂ ಒಂದೇ ಹಕೀಕತ್ತಿನ ಬೇರೆ ಬೇರೆ ರೂಪವಲ್ಲದೇ ಮತ್ತೇನಲ್ಲ. ಕರ್ನಾಟಕದ ಮಟ್ಟಿಗೆ ಪ್ಲಾಸ್ಟಿಕ್ ಅಕ್ಕಿ ಕತೆಯನ್ನು ಚೆಡ್ಡಿಗಳು ಕಾಂಗ್ರೆಸ್ ಸರ್ಕಾರದ ಅನ್ನಭಾಗ್ಯದ ವಿರುದ್ಧ ಒಂದೇ ಕಲ್ಲಿಗೆ ಎರಡು ಹಕ್ಕಿಯಂತೆ ಪ್ರಯೋಗಿಸಿರಬಹುದು. ಆದರೆ ಭಾರತದ ಮಟ್ಟಿಗೆ ಬಾಬಾ ರಾಂದೇವ್ ಮತ್ತಾತನ ಪತಂಜಲಿ ಬ್ರಾಂಡ್ ಅಕ್ಕಿಯ ಮಾರುಕಟ್ಟೆ ತಂತ್ರವೇ ಮೂಲಕಾರಣವಾಗಿರುವಂತಿದೆ. ಇಲ್ಲದಿದ್ದರೆ ಪ್ಲಾಸ್ಟಿಕ್ ಅಕ್ಕಿಯ ಮೀಡಿಯಾ ಮಂಗಾಟದ ಮಧ್ಯೆಯೇ ಪತಂಜಲಿ ಅಕ್ಕಿಯ ಜಾಹಿರಾತೇಕಿರಬೇಕು? ಎಷ್ಟೆಂದರೂ ಬಾಬಾ ರಾಂದೇವ್ ಹುಟ್ಟಾ ಸಂಘಿ ಪಕ್ಕಾ ಮೋದಿ ಬ್ರಾಂಡ್. ಬಿಜೆಪಿಯ ಕಟ್ಟರ್ ಬೆಂಬಲಿಗನೂ ಹೌದು. ಚೀನಾದ ಪ್ಲಾಸ್ಟಿಕ್ ಅಕ್ಕಿಯ ಅಜ್ಞೇಕತೆ ಬಹುಶಃ ಆತನ ಅಕ್ಕಿ ವ್ಯವಹಾರದ ಜೊತೆ ಜೊತೆಗೇ ಹುಟ್ಟಿರಬೇಕು. ಪ್ಲಾಸ್ಟಿಕ್ ಅಕ್ಕಿಯ ಕಲ್ಪನೆ ಮತ್ತು ಪತಂಜಲಿ ಅಕ್ಕಿ ಎರಡೂ ಒಂದೇ ತಲೆಯಲ್ಲಿ ಒಂದೇ ಮುಹೂರ್ತದಲ್ಲಿ ಸೃಷ್ಟಿಯಾಗಿದ್ದರ ಪರಿಣಾಮಕ್ಕೆ ಸಂಘ ಪರಿವಾರ ಅದರ ವಾಹನವಾಗಿ ಬಳಕೆಯಾಗಿದೆ.



ಸಂತೆಗೂ ಮುನ್ನ ಗಂಟು ಕಳ್ಳರು ಸೇರುವ ರೀತಿಯಿದು.

...ಕ್ಕಿತ್ತು. ಇದರ ತಕ್ಷಣದ ಪರಿಣಾಮದ ಬಿಸಿಮುಟ್ಟಿದ್ದು ...ಸಾತ್ ಆಮ್ಲೇಟ್ ಗಾಡಿಯ ದಿನದ ಕೂಳು ...ಳಿಗೆ. ಜನ ರಸ್ತೆ ಬದಿ ಎಗ್‌ಫ್ರೈಡ್‌ರೈಸ್, ಬೇಯಿಸಿದ ..., ಆಮ್ಲೇಟನ್ನು ತಿನ್ನಲು ಹಿಂದೆಮುಂದೆ ನೋಡು ...ಯಿತು. ಬಹುಶಃ ಆ ಹೊತ್ತಿಗಿದು ಸರ್ಕಾರಕ್ಕೆ ತಲೆನೋ ...ಲಿಲ್ಲ. ಚೀನಾದ ವಿರುದ್ಧ ಜಾಗೃತ ದೇಶಭಕ್ತರ್‍ಯಾರೋ ...ಕ್ತಿಯಿಂದಲೇ ನಾಡಿನ ಜನರ ಪ್ರಾಣಾರೋಗ್ಯದ ...ಯಿಂದ ಮಾಡುತ್ತಿರಬೇಕೆಂದೇ ಪ್ರತಿಯೊಬ್ಬರೂ ...ದ್ದರು. ಸರ್ಕಾರವೊಂದು ಚೂರು ಯಾಮಾರಿದರೂ ...ರೊಮ್ಮೆ ಅದು ತನ್ನ ಕುತ್ತಿಗೆಗೇ ಬರುತ್ತದೆಯೆಂದು ...ಮಂತ್ರಿ ಸಿದ್ದರಾಮಯ್ಯನ ವರಿಗಾಗಲಿ, ಆಹಾರ ... ನಾಗರಿಕ ಸರಬರಾಜು ಸಚಿವ ಖಾದರ್ ...ರಿಗಾಗಲಿ ಅಥವಾ ಕಾಂಗ್ರೆಸ್ ಸರ್ಕಾರದ ಚರಾಚರ ...ದಾರರಿಗಾಗಲಿ ಹೇಗೆ ತಾನೇ ಗೊತ್ತಾಗಲು ಸಾಧ್ಯ?


...ಲ್ಲಿಗೆ ತಿಂಗಳ ಹಿಂದಿನಿಂದ ಅದರಲ್ಲೂ ಇನ್ನೇನು ...ನಮಂಡಲದ ಅಧಿವೇಶನ ಹತ್ತಿರತ್ತಿರವೆನ್ನುವಾಗ ...ದೇ ವಿಚಿತ್ರವೆನಿಸುವಂಥ ಕುಚೋದ್ಯವೊಂದು ...ಯಾಡಲಾರಂಭಿಸಿತು. ಮೊದಮೊದಲು ಸಾಮಾಜಿಕ ...ಣಗಳಾದ ಫೇಸ್‌ಬುಕ್ ಮತ್ತು ವಾಟ್ಸಪ್‌ಗಳಲ್ಲಿ ...ದ ವಿರುದ್ಧ ದೇಶಭಕ್ತಿಯ ಸೋಗಿನಲ್ಲೇ ಹೆಡೆಯೆತ್ತಿದ ...ದಂತಿಯ ಗುರಿಯೇ ಅಕ್ಕಿ!

...ವಾಟ್ಸಪ್, ಫೇಸ್‌ಬುಕ್‌ಗಳಲ್ಲಿ....

...ಪ್ಲಾಸ್ಟಿಕ್ ಎಲೆಕೋಸಾಯಿತು ಪ್ಲಾಸ್ಟಿಕ್ ಕೋಳಿಮೊಟ್ಟೆ ...ಯಿತು ಈಗ ಅಕ್ಕಿ! ಚೀನಾದ ಪ್ಲಾಸ್ಟಿಕ್ ಅಕ್ಕಿ ಭಾರತ ...ಪ್ರವೇಶಿಸಿದೆ ಎಂಬಂತೆ ಹುಟ್ಟಿಕೊಂಡ ಚಿತ್ರಿಕೆಗಳಲ್ಲಿ ...ತ್ತಿದ್ದದ್ದು ಅಕ್ಕಿಯೇ. ಆದರದು ಪ್ಲಾಸ್ಟಿಕ್ ಎಂದು ... ಶೀರ್ಷಿಕೆ ಹೇಳುತ್ತಿತ್ತು. ಕ್ರಮೇಣ ಇದು ಫೇಸ್‌ಬುಕ್ ...ತು. ಅಧಿವೇಶನ ಇನ್ನೇನು ವಾರವಿದೆ ಎನ್ನುವಾಗ ...ದ್ದಂತೆ ಕರ್ನಾಟಕದಲ್ಲಿ ಪ್ಲಾಸ್ಟಿಕ್ ಅಕ್ಕಿಯ ಹಾವಳಿ, ...ದ ಪ್ಲಾಸ್ಟಿಕ್ ಅಕ್ಕಿ ಕರ್ನಾಟಕಕ್ಕೆ ಕಾಲಿಟ್ಟಿದೆ. ಅಕ್ಕಿ ...ರಿಗಳು ಬೇಕಾಬಿಟ್ಟಿ ಚೀನಾ ಪ್ಲಾಸ್ಟಿಕ್ ಅಕ್ಕಿಯನ್ನು ...ರಕೆ ಮಾಡುತ್ತಿದ್ದಾರೆ ಎಂಬುದು ಇಂಥ ಪೋಸ್ಟ್‌ಗಳ ...ಾಗಿತ್ತು. ಆದರೆ ಯಾರು, ಎಲ್ಲಿ, ಎತ್ತ ಇತ್ಯಾದಿ ...ದು ವಿವರಗಳೂ ಅದರಲ್ಲಿರುತ್ತಿರಲಿಲ್ಲ. ಇಂಥ ಸುದ್ದಿಗೆ ...ದೇ ಆಧಾರ, ಪುರಾವೆ, ಸಾಕ್ಷ್ಯವನ್ನೂ ಹಾಕಿದವರು ...ತ್ತಿರಲಿಲ್ಲ. ಮೇಲುನೋಟಕ್ಕಿದು ಸಾಮಾಜಿಕ ...ಯಂತೆ, ದೇಶಭಕ್ತಿಯಂತೆಯೇ ಗೋಚರವಾಗುತ್ತಿತ್ತು- ...ದರೆ ಯಾರೂ ಗಮನಿಸದ ಸೂಕ್ಷ್ಮವೊಂದು ಇಂಥ ...ಳಿಗಿತ್ತು. ಅದು ಯಾರೆಲ್ಲ ಈ ಹಿಂದೆ ಪಾಕಿಸ್ತಾನದ ... ಮೋದಿ ಪರ, ಯುದ್ಧದಲ್ಲಿ ಮಡಿದ ಸೈನಿಕರ ... ವಿಚಾರವಾದಿ ಭಗವಾನ್ ವಿರುದ್ಧ, ಕಲಬುರ್ಗಿ ...ರನ್ನು ಬೆಂಬಲಿಸಿ, ಮುಸ್ಲಿಮರ ವಿರುದ್ಧ, ಕ್ರಿಶ್ಚಿಯನ್ನರ ... ಅಂಬೇಡ್ಕರ್ ಹೀಯಾಳಿಸಿ, ಮೀಸಲಾತಿಯನ್ನು ..., ಜೆಎನ್‌ಯು ವಿದ್ಯಾರ್ಥಿ ನಾಯಕ ಕನ್ಹಯ್ಯಕುಮಾರ್ ...ದ್ರೋಹಿಯೆಂಬಂತೆ ಚಿತ್ರಿಸಿ, ಪಾಕಿಸ್ತಾನವಲ್ಲ ನನ್ನ ...ನನ್ನು ಕೊಂದಿದ್ದು ಯುದ್ಧವೆಂದು ಹೇಳಿದ ದೆಹಲಿ ವಿದ್ಯಾರ್ಥಿನಿ ಗುರುಮೆಹರ್ ಕೌರ್‌ಳನ್ನು ಹಂಗಿಸಿ, ಕರ್ನಾಟಕದಲ್ಲಿ ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಆಗಾಗ ಕುಚೇಷ್ಟೆಯ, ಕುಚೋದ್ಯದ ತರಹೇವಾರಿ ಪೋಸ್ಟುಗಳನ್ನೂ ಟೀಕೆಗಳನ್ನೂ ಹಾಕುತ್ತಿದ್ದವರೇ ಇಂಥ ಸುದ್ದಿಗಳ ಹಿಂದಿದ್ದವರು. ಜೆಡಿಎಸ್ ನಾಯಕರಾದ ದೇವೇಗೌಡ ಮತ್ತು ಕುಮಾರಸ್ವಾಮಿ ವಿರುದ್ಧ ಆಗಾಗ ಬೈಗುಳದ ಬಾಣ ಬಿಡುತ್ತಿದ್ದ, ಪಾರ್ವತಮ್ಮ ರಾಜ್‌ಕುಮಾರ್ ನಿಧನರಾದಾಗ ರಾಷ್ಟ್ರಧ್ವಜದ ಗೌರವವನ್ನು ವಿರೋಧಿಸಿದ್ದ, ಎಡಪಂಥೀಯ ವಿಚಾರಧಾರೆಯನ್ನು ದ್ವೇಷಿಸುತ್ತಿದ್ದ, ವಿಶೇಷವಾಗಿ ಸಂಘಪರಿವಾರದ ವೈದಿಕರೇ ಪ್ಲಾಸ್ಟಿಕ್ ಅಕ್ಕಿ ಮತ್ತು ಚೀನಾ ದ್ವೇಷದ ಕಾರಣಕರ್ತರಾಗಿದ್ದರು.

ಚೆಡ್ಡಿ ಮೀಡಿಯಾ ಕಿತಾಪತಿ

ಮೇಲುನೋಟಕ್ಕಿದು ಅಪ್ರತಿಮ ಸಾಮಾಜಿಕ ಕಳಕಳಿಯಾಗಿಯೂ ಜನಸಾಮಾನ್ಯರ ಆರೋಗ್ಯದ ಬಗ್ಗೆ ಇನ್ನಿಲ್ಲದ ಕಾಳಜಿಯಾಗಿಯೂ ಕಾಣುತ್ತಿತ್ತಾದ್ದರಿಂದ ಪ್ರಜ್ಞಾವಂತರು ಕೂಡ ಪ್ಲಾಸ್ಟಿಕ್ ಅಕ್ಕಿಯ ವಿರುದ್ಧ ಆತಂಕ ವ್ಯಕ್ತಪಡಿಸುತ್ತಿದ್ದರು. ಯಾವತ್ತು ವಿಧಾನಮಂಡಲದ ಅಧಿವೇಶನ ಶುರುವಾಯಿತೋ ಇದು ಬೇರೆಯದೇ ರೂಪ ತಾಳಿತು. ಎಲ್ಲೋ ಉಂಡ ಅನ್ನ ಅರಗದೆ, ಹೊಟ್ಟೆ ನೋವು ಬಂತೆಂದೂ ಇನ್ನೆಲ್ಲೋ ಕೊಂಡ ಕೋಳಿಮೊಟ್ಟೆಯಲ್ಲಿ



ಪ್ಲಾಸ್ಟಿಕ್ ಥರದ ಪೊರೆಯಿತ್ತೆಂದೂ ಮತ್ತೆಲ್ಲೋ ರಸ್ತೆಯಲ್ಲಿ ಬಿದ್ದಿದ್ದ ಸಕ್ಕರೆಯೇ ಪ್ಲಾಸ್ಟಿಕ್ ಸಕ್ಕರೆಯೆಂದೂ ಊಹಾಪೋಹ ತಲೆ ಎತ್ತಿತ್ತು. ವಿಶೇಷವೆಂದರೆ ಈ ಬಾರಿ ಆಯ್ದ ಕೆಲವು ತಂಡಗಳು ತಾವು ಭ್ರಮಿಸಿದ ಅಕ್ಕಿಯೇ ಪ್ಲಾಸ್ಟಿಕ್ ಅಕ್ಕಿಯೆಂದು ಆರೋಪಿಸಿ ಸ್ಥಳೀಯ ಅಧಿಕಾರಿಗಳಿಗೆ ದೂರು ನೀಡಲಾರಂಭಿಸಿದ್ದರು. ಇಪ್ಪತ್ತೋ ಮೂವತ್ತೋ ರೂಪಾಯಿಯ ಕೋಳಿಮೊಟ್ಟೆಯ ಕಾರಣಕ್ಕೆ ನೂರಾರು ರೂಪಾಯಿ ಖರ್ಚು ಮಾಡಿಕೊಂಡು ತಾಲ್ಲೂಕು ಕಚೇರಿಗಳಿಗೆ ಹೋಗಿ ದೂರು ನೀಡುತ್ತಿದ್ದರು. ಇದನ್ನು ವ್ಯವಸ್ಥಿತವಾಗಿ ಪತ್ರಿಕೆಗಳು, ಟೀವಿಗಳು ಸುದ್ದಿ ಮಾಡುತ್ತಿದ್ದವು!

ಹೀಗೆ ಯಾರೋ ಹೇಳಿದರೆಂದು ಯಾರೋ ದೂರಿದರೆಂದು ಅದರ ಸತ್ಯಾಸತ್ಯತೆಯನ್ನೂ ಪರಿಶೀಲಿಸದೆ ಬ್ರೇಕಿಂಗ್ ನ್ಯೂಸ್ ಜಡಾಯಿಸಿದ ನ್ಯೂಸ್ ಚಾನಲ್ಲುಗಳಾದರೂ ಎಂಥವೆಂದು ಕೆದಕಹೊರಟರೆ ಅವು ಕೂಡ ಕೇಸರಿ ಮೀಡಿಯಾಗಳೇ. ರಾಜಕೀಯವಾಗಿ ಬಿಜೆಪಿಯ ಸಕ್ರಿಯ ಬೆಂಬಲಿಗನಾದ ಕುಬೇರನೊಬ್ಬನ ಚಾನಲ್, ಬಹಿರಂಗವಾಗಿಯೇ ಬಿಜೆಪಿಯೊಂದಿಗೆ ಗುರುತಿಸಿಕೊಳ್ಳುವ ಮಾಜಿ ಬಿಜೆಪಿ ಸಂಸದನೊಬ್ಬನ ಪತ್ರಿಕೆ, ಆರೆಸ್ಸೆಸ್ ಕೇಡರುಗಳಿಂದಲೇ ತುಂಬಿರುವ ಮತ್ತೊಂದು ಚಾನಲ್, ಚೆಡ್ಡಿಗಳೆಲ್ಲ ಪತ್ರಕರ್ತರ ವೇಷದಲ್ಲಿರುವ ಮಗದೊಂದು ಪತ್ರಿಕೆ, ವೈದಿಕ ಕ್ರಿಮಿಗಳೇ ಸಾರಥ್ಯ ವಹಿಸಿರುವ ಇನ್ನೊಂದು ಚಾನಲ್ ಇತ್ಯಾದಿಗಳೆಲ್ಲರೂ ಫೇಸ್‌ಬುಕ್ ಮತ್ತು ವಾಟ್ಸಪ್ ಮೋದಿ ಭಜನಾ ಮಂಡಳಿಯ ಚೀನಾ ದ್ವೇಷದ ಪ್ಲಾಸ್ಟಿಕ್ ಅಕ್ಕಿ ಕತೆಯನ್ನೇ ಮೇಲಿಂದ ಮೇಲೆ ಬಿತ್ತರಿಸಲಾರಂಭಿಸಿದ್ದರು. ಒಂದು ಹಂತದಲ್ಲಿದು ಯಾವ ಹಂತ ಮುಟ್ಟಿತೆಂದರೆ ರಾಜ್ಯ ಸರ್ಕಾರದ ಅನ್ನಭಾಗ್ಯದ ಅಕ್ಕಿ ಪೂರ್ತಿ ಚೀನಾದ ಖದೀಮರು ತಂದ ಪ್ಲಾಸ್ಟಿಕ್ ಅಕ್ಕಿಯೇ ಅನ್ನವಷ್ಟರಮಟ್ಟಿಗೆ.

ಬಹುಶಃ ಇದರ ಮುನ್ಸೂಚನೆ ಮೊದಲೇ ಇತ್ತೇನೋ ಅಥವಾ ಸಂಘಪರಿವಾರದ ಷಡ್ಯಂತ್ರದ ಹಕೀಕತ್ತೇ ಉಲ್ಟಾ ಹೊಡೆದಿರಬೇಕು. 'ಬೆಂಗಳೂರು ಮಿರರ್' ಪತ್ರಿಕೆ ಇಡೀ ಕುಚೋದ್ಯದ ಹಿಂದಿರುವ ಪೊಳ್ಳುತನವನ್ನು ಸವಿಸ್ತಾರವಾಗಿ ಬಯಲಿಗೆಳೆದಿತ್ತು. ಇದೇ ಹೊತ್ತಿಗೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯೂ ಪ್ರಕಟಣೆಯೊಂದನ್ನು ಹೊರಡಿಸಿತು. ಕೃಷಿ ವಿಶ್ವವಿದ್ಯಾಲಯ ಸೇರಿದಂತೆ, ಆರೋಗ್ಯ ಇಲಾಖೆಯ ವಿವಿಧ ಪ್ರಯೋಗಶಾಲೆಗಳಿಗೆ ಸರ್ಕಾರ ನೀಡಿದ್ದ ಪ್ಲಾಸ್ಟಿಕ್ ಅಕ್ಕಿಯ ಸ್ಯಾಂಪಲ್ಲುಗಳೆಲ್ಲದರ ರಾಸಾಯನಿಕ ವಿಶ್ಲೇಷಣಾ ವರದಿಯ ಪ್ರಕಾರ ಯಾವ ಅಕ್ಕಿಯಲ್ಲೂ ಪ್ಲಾಸ್ಟಿಕ್ ಅಂಶಗಳಿರಲಿಲ್ಲ, ಕೆಲವು ಮುಗ್ಗಲು ಅಕ್ಕಿಯಷ್ಟೇ!

ನಾಗರಿಕ ಸರಬರಾಜು ಇಲಾಖೆ ಮತ್ತು ಆರೋಗ್ಯ ಇಲಾಖೆ ಅದೆಂಥಾ ಕಾರ್ಯಾಚರಣೆಗಿಳಿದಿದ್ದವೆಂದರೆ ರಾಜ್ಯದ 280 ಸ್ಥಳಗಳಿಂದ ವಿವಿಧ ಅಕ್ಕಿಯ ಮಾದರಿಗಳನ್ನು ಸಂಗ್ರಹಿಸಿದ್ದರು. ಹಾಗೆ ಸಂಗ್ರಹಿಸಿದ್ದನ್ನು ಬೆಂಗಳೂರು, ಮೈಸೂರು, ಕಲಬುರ್ಗಿ ಮತ್ತು ಬೆಳಗಾವಿಯ ಆರೋಗ್ಯ ಇಲಾಖೆಯ ಪ್ರಯೋಗಾಲಯಗಳಲ್ಲಿ ರಾಸಾಯನಿಕ ವಿಶ್ಲೇಷಣೆಗೊಳಪಡಿಸಿದ್ದರು. ಎಲ್ಲೂ ಯಾವ ಮಾದರಿಯಲ್ಲೂ ಪ್ಲಾಸ್ಟಿಕ್ ಅಂಶ ಪತ್ತೆಯಾಗಿರಲಿಲ್ಲ. ಹಾಗಿದ್ದೂ ಹೆಚ್ಚಿನ ಪರೀಕ್ಷೆಗೆಂದು ಮೈಸೂರಿನ ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾ ಕೇಂದ್ರಕ್ಕೆ ಕಳಿಸಿದ್ದರು. ಇನ್ನೆರಡು ದಿನಗಳಲ್ಲಿ ಇನ್ನೇನು ಅದರ ವರದಿಯೂ ಬರಲಿದೆ. ಆರೋಗ್ಯ ಇಲಾಖೆಯ ಪ್ರಯೋಗಾಲಯದ ವರದಿಯನ್ನೇ ಮುಂದಿಟ್ಟು ಆರೋಗ್ಯ ಆಯುಕ್ತ ಸುಭೋದ್ ಯಾದವ್ ಪತ್ರಿಕಾಗೋಷ್ಠಿ ನಡೆಸಿ ಅಕ್ಕಿ ಕಿತಾಪತಿಯನ್ನು ಬಯಲಿಗೆಳೆಯ ಬೇಕಾಯಿತು. ಆಹಾರ ಸುರಕ್ಷತಾ ವಿಭಾಗದ ಉಪ ಆಯುಕ್ತ ಡಾ. ಹರ್ಷವರ್ಧನ್ ಕೂಡ ಸಾರಾಸಗಟಾಗಿ ಪ್ಲಾಸ್ಟಿಕ್ ಸನ್ನಿಯನ್ನು ಅಲ್ಲಗಳೆದರು.

ಯಾರದೋ ಕಿತಾಪತಿ, ಯಾವುದೋ ಷಡ್ಯಂತ್ರ, ಇನ್ನೆಂಥದೋ ರಾಜಕೀಯಕ್ಕೆ ಅಕ್ಕಿಯೂ ಹೊರತಲ್ಲ, ಪ್ಲಾಸ್ಟಿಕ್ಕಿಗೂ ವಿನಾಯಿತಿಯಿಲ್ಲ. ಸರ್ಕಾರವೊಂದನ್ನು ಮುಗಿಸಲು ಆ ಮೂಲಕ ತಾವು ನಾಡನ್ನು ದೋಚಲು ಸಂಘೀ ಕೂಟ ಅನ್ನಭಾಗ್ಯವನ್ನೂ ಬಿಡುವುದಿಲ್ಲ, ಎಂಥ ಚೇಷ್ಟೆಗೂ ಹೇಸುವುದಿಲ್ಲ.

■ ರಾ. ಸೋಮನಾಥ್





ಮೈಸೂರು: ಯಡ್ಡಿ 'ದಲಿತ ಭೋಜನ'ದ ಮತ್ತೊಂದು ಪ್ರಹಸನ

ಯಡಿಯೂರಪ್ಪನ ಬೋಗಸ್ ಪ್ರವಾಸ ಹಾಗೂ ಬೊಗಳೆ ಊಟದ ಗಿಮಿಕ್ಕುಗಳು ದಿನದಿಂದ ದಿನಕ್ಕೆ ನಗೆಪಾಟಲಿಗೆ ಈಡಾಗುತ್ತಿವೆ. ಚಿತ್ರದುರ್ಗದ ದಲಿತರ ಮನೆಯಲ್ಲಿ ಕೂತು ಹೋಟೇಲ್ ತಿಂಡಿಯನ್ನು ಗಡದ್ದಾಗಿ ತಿಂದು ಸುದ್ದಿಯಾಗಿದ್ದ ಯಡ್ಡಿ ಆಮೇಲೆ ಉಪವಾಸದ ನೆಪ ಹೇಳಿ ಶೋಭಾ ಕರಂದ್ಲಾಜೆ ದಲಿತರ ಊಟವನ್ನು ಒಲ್ಲೆ ಎಂದಾಗಲೂ ಜನರ ಮುಂದೆ ಬೆತ್ತಲಾಗಿದ್ದರು. ಇದೀಗ ಮೈಸೂರಿನಲ್ಲೂ ಅವರ ಪ್ರವಾಸ ಅಂತದ್ದೇ ಅಪಸವ್ಯಕ್ಕೆ ಸಾಕ್ಷಿಯಾಗಿದೆ. ದಲಿತರಿಗೆ ಆತ್ಮಸ್ಥೈರ್ಯ ನೀಡಲು ಅವರ ಕೇರಿಗೆ ಹೋಗಿ ಊಟ ಮಾಡುತ್ತೇವೆ ಎನ್ನುವ ಯಡ್ಡಿ ಮೈಸೂರಿನ ದಲಿತ ಕಂ ಬಿಜೆಪಿಯ ಎನ್.ಆರ್.ಬ್ಲಾಕ್ ಪ್ರಧಾನ ಕಾರ್ಯದರ್ಶಿ ನರಸಿಂಹ ಮೂರ್ತಿ ಮನೆಯಲ್ಲಿ ಊಟ ಮಾಡುವಾಗ ಆತನು ಮತ್ತು ಆತನ ಮಡದಿಯನ್ನು ತಮ್ಮ ಕಾಲ ಕೆಳಗೆ ಕೂರಿಸಿಕೊಂಡು ತಮ್ಮ ಪ್ರವಾಸದ ಬೋಗಸ್ ಬೊಗಳೆಯನ್ನು ಮತ್ತೆ ಬಿಚ್ಚಿಟ್ಟುಕೊಂಡಿದ್ದಾರೆ. ನಿಜವಾಗಿ ಯಡಿಯೂರಪ್ಪರಿಗೆ ಮಾನವೀಯತೆ ಇದ್ದಿದ್ದರೆ, ದಲಿತ ದಂಪತಿಗಳನ್ನೂ ಕುರ್ಚಿ ಮೇಲೆ ತಮಗೆ ಸರಿಸಮನಾಗಿ ಕೂರಿಸಿಕೊಳ್ಳಬೇಕಿತ್ತು, ಆದರೆ ಉದ್ದೇಶವೇ ಬೋಗಸ್ ಆಗಿರುವಾಗ ಪ್ರಾಮಾಣಿಕ ಕ್ರಿಯೆಗಳನ್ನು ನಿರೀಕ್ಷಿಸುವುದು ಹೇಗೆ?

ಸಿದ್ದರಾಮಯ್ಯನವರ ನೇತೃತ್ವದ ರಾಜ್ಯ ಸರ್ಕಾರ ಅಹಿಂದ ವರ್ಗಗಳ ಒಲವು ಗಿಟ್ಟಿಸಿಕೊಂಡಿರುವುದರಿಂದ ಕಂಗೆಟ್ಟಿರುವ ಬಿಜೆಪಿ ದಲಿತರನ್ನು ಸೆಳೆಯಲು ಮಾತ್ರವೇ ಈ ಅಭಿಯಾನ ಆಯೋಜಿಸಿದೆಯೇ ವಿನಾಃ ಅವರಲ್ಲಿ ಸ್ಥೈರ್ಯವನ್ನು ತುಂಬುವುದಕ್ಕಲ್ಲ, ಯಾಕೆಂದರೆ ಅತ್ತ ಇದೇ ಬಿಜೆಪಿಯ ಎಂ.ಜಿ.ವೈದ್ಯ ಮೀಸಲಾತಿಯನ್ನು ರದ್ದುಪಡಿಸಬೇಕು ಎಂದು ರಾಗ ತೆಗೆದರೆ, ಕೇಂದ್ರ ಸರ್ಕಾರದ ವಿದೇಶಾಂಗ ವ್ಯವಹಾರ ರಾಜ್ಯ ಸಚಿವ ವಿ.ಕೆ.ಸಿಂಗ್ ದಲಿತರನ್ನು ನಾಯಿಗಳಿಗೆ ಹೋಲಿಸುತ್ತಾನೆ. ವಿಧಾನಪರಿಷತ್ ಬಿಜೆಪಿ ಸದಸ್ಯ ನಾರಾಯಣ್ ದಲಿತರನ್ನು ಹಂದಿಗಳೆಂದು ಜರಿಯುತ್ತಾನೆ. ಇಂತವರೇ ತುಂಬಿರುವ ಬಿಜೆಪಿ ದಲಿತರಿಗೆ ಆತ್ಮಸ್ಥೈರ್ಯ ತುಂಬುತ್ತೆ ಅನ್ನೋದೆ ಹಾಸ್ಯಾಸ್ಪದ.

ದಲಿತರ ಬದುಕುಗಳನ್ನು ಹಸನಾಗಿಸಬೇಕೆಂದರೆ ಅವರಿಗೆ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಬೆಂಬಲಗಳು ಬೇಕಿವೆ. ಅಂತಹದ್ದಕ್ಕೆಲ್ಲ ಕೊಕ್ಕೆ ಹಾಕಿ ಡಾ.ಬಿ.ಆರ್.ಅಂಬೇಡ್ಕರ್‌ರ ಜೀವನದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಐದು ಸ್ಥಳಗಳನ್ನು ಅಭಿವೃದ್ಧಿಪಡಿಸುವ ಮೋದಿಯ ಪಂಚತೀರ್ಥ ಯೋಜನೆಯ ಫರಾಕು ಹಾಕಿಕೊಂಡು ತಿರುಗಾಡುವ ಯಡ್ಡಿ ಅದರಿಂದ ದಲಿತರಿಗೆ ಆಗುವ ಲಾಭವಾದರೂ ಏನು ಎಂಬುದನ್ನು ಕೊಂಚ ಯೋಚಿಸಬೇಕಿತ್ತು, ಚಿತ್ರದುರ್ಗದ ಹೋಟೇಲ್ ತಿಂಡಿಯ ಪ್ರಸಂಗದಿಂದ ಮುಜುಗರಕ್ಕೆ ಈಡಾಗಿದ್ದ ಯಡ್ಡಿ ಈ ಸಲ ಮೈಸೂರಿನಲ್ಲಿ ದಲಿತರ ಮನೆಯಲ್ಲಿ ಊಟ ಮಾಡಿದ ಮೇಲೆ ನರಸಿಂಹಮೂರ್ತಿ ಮತ್ತು ರೇ... ದಂಪತಿಯ ಬಾಯಿಂದ ಈ ಅಡುಗೆ ಮಾಡಿದ್ದು ... ಅಂತ ಮಾಧ್ಯಮದವರ ಮುಂದೆ ಕಂಠಪಾಠ ಒಪ್ಪಿಸ... ಮಾಡಿದ್ದು ಕೂಡಾ ನಾಟಕೀಯತೆಯನ್ನು ಬಿಚ್ಚಿಡು...


ಯಡ್ಡಿಯ ಕಾಲಬುಡದಲ್ಲಿ ದಲಿತ ದಂಪತಿ....



ಹೊಲಗಳಿಗೆ ಒಣ ಭೇಟಿ....


ಇನ್ನು ಯಡ್ಡಿಯ ಈ ಜನಸಂಪರ್ಕ ಅಭಿಯಾ... ಮತ್ತೊಂದು ಉದ್ದೇಶ ಬರ ಅಧ್ಯಯನ. ಕರ್ನಾಟಕ... ಬರದಿಂದ ತತ್ತರಿಸಿರೋದು ರಹಸ್ಯವೇನೂ ಅಲ್ಲ, ಅ... ಅಧ್ಯಯನ ಮಾಡುವಂತದ್ದೇನೂ ಇಲ್ಲ, ತಮ್ಮದೇ ... ಬಿಜೆಪಿ ಕೇಂದ್ರ ಸರ್ಕಾರದ ದುಂಬಾಲು ಬಿದ್ದು ... ಸಾಲಮನ್ನಾ ಮಾಡಿಸಿಯೋ, ಬೆಳೆ ಪರಿಹಾರ ಕೊಡಿ... ರಾಜ್ಯದ ಕಾಂಗ್ರೆಸ್ ಸರ್ಕಾರವನ್ನು ಯಡ್ಯೂರಪ್ಪ ... ಸಿಲುಕಿಸಬಹುದಿತ್ತು, ಅದನ್ನು ಬಿಟ್ಟು ಎಲ್ಲಾ ಗೊ... ಸತ್ಯಕ್ಕೆ ಅಧ್ಯಯನದ ಬೋರ್ಡು ತಗುಲಾಕಿಕೊಂಡು... ಸರ್ಕಾರವನ್ನು ಹೀಗಳೆಯುವುದನ್ನೇ ಕಾಯಕ... ಕೊಂಡಿರೋದು ಜನರಲ್ಲಿ ರೇಜಿಗೆ ಹುಟ್ಟಿಸುತ್ತಿದೆ...

ವಿಪರ್ಯಾಸವೆಂದರೆ ಇತ್ತ ಯಡಿಯೂರಪ್ಪ ಮೈ... ಹೊಲಗಳಲ್ಲಿ ನಿಂತು ರಾಜ್ಯ ಸರ್ಕಾರ ರೈತರ ಸಾಲ... ಮಾಡದಿದ್ದರೆ ಜುಲೈನಿಂದ ಎರಡು ಲಕ್ಷ ರೈ... ಸೇರಿಸಿಕೊಂಡು ಪ್ರತಿಭಟನೆ ಮಾಡುತ್ತೇನೆ ಅಂತ ... ಹಾಕುತ್ತಿದ್ದರೆ ಅತ್ತ ಅವರದೇ ಪಕ್ಷದ ಹಣಕಾಸು ... ಅರುಣ್ ಜೇಟ್ಲಿ ರೈತರ ಸಾಲ ಮನ್ನಾಕ್ಕೆ ಕೇಂದ್ರ ಸ... ನಯಾಪೈಸೆ ನೆರವು ನೀಡಲ್ಲ ಎಂಬುದಾಗಿ ಘೋಷಿ... ಅದರ ಬಗ್ಗೆ ಯಡ್ಡಿಯ ಟೀಮು ತುಟಿ ಎರಡು ಮಾ... ಮಲ್ಯನ ಸಾವಿರಾರು ಕೋಟಿ ಸಾಲ ವಸೂಲಿ ಮಾಡ... ಲಂಡನ್‌ಗೆ ಪರಾರಿಯಾಗಲು ಬಿಟ್ಟ, ಅದಾನಿಯ ಬಿ... ವಿಸ್ತರಣೆಗೆಂದು ಕೋಟಿಗಟ್ಟಲೆ ಹಣ ಸಾಲ ಕೊಟ್ಟ ... ಸರ್ಕಾರ ರೈತರ ವಿಚಾರದಲ್ಲಿ ಇಷ್ಟು ನಿಷ್ಠುರ ... ನೀಡುತ್ತದೆಂದರೆ ಆ ಪಕ್ಷದ ನಾಯಕನಾಗಿ ರೈತರ ಹೊ... ಕಾಲಿಡಲು ಯಡ್ಡಿಗೆ ಅದಿನ್ನೆಂತ ಭಂಡ ಧೈರ್ಯವಿ...

ಇನ್ನು ಮೈಸೂರು, ಚಾಮರಾಜನಗ... ಪ್ರವಾಸದುದ್ದಕ್ಕೂ ಯಡ್ಡಿ ಜೊತೆಗಿದ್ದ ಶ್ರೀನಿ... ಪ್ರಸಾದ್‌ಗಾಗಲಿ, ಪೇಪರ್ ಸಿಮ್ಹ ಪ್ರತಾಪ್‌ಗಾ... 'ಅಭಿನಯ ದಲಿತ' ಶಿವರಾಂಗಾಗಲಿ ಅಥವಾ ರ... 'ಪ್ರೇಮ್'ಕಹಾನಿಯ ಹೀರೊ ರಾಮದಾಸನಿಗಾಗಲಿ ... ಯಾವ ಅಳುಕೂ ಇದ್ದಂತೆ ಕಾಣಲಿಲ್ಲ.

ಕೊಪ್ಪಳ: ಕರಡಿ-ಹಿಟ್ನಾಳ್ ಕಂಪನಿ ವಿರುದ್ಧ ಮುಸ್ಲಿಂ ಅಭ್ಯರ್ಥಿ



ಸಂಗಣ್ಣ ಕರಡಿ


ಬಸವರಾಜ್ ಹಿಟ್ನಾಳ್

ಎಲ್ಲಾ ಅಂದುಕೊಂಡಂತೆ ನಡೆದರೆ 2018ರ ಚುನಾವಣೆಗೆ ಬಿಜೆಪಿ ಕರಡಿ ಮತ್ತು ಕಾಂಗ್ರೆಸ್‌ನ ಹಿಟ್ನಾಳ್ ಕಂಪನಿಗೆ ಕೊಪ್ಪಳದಲ್ಲಿ ಜೆಡಿಎಸ್ ಮುಸ್ಲಿಂ ಅಭ್ಯರ್ಥಿಯನ್ನು ಕಣಕ್ಕಿಳಿಸಲಿದೆ. ಇತ್ತೀಚೆಗಷ್ಟೆ ಕಾಂಗ್ರೆಸ್ ತ್ಯಜಿಸಿ ಜೆಡಿಎಸ್ ಸೇರಿಕೊಂಡಿರುವ ಸೈಯದ್‌ನನ್ನು ಸ್ಪರ್ಧೆಗಿಳಿಸುವ ಮೂಲಕ ಕೊಪ್ಪಳದ ಸುಮಾರು ನಲವತ್ತು ಸಾವಿರದಷ್ಟು ಮುಸ್ಲಿಂ ಮತಗಳಿಗೆ ಲಗ್ಗೆ ಹಾಕುವ ಲೆಕ್ಕಾಚಾರ ಜೆಡಿಎಸ್‌ನದ್ದು. ಹಲವು ದಶಕಗಳಿಂದ ಮುಸ್ಲಿಂರನ್ನು ಕೇವಲ ಓಟ್‌ಬ್ಯಾಂಕ್ ಆಗಿ ಬಳಸಿಕೊಂಡು ಬೀಗುತ್ತಿದ್ದ ಕರಡಿ ಮತ್ತು ಹಿಟ್ನಾಳ್ ಫ್ಯಾಮಿಲಿ ಪೊಲಿಟಿಕ್ಸ್‌ಗೆ ಇದು ಭಾರೀ ಏಟು ಕೊಡಲಿದೆ. ಅದರಲ್ಲೂ ಹಿಟ್ನಾಳ್ ಕಂಪನಿ ಈ ಸುದ್ದಿ ಕೇಳಿ ಕಂಗೆಟ್ಟು ಕೂತಿದೆ.

ಬಸವರಾಜ್ ಹಿಟ್ನಾಳ್‌ರ ಮಗ ರಾಘವೇಂದ್ರ ಹಿಟ್ನಾಳ್ ಹಾಲಿ ಶಾಸಕನಾಗಿರುವ ಕೊಪ್ಪಳ ಕ್ಷೇತ್ರಕ್ಕೆ ಸಂಗಣ್ಣ ಕರಡಿ ತನ್ನ ಮಗ ಅಂಬರೀಶ್ ಕರಡಿಯನ್ನು ಅಖಾಡಕ್ಕಿಳಿಸಲು ತಯಾರಿ ನಡೆಸಿದ್ದಾರೆ. ಈ ಎರಡೂ ಕುಟುಂಬಗಳು ತಮ್ಮ ಕುಟುಂಬ ರಾಜಕಾರಣಕ್ಕೆ ಸೀಮಿತವಾದವೇ ಹೊರತು ಮತ್ತೊಬ್ಬರನ್ನು ಬೆಳೆಸಲಿಲ್ಲ, ಸಂಗಣ್ಣ ಕರಡಿ ನಾಲ್ಕು ಬಾರಿ ಶಾಸಕರಾಗಿ ಒಮ್ಮೆ ಸಂಸದರಾಗಿದ್ದರೂ ತನ್ನ ಮಗ ಗವಿಸಿದ್ದಪ್ಪ ಕರಡಿಯನ್ನು ಜಿಪಂ ಸದಸ್ಯನಾಗಿ ಮಾಡಿದ್ದಲ್ಲದೆ ಈಗ ಇನ್ನೊಬ್ಬ ಮಗನನ್ನು ಶಾಸಕನನ್ನಾಗಿಸಲು ತಯಾರಿ ನಡೆಸುತ್ತಿದ್ದಾರೆ. ಅತ್ತ ಬಸವರಾಜ್ ಹಿಟ್ನಾಳ್ ಕೂಡಾ ಕುಟುಂಬ ರಾಜಕಾರಣಕ್ಕೆ ಜೋತು ಬಿದ್ದಿದ್ದಾರೆ. ಈ ಎರಡೂ ಕುಟುಂಬಗಳ ನಡುವಿನ ಕದನದಲ್ಲಿ ಮುಸ್ಲಿಂ ಅಭ್ಯರ್ಥಿಯ ಹೆಸರು ಹೆಚ್ಚು ಸದ್ದು ಮಾಡುತ್ತಿದೆ.

ಹಾಗೆ ನೋಡಿದರೆ ಕೊಪ್ಪಳದಲ್ಲಿ ಲಿಂಗಾಯತ ಮತ್ತು ಕುರುಬ ರಾಜಕಾರಣಿಗಳದ್ದೇ ಕಾರುಬಾರು. ಪಂಚಮಸಾಲಿ ಸಮಾಜಕ್ಕೆ ಸೇರಿದ ಸಂಗಣ್ಣ ಕರಡಿ ನಾಲ್ಕು ಬಾರಿ ಶಾಸಕರಾದರೆ, ಆದಿ ಬಣಜಿಗ ಸಮಾಜಕ್ಕೆ ಸೇರಿದ ಮಲ್ಲಿಕಾರ್ಜುನ ದಿವಟರ್ ಎರಡು ಬಾರಿ, ಲಿಂಗಾಯತ ಬಣಜಿಗ ಜಾತಿಗೆ ಸೇರಿದ ವಿರುಪಾಕ್ಷಪ್ಪ ಅಗಡಿ ಮತ್ತು ಲಿಂಗಾಯತ ರೆಡ್ಡಿ ಜನಾಂಗಕ್ಕೆ ಸೇರಿದ ವಿರುಪಾಕ್ಷಗೌಡ ಕವಲೂರು ಒಮ್ಮೆ ಶಾಸಕರಾಗಿದ್ದಾರೆ. ಇನ್ನು ಕುರುಬ ಸಮಾಜಕ್ಕೆ ಸೇರಿದ ಬಸವರಾಜ ಹಿಟ್ನಾಳ, ರಾಘವೇಂದ್ರ ಹಿಟ್ನಾಳ್‌ರೂ ಇಲ್ಲಿ ಶಾಸಕರಾಗಿ ಮೆರೆದಾಡಿದ್ದಾರೆ. ಆದರೆ ಅಜಮಾಸು 40,000ಕ್ಕೂ ಹೆಚ್ಚಿನ ಮತಗಳಿರುವ ಮುಸ್ಲಿಮರಿಗೆ ಇಲ್ಲಿ ಒಮ್ಮೆಯೂ ಅವಕಾಶ ಸಿಕ್ಕಿಲ್ಲ. ಈ ಕೊರಗು ಮುಸ್ಲಿಮರಲ್ಲಿ ಇದ್ದೇ ಇದೆ. ಅಸಲಿಗೆ 1994ರಲ್ಲಿ ಅಂತಹದ್ದೊಂದು ಅವಕಾಶವಿತ್ತು. ಜುಲ್ಲೂ ಖಾದ್ರಿಯವರು ಆ ವರ್ಷ ಕಾಂಗ್ರೆಸ್ ಟಿಕೆಟ್ ಕೇಳಿದಾಗ ಕೈ ಪಾರ್ಟಿ ಹಿಂದೇಟು ಹಾಕಿ ಮಲ್ಲಿಕಾರ್ಜುನ ದಿವಟರ್‌ರನ್ನು ಅಭ್ಯರ್ಥಿಯಾಗಿಸಿತ್ತು. ಸಿಡಿದೆದ್ದ ಖಾದ್ರಿಯವರು ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದು ಭರ್ತಿ ಫೈಟು ಕೊಟ್ಟಿದ್ದರು. ಆದರ ನಂತರ ಯಾವೊಬ್ಬ ಮುಸ್ಲಿಂ ಅಭ್ಯರ್ಥಿಗೂ ಇಲ್ಲಿ ಆ ಮಟ್ಟದ ಒಲವು ದಕ್ಕಲೇ ಇಲ್ಲ.



ಸೈಯದ್


ಆದರೆ ಸೈಯದ್‌ರ ಜೆಡಿಎಸ್ ಸೇರ್ಪಡೆ ಮುಸ್ಲಿಂರಲ್ಲಿ ಅಂತಹದ್ದೊಂದು ಧ್ರುವೀಕರಣಕ್ಕೆ ಕಾರಣವಾಗುತ್ತಿದೆ. 2011ರ ಉಪಚುನಾವಣೆಯಲ್ಲೇ ಸೈಯದ್ ಜೆಡಿಎಸ್‌ನಿಂದ ಸ್ಪರ್ಧಿಸಲು ನೋಡಿದ್ದರು. ಆದರೆ ಸಾಧ್ಯವಾಗಿರಲಿಲ್ಲ, ನಂತರ 2013ಲ್ಲಿ ಯಡಿಯೂರಪ್ಪನ ಕೆಜೆಪಿಯಿಂದ ಸ್ಪರ್ಧಿಸಿ ಸೋಲುಂಡಿದ್ದರು. ಯಡಿಯೂರಪ್ಪ ಮರಳಿ ಬಿಜೆಪಿ ಸೇರಿದಾಗ ಕಾಂಗ್ರೆಸ್‌ನ ಬಸವರಾಜ್ ಹಿಟ್ನಾಳ್, ಸೈಯದ್‌ರ ಮನವೊಲಿಸಿ ಕಾಂಗ್ರೆಸ್‌ಗೆ ಸೇರಿಸಿಕೊಂಡಿದ್ದರು. ಆಗ ಲೋಕಸಭಾ ಚುನಾವಣೆ ಎದುರಾಗಿತ್ತಲ್ಲದೆ ಸ್ವತಃ ಬಸವರಾಜ್ ಹಿಟ್ನಾಳ್ ಎಂಪಿ ಅಭ್ಯರ್ಥಿಯಾಗಿದ್ದರಿಂದ ಮುಸ್ಲಿಂ ಮತಗಳನ್ನು ಸೆಳೆಯಲು ಸೈಯದ್‌ಗೆ ನಿಗಮ ಮಂಡಳಿಯ ಭರವಸೆ ಕೊಟ್ಟು ಕಾಂಗ್ರೆಸ್‌ಗೆ ಬರಮಾಡಿಕೊಂಡಿದ್ದರು. ಆದರೆ ಹಿಟ್ನಾಳ್ ಕಂಪನಿ ಕೊಟ್ಟ ಮಾತು ಉಳಿಸಿಕೊಳ್ಳಲಿಲ್ಲ; ಇದರಿಂದ ಸಿಡಿದೆದ್ದ ಸೈಯದ್ ಇದೀಗ ಜೆಡಿಎಸ್ ಸೇರಿಕೊಂಡಿದ್ದಾರೆ.


ಕೊಪ್ಪಳ ಜಿಲ್ಲೆಯಲ್ಲಿ ಜೆಡಿಎಸ್‌ಗೆ ತನ್ನದೇ ಆದ ಮತಗಳಿವೆ. ಕಳೆದ ಎಲೆಕ್ಷನ್‌ನಲ್ಲಿ ಗಂಗಾವತಿಯಿಂದ ಇಕ್ಬಾಲ್ ಅನ್ಸಾರಿ ಗೆದ್ದದ್ದು, ಕುಷ್ಟಗಿಯಲ್ಲಿ ಶರಣಪ್ಪ ವಕೀಲ 26,000 ಮತ ಕಿತ್ತು ಫೈ... ಕೊಟ್ಟದ್ದು ಅದನ್ನು ಪುಷ್ಟೀಕರಿಸುತ್ತದೆ. ಆದರೆ ಈಗ... ಪರಿಸ್ಥಿತಿ ನಿರ್ಮಾಣವಾಗಿದೆ. ಗಂಗಾವತಿಯ ... ಕಾಂಗ್ರೆಸ್‌ನಲ್ಲಿ ಒಂದು ಕಾಲನ್ನಿಟ್ಟುಕೊಂಡು ಕು... ಶರಣಪ್ಪ ವಕೀಲ ಬಿಜೆಪಿ ಸೇರಿಕೊಂಡಿದ್ದಾರೆ. ... ಜಿಲ್ಲಾ ಜೆಡಿಎಸ್ ಅಧ್ಯಕ್ಷ ಪ್ರದೀಪಗೌಡ ಮಾಲಿ ಪಾ... 2011ರ ಉಪಚುನಾವಣೆ, 2013ರ ಚುನಾವಣೆ... ಸೋತದ್ದಲ್ಲದೆ 2015ರಲ್ಲಿ ಪತ್ನಿ ಮಲ್ಲವ್ವ... ಹಿರೊಸಿಂದೋಗಿ ಕ್ಷೇತ್ರದ ಜಿಪಂ ಎಲೆಕ್ಷನ್‌ಗೆ ... ಕೈಸುಟ್ಟುಕೊಂಡಿದ್ದರು. ಈ ಸಾಲುಸಾಲು ಸೋ... ತಂದೊಡ್ಡಿದ್ದ ಭರ್ತಿ 11 ಕೋಟಿ ಲುಕ್ಸಾನಿನಿಂದ ಕಂಗೆಟ್ಟಿದ್ದ ಆತ ಜಿ... ಸ್ಥಾನಕ್ಕೆ ರಾಜೀನಾಮೆ ಗೀಚಿ ನಾಪತ್ತೆಯಾಗಿದ್ದರು. ಆದರೆ ಹೆಚ್.ಡಿ.ಕೆ ಹುಬ್ಬ... ಮನೆ ಮಾಡಿ ಪಕ್ಷ ಸಂಘಟನೆಗೆ ಒತ್ತು ನೀಡಿದ ತರುವಾಯ ಅದೇ ಪ... ಗೌಡನನ್ನು ಜೆಡಿಎಸ್ ಜಿಲ್ಲಾ ಅಧ್ಯಕ್ಷನನ್ನಾಗಿ ಮಾಡಿದ್ದಾರೆ.


ಈಗ ಸೈಯದ್‌ರ ಆಗಮನ ಜೆಡಿಎಸ್‌ಗೆ ಮತ್ತಷ್ಟು ಬಲ ತು... ಕೇವಲ ಮುಸ್ಲಿಂ ರಾಜಕಾರಣಕ್ಕೆ ಸೀಮಿತವಾಗದ ಸೈಯದ್ ಪಂಚಮ... ಸಮಾಜದ ಮಾಜಿ ಜಿಲ್ಲಾಧ್ಯಕ್ಷ ಮತ್ತು ಪಿ.ಎಲ್.ಡಿ ಬ್ಯಾಂಕ್ ಮಾಜಿ... ಎಂ.ವಿ.ಪಾಟೀಲ್ ಹಲಗೇರಿ, ದಲಿತ ಮುಖಂಡ ಸಿದ್ದೇಶ ಪೂಜಾರ, ಗ... ಮುಂಡರಗಿ ಸೇರಿದಂತೆ ಹಲವರ ಜೊತೆಗೂಡಿ ಪಕ್ಷ ಸಂಘಟನೆ ನಡ... ಚುನಾವಣೆಗೆ ಇನ್ನೂ ಒಂದು ವರ್ಷ ಸಮಯಾವಕಾಶ ಇರುವು... ಸೈಯದ್ ಸೋಲು-ಗೆಲುವನ್ನು ಈಗಲೇ ಹೇಳಲಿಕ್ಕೆ ಬರುವುದಿಲ್ಲ... ಮುಸ್ಲಿಂ ಮತಗಳನ್ನು ಕೇವಲ ಓಟ್ ಬ್ಯಾಂಕ್ ಆಗಿ ಬಳಸಿಕೊ... ಕುಟುಂಬ ರಾಜಕಾರಣಿಗಳಿಗಂತೂ ಜೆಡಿಎಸ್ ನಡೆ ನಡುಕ ಹುಟ್ಟಿ...

■ ಸ.ಶರಣಪ್ಪ ಪಾ...


ಅನ್ಸಾರಿ


ಶರಣಪ್ಪ


ಪ್ರದೀಪ್ ಗೌಡ



ರಾಘವೇಂದ್ರ ...

...ದ್ಧಮಾದರಿಯನ್ನು ದಾಟುವ ಯತ್ನದಲ್ಲಿ ಮಹಿಳಾ ಅಸ್ಮಿತೆ

...ಂದು ಚಿತ್ರ ಪರಿಣಾಮಕಾರಿ ಮತ್ತು ಅರ್ಥಪೂರ್ಣ ...ು ಕಥೆ. ಅದನ್ನು ನಿರೂಪಿಸುವ ಚಿತ್ರಕಥೆ ...ುಖ್ಯ, ಹಾಡು, ನೃತ್ಯ ಸಿನಿಮಾದ ಎರಡನೆಯ ... ಎಂದು ಪುಟ್ಟಣ್ಣ ಕಣಗಾಲ್ ಹೇಳುತ್ತಾರೆ. ಇತ್ತೀಚೆಗೆ ...ರಿನಲ್ಲಿ ಪ್ರದರ್ಶನ ಕಂಡ ಈ ಸಾಲಿನ ಅತ್ಯುತ್ತಮ ... ರಾಜ್ಯ ಪ್ರಶಸ್ತಿ ಪಡೆದ ಸಂಜ್ಯೋತಿ ವಿ.ಕೆ. ಅವರ ...ನದ 'ಅನಲ' ಕಿರುಚಿತ್ರ ನೋಡಿದಾಗ ಈ ಮಾತು ...ುಪಿತು.

...ಲಯಾಳಂನ ಖ್ಯಾತ ಕತೆಗಾರ್ತಿ ಬಿ.ಎಂ. ಝುಹಾರಾ ...ುನಿಕಥೆ 'ಭ್ರಾಂತ್' ಆಧರಿಸಿ 'ಅನಲ' ಕಿರುಚಿತ್ರವನ್ನು ...ಸಲಾಗಿದೆ. ದಾಂಪತ್ಯ ಹೆಣ್ಣಿಗೆ ನಿರ್ದೇಶಿಸಿರುವ ...ರಿಗೆ ಹೊರತಾಗಿ ಒಂದು ದಿನದ ಮಟ್ಟಿಗೆ ಭಿನ್ನವಾಗಿ ...ಲು ಬಯಸುವ ಹೆಣ್ಣೊಬ್ಬಳ ಅಂತರಾಳವನ್ನು 'ಅನಲ' ...ಡುತ್ತದೆ. ಈ ಪ್ರಯತ್ನಕ್ಕೆ ಪುರುಷಪ್ರಧಾನ ಸಮಾಜ ...ದ ಪ್ರತಿಕ್ರಿಯೆಯನ್ನು ಸೂಕ್ಷ್ಮವಾಗಿ ತೆರೆದಿಡುತ್ತದೆ. ...ರತಮ್ಯ, ಸ್ತ್ರೀ ವಿಮೋಚನೆಯ ಅಂಶಗಳನ್ನು ಪ್ರೇಕ್ಷಕರ ...ಟ್ಟು ಚಿಂತನೆಗೆ ಪ್ರೇರೇಪಿಸುತ್ತದೆ. ಈ ಮೇಲಿನ ...ರಣಗಳಿಂದಾಗಿ 'ಅನಲ' ಕುತೂಹಲ ಹುಟ್ಟಿಸುತ್ತದೆ.

...ನಂದಿನ ಬದುಕಿನ ಸಾಮಾನ್ಯವೆನಿಸುವ ಕೆಲಸಗಳಲ್ಲಿ ...ಹೋಗಿರುವ ಹೆಣ್ಣೊಬ್ಬಳ ಕತೆಯೊಳಗೆ ಸ್ತ್ರೀವಾದದ ...ಯ ಮುಖ್ಯ ಅಂಶಗಳು ಒಳಗೊಳ್ಳುವಂತೆ ಚಿತ್ರಕತೆ ... ಬೆಳೆಸಿರುವುದು ಮತ್ತು ಚಿತ್ರವಾಗಿಸುವಲ್ಲಿ ದೃಶ್ಯಗಳನ್ನು ...ರ್ಣವಾಗಿ ನಿರ್ವಹಿಸಿರುವುದು ಸಂಜ್ಯೋತಿಯವರ ...ೀಲತೆಗೆ ಸಾಕ್ಷಿ. ಅನಲ ಹಾಗೂ ಅವಳ ಗಂಡ ...ಶನ ಪಾತ್ರಗಳನ್ನು ಯಾವುದೇ ಪೂರ್ವಾಗ್ರಹದ ...ನಲ್ಲಿ ಬಂಧಿಸದೇ ಅವುಗಳದ್ದೇ ಸಹಜ ರೀತಿಯಲ್ಲಿ ...ಲು ಬಿಟ್ಟಿರುವ ನಿರ್ದೇಶಕಿಯ ಸಂಯಮದ ...ಣೆ ಗಮನಾರ್ಹ. ಇದಕ್ಕೆ ಚಿತ್ರದ ತಾಂತ್ರಿಕ ಅಂಶಗಳು ...ಕವಾಗಿವೆ. ಬಿ.ಆರ್. ವಿಶ್ವನಾಥ್ ಅವರ ಕ್ಯಾಮೆರಾ ...ಳ ಮನೋಭಿತ್ತಿಯನ್ನು, ಅದಕ್ಕೆ ಪೂರಕವಾದ ...-ಬೆಳಕಿನ ಸಂಯೋಜನೆಯಲ್ಲಿ ಚೆನ್ನಾಗಿ ಸೆರೆಹಿಡಿದಿದೆ. ...ರ್.ಪಿ ಅವರ ಸಂಕಲನ ಅಚ್ಚುಕಟ್ಟಾಗಿದೆ. ಚಿತ್ರದ ... ಸಂದರ್ಭಗಳಲ್ಲಿ ಎಸ್.ಆರ್. ರಾಮಕೃಷ್ಣ ಅವರ ...ತ ದೃಶ್ಯಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ...ುಗರಿಗೆ ತಲುಪಿಸುತ್ತವೆ. ಜಗದೀಶ್ ಪಾತ್ರದಲ್ಲಿ ಕೆ.ಎಸ್. ಪರಮೇಶ್ವರ ಸಹಜವಾಗಿ ಅಭಿನಯಿಸಿದ್ದಾರೆ. ನಿರ್ದೇಶನದಲ್ಲಿ ಸಹಾಯಕ ನಿರ್ದೇಶಕರಾಗಿ ಕಿರಣ್ ಮಾರಶೆಟ್ಟಿಹಳ್ಳಿ ಅವರ ಶ್ರಮವೂ ಇದೆ.



ಚಿತ್ರದ ನಿರೂಪಣೆ ಮತ್ತು ಅಭಿನಯ ಒಂದು ಹದದಲ್ಲಿ ಸಮತೋಲನ ಸಾಧಿಸಿದಾಗ ಅದು ಒಂದು ಸಂವೇದನಾಶೀಲ ಕೃತಿಯಾಗಿ ಮನಸ್ಸಿನಲ್ಲಿ ಉಳಿಯುತ್ತದೆ. ನಿರ್ದೇಶಕಿ ಸಂಜ್ಯೋತಿ ಇದನ್ನು ಸಾಧಿಸಲು ಪ್ರಯತ್ನಿಸಿದ್ದಾರೆ. ನಿರ್ದೇಶನದ ಜೊತೆಗೆ ಅನಲ ಪಾತ್ರವನ್ನೂ ನಿರ್ವಹಿಸಿದ್ದಾರೆ.



ಬಹುಶಃ ಆ ಕಾರಣಕ್ಕೆ ಪಾತ್ರದ ಅಭಿನಯ ಮತ್ತು ನಿರ್ದೇಶನ ಎರಡೂ ಒಂದರ ಭಾರವನ್ನು ಮತ್ತೊಂದು ಹೊರುವಂತಹ ಸನ್ನಿವೇಶ ಉಂಟಾಗಿರಲೂಬಹುದು. ಚಿತ್ರ ನೋಡುವಾಗ ಕೆಲವೆಡೆ ಕಥೆಯ ಸಹಜ ಓಘಕ್ಕೆ ಚಿತ್ರಕಥೆ ತಡೆಯೊಡ್ಡುತ್ತಿರುವ ಅನಿಸಿಕೆ ಮೂಡುತ್ತದೆ. ಜೊತೆಗೆ, ಪಾತ್ರದಲ್ಲಿ ಸಂಪೂರ್ಣ ಮುಳುಗಿ ಅಭಿನಯದಲ್ಲಿ ಹಿಡಿತ ಸಾಧಿಸುವುದಕ್ಕೂ ಹೊಣೆಗಾರಿಕೆಯ ಹೊರೆ ಅಡ್ಡಬಂದಂತೆನಿಸುತ್ತದೆ!

ಅದೇನೇ ಆದರೂ, ಗಟ್ಟಿ ಕಥೆಯನ್ನು ವಿಭಿನ್ನವಾಗಿ ತೆರೆಗೆ ತಂದು ತಮ್ಮ ಮೊದಲ ಕಿರುಚಿತ್ರಕ್ಕೇ ರಾಜ್ಯಪ್ರಶಸ್ತಿ ಪಡೆಯುವ ಮೂಲಕ ಕನ್ನಡ ಚಿತ್ರರಂಗದ ಉತ್ತಮ ಮಹಿಳಾ ನಿರ್ದೇಶಕಿಯರ ಸಾಲಿನಲ್ಲಿ ನಿಲ್ಲುವ ಭರವಸೆಯನ್ನು ಸಂಜ್ಯೋತಿ ಮೂಡಿಸಿದ್ದಾರೆ. ಕಥಾವಸ್ತುವಿನ ಜೊತೆಗೆ ಸಿನಿಮಾ ಮಾಧ್ಯಮವನ್ನು ತಾಂತ್ರಿಕವಾಗಿ ಸಶಕ್ತವಾಗಿ ದುಡಿಸಿಕೊಂಡಿರುವ 'ಅನಲ' ಕಿರುಚಿತ್ರವು ಈಗಾಗಲೇ 'ರಾಷ್ಟ್ರ-ರಾಜ್ಯ ಪ್ರಶಸ್ತಿ ವಿಜೇತ ಹಾಗೂ ಪನೋರಮ ಚಿತ್ರಗಳ ಉತ್ಸವ' ಮತ್ತು 'ನಿಟ್ಟೆ ಅಂತರರಾಷ್ಟ್ರೀಯ ಚಿತ್ರೋತ್ಸವ'ಗಳಲ್ಲಿ ಪ್ರದರ್ಶನದ ಗೌರವಕ್ಕೆ ಪಾತ್ರವಾಗಿದೆ. ಸಿನಿ ತಜ್ಞರು ಹಾಗೂ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆಯನ್ನು ಪಡೆದಿದೆ. ಜೊತೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ 'ಲಾಸ್‌ಎಂಜಲೀಸ್ ಅಂತರರಾಷ್ಟ್ರೀಯ ಸಿನಿಫೆಸ್ಟ್' ಹಾಗೂ 'ಈಕ್ವಾಲಿಟಿ ಅಂತರರಾಷ್ಟ್ರೀಯ ಚಿತ್ರೋತ್ಸವ'ಗಳಲ್ಲಿ ಸೆಮಿಫೈನಲಿಸ್ಟ್ ಆಗಿ ಆಯ್ಕೆಯಾಗಿದೆ. ಶಿವಮೊಗ್ಗದಲ್ಲಿ ನಡೆದ 'ಅಂಬೆಗಾಲು-2' ಕಿರುಚಿತ್ರ ಸ್ಪರ್ಧೆಯಲ್ಲಿ ಮುಖ್ಯ ಪಾತ್ರ ನಿರ್ವಹಿಸಿದ್ದ ಸಂಜ್ಯೋತಿ 'ಅತ್ಯುತ್ತಮ ನಟಿ' ಪ್ರಶಸ್ತಿಗೆ ಭಾಜನರಾಗಿದ್ದರು.

ಈ ಸಿನಿಮಾ ಈಗಾಗಲೇ ಶಿವಮೊಗ್ಗ ಮತ್ತು ಬೆಂಗಳೂರಿನಲ್ಲಿ ಪ್ರದರ್ಶನಗೊಂಡು ಸಮಾಜದಲ್ಲಿನ ಲಿಂಗಾಧಾರಿತ ಪಾತ್ರಗಳ ಕುರಿತು ಅರ್ಥಪೂರ್ಣ ಚರ್ಚೆಯನ್ನು ಹುಟ್ಟುಹಾಕಿದೆ. ಮಂಡ್ಯ ಮೈಸೂರು, ಹಾಸನ, ಮಂಗಳೂರು, ಧಾರವಾಡ, ಅಣ್ಣಿಗೇರಿಯನ್ನೂ ಒಳಗೊಂಡಂತೆ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ವಿವಿಧ ಸಂಘಟಕರು ಈ ಚಿತ್ರದ ಪ್ರದರ್ಶನವನ್ನು ಆಯೋಜಿಸಲು ಆಸಕ್ತಿ ತೋರಿಸಿದ್ದಾರೆ. ಹಾಗೆಯೇ ರಾಜ್ಯಾದ್ಯಂತ ವಿಶ್ವವಿದ್ಯಾಲಯಗಳಲ್ಲಿ ಹಾಗೂ ಕಾಲೇಜುಗಳಲ್ಲಿ 'ಅನಲ'ವನ್ನು ಪ್ರದರ್ಶಿಸಿ, ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುವ ಯೋಜನೆಯೂ ಇದೆ.

ಕರ್ನಾಟಕ ಜನಶಕ್ತಿ ಸಹಯೋಗದಲ್ಲಿ ಜೂನ್ 11ರ ಭಾನುವಾರ ಬೆಂಗಳೂರಿನ ವೆಂಕಟಪ್ಪ ಆರ್ಟ್ ಗ್ಯಾಲರಿಯ ಆಡಿಟೋರಿಯಂನಲ್ಲಿ ಎರಡು ಪ್ರದರ್ಶನಗಳನ್ನು ಹಮ್ಮಿಕೊಳ್ಳಲಾಗಿತ್ತು. ಅಂದು ಖ್ಯಾತ ನಟ ಹಾಗೂ ಜನಪರ ಹೋರಾಟಗಳ ಒಡನಾಡಿ ಚೇತನ್ ಹಾಗೂ ಸಂವೇದನಾ ಶೀಲ ನಿರ್ದೇಶಕ ಬಿ.ಎಮ್. ಗಿರಿರಾಜ್ ಪ್ರದರ್ಶನದಲ್ಲಿ ಪಾಲ್ಗೊಂಡು ಪ್ರೇಕ್ಷಕರೊಂದಿಗೆ ಸಂವಾದ ನಡೆಸಿದರು. ಜನಶಕ್ತಿ ಮತ್ತು ಗೆಳೆಯರ ಬಳಗದಿಂದ ಜೂನ್ 24ರಂದು ಮಂಡ್ಯದಲ್ಲಿ ಮತ್ತು ಜೂನ್ 25ರಂದು ಮೈಸೂರಿನಲ್ಲಿ 'ಅನಲ'ದ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ. ಆಸಕ್ತರು ವಿವರಗಳಿಗಾಗಿ ಕಿರಣ್ ಮಾರಶೆಟ್ಟಿಹಳ್ಳಿ 8310947403 ಅಥವಾ ಗಣೇಶ್ 7846046161 ಅವರನ್ನು ಸಂಪರ್ಕಿಸಬಹುದು.

ಒಟ್ಟಿನಲ್ಲಿ, ಮಹಿಳಾ ಸಮಾನತೆಯ ಕೂಗು ಹುಟ್ಟಿ ಶತಮಾನಗಳು ಕಳೆದರೂ ಸಿದ್ಧಮಾದರಿಗಳಿಂದ ಕನಿಷ್ಠ ಪ್ರಮಾಣದಲ್ಲಿ ಬಿಡುಗಡೆಗೊಳ್ಳುವ ಕನಸನ್ನು ಕಟ್ಟಿಕೊಂಡರೆ ಮಹಿಳೆಯರು ಪಿತೃಪ್ರಧಾನತೆಯ ಜ್ವಾಲಾಮುಖಿಯ ಸ್ಫೋಟವನ್ನು ಎದುರಿಸಬೇಕಾಗುತ್ತದೆ. ಈ ಸಂಘರ್ಷವನ್ನು ಕಟ್ಟಿಕೊಡುವ 'ಅನಲ'ದಂತಹ ಸಾಮಾಜಿಕ ಚಿತ್ರವನ್ನು, ಕಮರ್ಷಿಯಲ್ ಎಂದು ಕರೆಯಲ್ಪಡುವ ಸಿನಿಮಾ ಮಾಧ್ಯಮದ ಮೂಲಕ ತೆರೆದಿಡುವ ಧೈರ್ಯ ತೋರಿದ್ದಕ್ಕಾಗಿ ಸಂಜ್ಯೋತಿ ಮತ್ತು ತಂಡ ಖಂಡಿತವಾಗಿ ಅಭಿನಂದನಾರ್ಹರು!

■ ಗಣೇಶ್ ನಚಿಕೇತು

ಗಿರೀಶ್ ಕಾಸರವಳ್ಳಿ ಕಂಡಂತೆ ಅನಲ

...ನೀವು ಈ ಸಿನಿಮಾದ ಕಂಪೋಸಿಷನ್ನೋಡಿ the way the shots are composed, selection of ...ils, locations ಅದೆಲ್ಲ ಬಹಳ ಚೆನ್ನಾಗಿದೆ. Plasticity of the image ಅಂತೀವಲ್ಲ, ಅಂದ್ರೆ ಆ ...ಜಿನ ಎಕ್ಸ್‌ಪ್ರೆಸ್ಸೀವ್ನೆಸ್, ಅಭಿವ್ಯಕ್ತಿ.. ಇದನ್ನ ಹೇಗೆ ಕಂಪೋಸ್ಮಾಡಿದ್ರೆ, ಯಾವ ಲೆನ್ಸ್ಹಾಕಿದ್ರೆ, ಯಾವ ಆಂಗಲ್ಹಾಕಿದ್ರೆ ... ಹೆಚ್ಚು ಎಕ್ಸ್‌ಪ್ರೆಸೀವ್ ಆಗಿ ಕಾಣುತ್ತೆ ಅನ್ನೋದು. ನಾನು ಹೇಳ್ಬೇಕಾಗಿದ್ದು 'ಸುಂದರವಾಗಿ ಕಾಣುತ್ತೆ' ಅಂತಲ್ಲ, ... 'ಸೂಕ್ತವಾಗಿ ಕಾಣುತ್ತೆ' ಅನ್ನೋ ಒಂದು ಅರಿವು ಈ ಸಿನಿಮಾದಲ್ಲಿ ಕಾಣುತ್ತೆ. ಅದಕ್ಕೆ ನಾನು ಹೇಳಿದ್ದು, ಇದು ...ರ್ನ ಮೊದಲ ಸಿನಿಮಾ ಅಂತ ನನಗೆ ಅನ್ನಿಸಲೇ ಇಲ್ಲ, ಅಲ್ಲಿ ಒಂದು ಮೆಚ್ಯೂರ್ ಡೈರೆಕ್ಟರ್ನ ಲಕ್ಷಣ ಕಾಣುತ್ತೆ."

ಪ್ರೊ. ರಾಜೇಂದ್ರ ಚೆನ್ನಿ

...ಬಹಳ ಡಿಸ್ಟರ್ಬಿಂಗ್ ಆದ ಫಿಲ್ಮ್ ಇದು. ಚಿತ್ರದ ಕಂಟೆಂಟ್ ದೃಷ್ಟಿಯಿಂದ ಹೇಳೋದಾದ್ರೆ ಪ್ರತಿನಿತ್ಯದ ...ದಿನ ಕತೆ ಅಂತ ಏನಿದೆ, ಏನೂ ಕಣ್ಣಿಗೆ ಎದ್ದು ಕಾಣದೆ ಇರುವಂಥದ್ದು ಅತೀ ಸಾಮಾನ್ಯ ಅನಿಸುವಂಥದ್ದು, ಆ ...ದಿನ ಕತೆ ಒಳಗೇನೇ ಹೆಣ್ಣಿನ ಪ್ರತಿದಿನದ ಸಮಾಧಿ ಏನಾಗುತ್ತೋ ಅದನ್ನ ಈ ಚಿತ್ರ ಬಹಳ ಮನಸ್ಸು ...ಮುವ ಹಾಗೇ ಕಟ್ಟಿಕೊಟ್ಟಿದೆ. ಅತ್ಯಂತ ಸಾಮಾನ್ಯ ಮಧ್ಯಮ ವರ್ಗದ ಅತೀ ಪರಿಚಿತವಾದ ಸ್ತರದಲ್ಲಿ ಇದರಲ್ಲೇನು ...ದಿರೋಕೆ ಸಾಧ್ಯ ಅನ್ನೋ ಹಾಗೆ ಶುರುವಾಗಿ, ಕೊನೆಗೆ ಅದು ಇದರೊಳಗೆ ಇಂಥದ್ದೂ ಸಾಧ್ಯನಾ? ಅನ್ನುವಂಥದ್ದನ್ನ ...ಮೇಜ್‌ಗಳ ಮೂಲಕ ತೋರಿಸುತ್ತೆ. ಒಂದು ಸಣ್ಣಕಿರುಚಿತ್ರದ ಸೀಮಿತ ಅವಕಾಶ, ಸಾಧ್ಯತೆಗಳನ್ನು ಬಳಸಿಕೊಂಡು ... ಮಾಡಿರುವುದು ಬಹಳ ಅದ್ಭುತವಾಗಿದೆ ಅಂತ ನನಗನ್ನಿಸಿತು.

ಮಲ್ಲಿಗೆ ಸಿರಿಮನೆ

...ಂದು ಮಹಿಳಾ ಸಂಘಟನೆ ಕಾರ್ಯಕರ್ತೆಯಾಗಿ, ವಿದ್ಯಾರ್ಥಿಗಳಲ್ಲಿ ಅಥವಾ ಯಾವುದೇ ಸ್ಲಂನಲ್ಲಿ ಅಥವಾ ...ಪಸ್ಸಿ ಕೇವಲ ಅರ್ಧಗಂಟೆಯಲ್ಲಿ ಹಲವು ಪ್ರಶ್ನೆಗಳನ್ನು, ಚರ್ಚೆಗಳನ್ನು ಹುಟ್ಟುಹಾಕಬಲ್ಲ ಒಂದೊಳ್ಳೆ ಕ್ಯಾಂಪೇನ್ ...ರಿಯಲ್ ಆಗಿ 'ಅನಲ' ಒದಗುತ್ತೆ ಅಂತ ನನಗೆ ತುಂಬ ಸಂತೋಷ ಆಯ್ತು. ಹೀಗೆ ಸಮಾಜವನ್ನು ಸೆನ್ಸಿಟೈಸ್ ...ಬು ಇದೊಂದು ಒಳ್ಳೆಯ ಕೃತಿ.

'ಅನಲ' ಕಿರುಚಿತ್ರ ತಾಂತ್ರಿಕ ವರ್ಗದ ವಿವರಗಳು

ನಿರ್ಮಾಣ ಸಂಸ್ಥೆ	: ಬಾನ್‌ಬಯಲು ಚಿತ್ರ, ಬೆಂಗಳೂರು
ನಿರ್ಮಾಪಕಿ	: ಸಂಜ್ಯೋತಿ ವಿ.ಕೆ.
ಸಹನಿರ್ಮಾಪಕರು	: ನಿತಿನ್ ಆರ್.,
	: ಮಂಜುನಾಥ್ ರಾಮಕೃಷ್ಣ
ಕ್ಯಾಮೆರಾ	: ಬ್ಲ್ಯಾಕ್ ಮ್ಯಾಜಿಕ್ (2)
ಮೂಲಕತೆ	: ಭ್ರಾಂತ್ (ಮಲಯಾಳಂ)
ಕತೆಗಾರ್ತಿ	: ಬಿ.ಎಂ.ಝುಹಾರಾ
ಕನ್ನಡಕ್ಕೆ	: ಪ್ರೊ. ಪಾರ್ವತಿ ಜಿ. ಐತಾಳ್

ಚಿತ್ರಕಥೆ-ಸಂಭಾಷಣೆ- ನಿರ್ದೇಶನ:
ಸಂಜ್ಯೋತಿ ವಿ.ಕೆ

ಪಾತ್ರವರ್ಗ

ಅನಲ	-ಸಂಜ್ಯೋತಿ ವಿ.ಕೆ.
ಜಗದೀಶ	-ಪರಮೇಶ್ವರ ಕೆ.ಎಸ್.


ತಾಂತ್ರಿಕ ವರ್ಗ

ಛಾಯಾಗ್ರಹಣ	: ಬಿ.ಆರ್.ವಿಶ್ವನಾಥ್
ಸಂಗೀತ	: ಎಸ್. ಆರ್. ರಾಮಕೃಷ್ಣ
ಸಂಕಲನ	: ಶಶಿಧರ್.ಪಿ

...ೋವಿನ ...ಾಡು

....
...ಹೊರಟಿದ್ದೇನೆ
...ಕೊಟ್ಟಿಗೆಯಲ್ಲಿ ಇವತ್ತು
...
...ಹಬ್ಬವಿದೆ
... ...

ಸಗಣಿ-ಗಂಜಲ
ಬಾಚಿ-ಬಳಿದು
ಕೊಂಬು-ಗೊರಸು
ಕೆರೆದು-ಕೊರೆದು
ಮೈಪೂರ್ತಿ ಬಣ್ಣ ಬಳಿದು
ಕೊಂಬ ತುದಿಗೆ ಕಾಮನಬಿಲ್ಲಿನ ಟೇಪುಗಳನ್ನು ಸುತ್ತಿ
ಚೆಂಡು ಹೂವು ಕೊಬ್ಬರಿ ಹಾರ ಇಳಿ ಬಿಟ್ಟು ಮೈದಡವಿದಾಗ
ಮೈ-ಕೈ ನೆಕ್ಕಿ ಪ್ರತಿ ಪ್ರೀತಿಯನ್ನ ಎಗ್ಗಿಲ್ಲದೆ ಕೊಟ್ಟವಳು...
ಒಂದೂ ಮಾತು ಹೇಳದೆ ಹೋಗಿಬಿಟ್ಟಳು ನಿಶ್ಶಬ್ದತೆಯ..
ಮುಟ್ಟದೆ ಹೊರಗಿಟ್ಟವ್ರಾರೆ ಮುಟ್ಟಿಸಿಕೊಳ್ಳದವರು..
ಸೂತಕ, ಹಾಲು-ಮೂಳು ಸುದುಗಾಡು ಎಂದು...!!
ಹಾಲುಂಡವರ ಗಂಟಲಲ್ಲಿ



ವಿಷವುಕ್ಕುತ್ತಿದೆ
ಮೆರವಣಿಗೆ ತಂದಿದ್ದೇನೆ
ಹೆಗಲ ಮೇಲೆ ಹೊತ್ತು
ಭಾರ ಲೆಕ್ಕಿಸದೆ
ಮೊಂಡು ಕತ್ತಿಗೆ ತವಕವ್ಪೋತವಕ
ಹದ ಬಾಡನ್ನೆಲ್ಲಾ ಗಂಟಿಕ್ಕಲಾಗಿದೆ
ಸಂಕಟಗಳನ್ನೆಲ್ಲಾ ಹೊರೆ ಕಟ್ಟಿ
ಊರ ಹೊರಗೆ ಕರಾಬು
ಜಮೀನಿನಲ್ಲಿ ದಫನ್ ಮಾಡಿದ್ದೇನೆ
ನಿನ್ನ ನೆನಪುಗಳಂತೆ
ತುಂಬೆ ಗಿಡನೆಟ್ಟು
ಹಾಲೆರೆದು ಬಂದಿದ್ದೇನೆ

ನಿನ್ನ ಊರೊಳಗಿನ
ಹೊರೋವಿನಂತೆ
ನನ್ನಟ್ಟಿಯಲ್ಲೂ ಇವತ್ತು
ಹಬ್ಬವಿದೆ
ಒಣ ಚರ್ಮದ
ರಣಬಾಜೆಯ ಅಬ್ಬರದಲ್ಲೂ
ಅವಳೇ...
ನಮ್ಮೊಳಗೆ ಕರಗಿದವಳು
ಸಾವಲ್ಲೂ ನನ್ನವರ ಪೊರೆದವಳು...

■ ಎಸ್.ರವಿಕುಮಾರ್

ಫ್ಯಾಸಿಸ್ಟ್ ಮೋದಿ ಸರ್ಕಾರದಡಿ ಪತ್ರಿಕಾ ಸ್ವಾತಂತ್ರ್ಯಕ್ಕೆ ಕುತ



■ ಸುರೇಶ್ ಭಟ್ ಬಾಕ್ರಬೈಲ್

ಎಲುಬಿಲ್ಲದ ನಾಲಿಗೆ ಎತ್ತ ಬೇಕಾದರೂ ಹೊರಳುತ್ತದೆ ಎಂಬ ಗಾದೆ ಮಾತಿದೆ. ಮೋದಿ ಒಮ್ಮೆ ಪ್ರಜಾಸತ್ತೆಯನ್ನು ಗಟ್ಟಿಗೊಳಿಸಬೇಕು ಎನ್ನುತ್ತಾನೆ. ಆರೋಗ್ಯಕರ ಟೀಕೆಗಳು ಬೇಕು ಎನ್ನುತ್ತಾನೆ. ಆದರೆ ಆತನ ಸರ್ಕಾರ ಮಾಡುವ ಕೆಲಸಗಳೆಲ್ಲವೂ ಇದಕ್ಕೆ ತೀರ ವಿರುದ್ಧವಾಗಿದ್ದು ಪ್ರಜಾಸತ್ತೆಯನ್ನು ದುರ್ಬಲಗೊಳಿಸುತ್ತಾ ದೇಶವನ್ನು ಸರ್ವಾಧಿಕಾರಿ ಪ್ರಭುತ್ವದ ದಿಕ್ಕಿನಲ್ಲಿ ಕೊಂಡೊಯ್ಯುತ್ತಿವೆ. ಮೋದಿ ಸರ್ಕಾರದ ಮೂರು ವರ್ಷಗಳ ದುರಾಡಳಿತದಲ್ಲಿ ಭಾರತದ ಮಾಧ್ಯಮ ವಲಯದಲ್ಲಂತೂ ಹಿಂದೆಂದೂ ಆಗಿರದಷ್ಟು ಬದಲಾವಣೆಗಳಾಗಿವೆ. ಹಿಂದಾದರೆ – ತುರ್ತು ಪರಿಸ್ಥಿತಿ ಮತ್ತು ರಾಜೀವ್ ಗಾಂಧಿ ಆಡಳಿತದ ಅಲ್ಪಾವಧಿಯನ್ನು ಹೊರತುಪಡಿಸಿ – ಬಹುತೇಕ ಮಾಧ್ಯಮಗಳು ಪತ್ರಿಕಾಧರ್ಮವನ್ನು ಕಾಪಾಡಿಕೊಂಡು ಬರುತ್ತಿದ್ದವು. ಆಳುವವರ ತಪ್ಪುನಡೆಗಳನ್ನು ಟೀಕಿಸುವ ಧನಾತ್ಮಕ ಕೆಲಸ ಮಾಡುತ್ತಿದ್ದವು. ಅಂದು ತುತ್ತೂರಿಗಳ ಸಂಖ್ಯೆ ತೀರ ಕಡಿಮೆ ಇತ್ತು, ಆದರೆ ಇಂದು ಫ್ಯಾಸಿಸ್ಟ್ ಮೋದಿ ಸರ್ಕಾರದಡಿ ಹೊಗಳುಭಟ ಮಾಧ್ಯಮಗಳ ಸಂಖ್ಯೆ ಉತ್ತುಂಗಕ್ಕೇರಿದೆ. ಸ್ತುತಿಪಾಠದಲ್ಲೆ ತಲ್ಲೀನವಾಗಿರುವ ಇವು ಸರ್ಕಾರದ ತಪ್ಪುನಡೆಗಳನ್ನು ಟೀಕಿಸುತ್ತಿಲ್ಲ, ವರದಿ ಮಾಡುತ್ತಿಲ್ಲ ಅಥವಾ ನಯವಾಗಿ ತೇಲಿಸಿ ಬಿಡುತ್ತಿವೆ. ಅದೇವೇಳೆ ಯಾವ ಪಕ್ಷಕ್ಕೂ ಸೇರದೆ ಸ್ವತಂತ್ರವಾಗಿ ಕಾರ್ಯಾಚರಿಸುವ ಮತ್ತು ಸರ್ಕಾರದ ತಪ್ಪುನಡೆಗಳನ್ನು ಟೀಕಿಸುವ ಕೆಲವೇ ಕೆಲವು ಮಾಧ್ಯಮಗಳ ಬಾಯಿ ಮುಚ್ಚಿಸಲು ಎಲ್ಲಿಲ್ಲದ ಪ್ರಯತ್ನ ನಡೆಯುತ್ತಿದೆ. ಆರೆಸ್ಸೆಸ್ ಮಕ್ಕಳ ಕಳ್ಳಸಾಗಾಟದಲ್ಲಿ ತೊಡಗಿರುವ ಕುರಿತು ತನಿಖಾ ವರದಿಯೊಂದನ್ನು ಪ್ರಕಟಿಸಿದ ಔಟ್‌ಲುಕ್ ನಿಯತಕಾಲಿಕದ ಸಂಪಾದಕ ತನ್ನ ಕೆಲಸ ಕಳೆದುಕೊಳ್ಳಬೇಕಾಯಿತು. ಕಳೆದ ವರ್ಷ ರಾಜಸ್ಥಾನ್ ಪತ್ರಿಕಾ ಎಂಬ ಮಾಧ್ಯಮಕ್ಕೆ ಕಿರುಕುಳ ನೀಡಿದ ಪರಿಣಾಮವಾಗಿ ಅದು ಆರ್ಥಿಕ ನಷ್ಟಕ್ಕೆ ಗುರಿಯಾಗಿದೆ. ಇನ್ನು ಬೆಳಕಿಗೆ ಬಾರದ ಪ್ರಕರಣಗಳ ಸಂಖ್ಯೆ ಎಷ್ಟಿದೆಯೊ ಗೊತ್ತಿಲ್ಲ. ಸರ್ಕಾರಕ್ಕೆ ನಿರ್ದಿಷ್ಟ ಮಾಧ್ಯಮವೊಂದು ಇಷ್ಟವಾಗದಾಗ ಸಂಬಂಧಪಟ್ಟ ಪತ್ರಕರ್ತರೊಂದಿಗೆ ಮಾತನಾಡಬಾರದೆಂದು ಅಧಿಕಾರಿಗಳಿಗೆ ಗುಪ್ತ ಮಾಹಿತಿ ರವಾನೆಯಾಗುತ್ತದೆ. ಸರ್ಕಾರವನ್ನು ಅಥವಾ ಮೋದಿಯ ನಿಕಟವರ್ತಿ ಕಾರ್ಪೊರೇಟು ಕುಳಗಳನ್ನು ಟೀಕಿಸುವ ಅಥವಾ ಅವ್ಯವಹಾರಗಳನ್ನು ಬಯಲಿಗೆಳೆಯುವ ಪತ್ರಕರ್ತರು ಕೆಲಸ ಅಥವಾ ಜೀವವನ್ನೆ ಕಳೆದುಕೊಳ್ಳಬಹುದಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇವತ್ತು ಹೆಚ್ಚಿನ ಮಾಧ್ಯಮಗಳಲ್ಲಿ ವರದಿಗಳ ಬದಲು ಅಭಿಪ್ರಾಯಗಳು, ಸರ್ಕಾರವನ್ನು ನೇರವಾಗಿ ಹೊಗಳುವ ಬರಹಗಳು ಹೆಚ್ಚೆಚ್ಚು ಕಾಣಿಸಿಕೊಳ್ಳುತ್ತಿರುವುದಕ್ಕೆ ಜಾಹೀರಾತುಗಳ ಲಂಚದೊಂದಿಗೆ ಇದೂ ಒಂದು ಮುಖ್ಯ ಕಾರಣ. ಇತ್ತೀಚಿನ ಎನ್‌ಡಿಟಿವಿ ಪ್ರಕರಣ ಮೋದಿ ಸರ್ಕಾರದ ಅಪ್ಪಟ ಫ್ಯಾಸಿಸ್ಟ್ ನೀತಿಗಳಿಗೆ ಅತ್ಯುತ್ತಮ ಉದಾಹರಣೆ.

ಎನ್‌ಡಿಟಿವಿ ಮತ್ತು ಮೋದಿ ಸರ್ಕಾರ

ಎನ್‌ಡಿಟಿವಿ ಮೇಲೆ ಆರಂಭದಿಂದಲೂ ಕೆಂಗಣ್ಣು ಬೀರಿರುವ ಮೋದಿ ಸರ್ಕಾರ ಜನವರಿ 2016ರ ಪಠಾಣ್‌ಕೋಟ್ ದಾಳಿಗಳ ಬಳಿಕ ಒಂದು ದಿನದ ಮಟ್ಟಿಗೆ ಎನ್‌ಡಿಟಿವಿ ಹಿಂದಿ ವಾಹಿನಿಯ ಪ್ರಸಾರವನ್ನು ನಿಲ್ಲಿಸುವಂತೆ ಆದೇಶ ಹೊರಡಿಸಿತ್ತು, ಆದರೆ ಸರ್ವೋಚ್ಚ ನ್ಯಾಯಾಲಯ ಇದನ್ನು ತಳ್ಳಿಹಾಕಿತು. ನವೆಂಬರ್ 2016ರಲ್ಲಿ ಪುನಃ ಎನ್‌ಡಿಟಿವಿಯನ್ನು ಗುರಿಯಾಗಿಸಿ 24 ಗಂಟೆಗಳ ನಿಷೇಧಾಜ್ಞೆ ಹೇರಲು ಮುಂದಾದಾಗ ಮಾಧ್ಯಮ ವಲಯದಿಂದ ಬಂದ ತೀವ್ರ ಪ್ರತಿಭಟನೆಗಳಿಗೆ ಮಣಿದು ನಿಷೇಧಾಜ್ಞೆಯನ್ನು ಹಿಂದೆಗೆದುಕೊಳ್ಳಲಾಯಿತು. ಇತ್ತೀಚಿನ ಘಟನೆಯಲ್ಲಿ ಎನ್‌ಡಿಟಿವಿಯ ಚರ್ಚಾಕಾರ್ಯಕ್ರಮವೊಂದರ ವೇಳೆ ಸಂಘಿ ಸಂಬಿತ್ ಪಾತ್ರಾ ತನ್ನ ಉದ್ಧಟತನದ ಮಾತುಗಳಿಗಾಗಿ ಹೊರನಡೆಯಬೇಕಾಗಿ ಬಂದ ಕೆಲವೇ ದಿನಗಳೊಳಗಾಗಿ ಎನ್‌ಡಿಟಿವಿ ಮೇಲೆ ಸಿಬಿಐ ದಾಳಿಗಳು ನಡೆದಿವೆ.

ದಾಳಿಗೆ ಮುನ್ನ

ಜೂನ್ 1ರಂದು ಎನ್‌ಡಿಟಿವಿಯಲ್ಲಿ ಒಂದು ಸಂವಾದ ಕಾರ್ಯಕ್ರಮ ನಡೆದಿದೆ. ಅದರಲ್ಲಿ ಸಂಜೊಯ್ ಹಜಾರಿಕ ಎಂಬವರು ಮಾತನಾಡುತ್ತಿದ್ದಾಗ ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ ಮಧ್ಯದಲ್ಲಿ ಬಾಯಿ ಹಾಕಿದರು. "ಈ ರೀತಿ ಅಡ್ಡಿಪಡಿಸುವ ಹಕ್ಕು ನಿಮಗಿದೆಯೇ?" ಎಂದು ಸಂಜೊಯ್ ಪ್ರಶ್ನಿಸಿದಾಗ ಸಂಬಿತ್ "ನಾನು ಅಡ್ಡಿ ಪಡಿಸುವುದು ಕೇವಲ ಎನ್‌ಡಿಟಿವಿಯಲ್ಲಿ ಮಾತ್ರ. ಯಾಕಂದ್ರೆ ಆ ಚಾನಲ್ ಒಂದು ಅಜೆಂಡಾ ಇಟ್ಟುಕೊಂಡಿದೆ. ನಾನು ಅಡ್ಡಿಪಡಿಸುವ ಅಗತ್ಯ ಇದೆ" ಎಂದು ಉತ್ತರಿಸಿದ್ದರು. ಆಗ ವಾಹಿನಿಯ ಆಂಕರ್ ಮತ್ತು ಸಂಬಿತ್ ಮಧ್ಯೆ ಬಿಸಿಬಿಸಿ ಮಾತುಕತೆ ನಡೆಯಿತು:

ಆಂಕರ್: ಸಂಬಿತ್ ಒಂದೋ ಇಲ್ಲಿಂದ ಹೊರಟು ಹೋಗಬೇಕು ಇಲ್ಲಾ ಕ್ಷಮೆ ಯಾಚಿಸಬೇಕು.

ಸಂಬಿತ್: ನಾನ್ಯಾಕೆ ಹೋಗಬೇಕು? ನಾನು ಎನ್‌ಡಿಟಿವಿಯ ಅಜೆಂಡಾ ಬಯಲಿಗೆಳೆಯುವೆ. ನಿಮ್ಮನ್ನು ಮತ್ತು ನಿಮ್ಮ ವಾಹಿನಿಯ ಅಜೆಂಡಾವನ್ನು ಬಯಲಿಗೆಳೆಯಬೇಕು.

ಆಂಕರ್: ಇಂಥಾ ಭಾಷೆ ಮತ್ತು ಇಂಥಾ ಆರೋಪ ಸ್ವೀಕಾರಾರ್ಹವಲ್ಲ.

ಸಂಬಿತ್: ಈ ಚರ್ಚೆ ಮುಗಿಯುವತನಕವೂ ಅದನ್ನು ಬಯಲಿಗೆಳೆಯುವೆ.

ಆಂಕರ್: ನೀವಿದ್ದರೆ ನಾನು ಈ ಚರ್ಚೆಯನ್ನು ಮುಂದುವರಿಸುವುದಿಲ್ಲ.

ಇದಾದ ನಾಲ್ಕು ದಿನಗಳಲ್ಲಿ ಅಂದರೆ ಜೂನ್ 5ರಂದು ಎನ್‌ಡಿಟಿವಿ ವಾಹಿನಿಯ ಸಂಸ್ಥಾಪಕರಾದ ಪ್ರಣೊಯ್ ರಾಯ್ ಮತ್ತು ರಾಧಿಕಾ ರಾಯ್ ಮನೆ ಹಾಗೂ ಸಂಬಂಧಪಟ್ಟ ಕೆಲವೊಂದು ಕಟ್ಟಡಗಳ ಮೇಲೆ ಹಠಾತ್ತಾಗಿ ಸಿಬಿಐ ದಾಳಿ ನಡೆದಿದೆ. ಇದು ಖಂಡಿತಾ ಕಾಕತಾಳೀಯವಲ್ಲ ಎಂದು ನಂಬಲು ಬಲವತ್ತರ ಕಾರಣಗಳಿವೆ. ಮೊದಲು ದಾಳಿಯ ವಿವರಗಳನ್ನೊಂದಿಷ್ಟು ನೋಡೋಣ.

ಸಿಬಿಐನ ಜೂನ್ 2ರ ಎಫ್‌ಐಆರ್‌ನಲ್ಲಿ ರಾಯ್ ದಂಪತಿ ಐಸಿಐಸಿಐ ಬ್ಯಾಂಕಿನ ಕೆಲವು ಅಜ್ಞಾತ ಅಧಿಕಾರಿಗಳೊಂದಿಗೆ ಒಳಸಂಚು ನಡೆಸಿ ಕಾನೂನುಬಾಹಿರವಾಗಿ ರೂ. 48 ಕೋಟಿ ಸಾಲ ಬಾಕಿ ದುಡ್ಡನ್ನು ಜೇಬಿಗಿಳಿಸಿದ್ದಾರೆ; ರಿಸರ್ವ್ ಬ್ಯಾಂಕಿನ ನಿಯಮಾವಳಿಗಳನ್ನು ಉಲ್ಲಂಘಿಸಲಾಗಿದೆ; ಎನ್‌ಡಿಟಿವಿಯ ಪ್ರವರ್ತಕರು ಷೇರುಗಳನ್ನು ಅಡವಿಟ್ಟ ವಿಚಾರವನ್ನು ಸೆಬಿ, ಷೇರು ಮಾರುಕಟ್ಟೆಗಳು ಮತ್ತು ಮಾಹಿತಿ ಹಾಗೂ ಪ್ರಸಾರ ಸಚಿವಾಲಯಕ್ಕೆ ತಿಳಿಸದೆ ಮುಚ್ಚಿಟ್ಟಿದ್ದರು; ಎನ್‌ಡಿಟಿವಿ ಮಾಲಿಕತ್ವವನ್ನು ಬೇರೊಂದು ಕಂಪೆನಿಗೆ ವರ್ಗಾಯಿಸುವ ಉದ್ದೇಶ ಹೊಂದಿದ್ದರು ಎಂದು ಮುಂತಾಗಿ ಆರೋಪಿಸಲಾಗಿದೆ. ಎಫ್‌ಐಆರ್ ದಾಖಲಿಸುವ ಮುನ್ನ ಸಾಕಷ್ಟು ಶ್ರದ್ಧೆ ವಹಿಸಲಾಗಿದೆ ಎಂದು ಸಿಬಿಐ ವಾದಿಸುತ್ತಿದೆ. ತಾನು ಪತ್ರಿಕಾ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಗೌರವಿಸುತ್ತೇನೆ ಎಂದೂ ಹೇಳಿಕೊಂಡಿದೆ. ಆದರೆ ವಾಸ್ತವ ಏನೆಂದರೆ ಸಿಬಿಐನ ಎಫ್‌ಐಆರ್ ಸಂಜಯ್ ದತ್ ಎಂಬಾತ ನೀಡಿದ್ದ ಖಾಸಗಿ ದೂರಿನ ಪಡಿಯಚ್ಚಾಗಿದೆ! ಅಂದಹಾಗೆ ಈ ಸಂಜಯ್ ಕ್ವಾಂಟಮ್ ಸೆಕ್ಯೂರಿಟೀಸ್ ಲಿ (Quantum Securities Limited) ಎಂಬ ಕಂಪೆನಿಯ ನಿರ್ದೇಶಕರಲ್ಲೊಬ್ಬ. ಈ ಕಂಪೆನಿ ಎನ್‌ಡಿಟಿವಿ ಮತ್ತು ಐಸಿಐಸಿಐ ಬ್ಯಾಂಕುಗಳಲ್ಲಿ ಅಲ್ಪಸಂಖ್ಯೆಯ ಷೇರುಗಳನ್ನು ಹೊಂದಿದೆ.

ಸಾಲದ ವಿವರಗಳು

ಐಸಿಐಸಿಐ ಬ್ಯಾಂಕು ತನ್ನ ಸಾಲ ಪೂರ್ತಿಯಾಗಿ ತೀರಿಕೆಯಾಗಿದೆ ಎಂದು ಸ್ಪಷ್ಟಪಡಿಸಿದೆ. ಎನ್‌ಡಿಟಿವಿ ಕೂಡಾ ಸಿಬಿಐನ ಆರೋಪಗಳನ್ನು ನಿರಾಕರಿಸಿದೆ. ಬ್ಯಾಂಕಿನಿಂದ ಪಡೆದ ಸಾಲವನ್ನು ಏಳು ವರ್ಷಗಳ ಹಿಂದೆಯೇ ತೀರಿಸಲಾಗಿದೆ; ಇದೇ ಆರೋಪಗಳನ್ನು ಈ ಹಿಂದೆಯೂ ಮಾಡಲಾಗಿತ್ತಾದರೂ ನ್ಯಾಯಾಲಯಗಳು ಅವೆಲ್ಲವನ್ನು ತಿರಸ್ಕರಿಸಿವೆ ಎಂದು ತಿಳಿಸಿದೆ. ಎನ್‌ಡಿಟಿವಿ ಪ್ರಕಾರ 2007-08ರಲ್ಲಿ ಅದು ಕಡಿಮೆ ಷೇರುಗಳನ್ನು ಹೊಂದಿದ್ದ ಷೇರುದಾರರಿಂದ ಷೇರುಗಳನ್ನು ಖರೀದಿಸಲು ಬಯಸಿತ್ತು. ಆ ಸಂದರ್ಭದಲ್ಲಿ ಇಂಡಿಯಾ ಬುಲ್ಸ್ ಎಂಬ ಸಂಸ್ಥೆಯಿಂದ ರಾಧಿಕಾ ರಾಯ್ ಪ್ರಣೊಯ್ ರಾಯ್ ಹೋಲ್ಡಿಂಗ್ಸ್ ಪ್ರೈ ಲಿ (ಆರ್‌ಆರ್‌ಪಿಆರ್) ಎಂಬ ಸಂಸ್ಥೆಯ ಹೆಸರಿನಲ್ಲಿ ರೂ. 500 ಕೋಟಿ ಸಾಲ ಪಡೆದುಕೊಳ್ಳಲಾಗಿತ್ತು, ಇಂಡಿಯಾ ಬುಲ್ಸ್ ಕಡೆಯಿಂದ ಸಾಲ ಮರುಪಾವತಿಗೆ ಒತ್ತಾಯ ಹೆಚ್ಚಾದಾಗ ಆರ್‌ಆರ್‌ಪಿಆರ್ ಸಂಸ್ಥೆ ಅಕ್ಟೋಬರ್ 2008ರಲ್ಲಿ ಐಸಿಐಸಿಐ ಬ್ಯಾಂಕಿನಿಂದ ರೂ. 375 ಕೋಟಿ ಸಾಲ ಪಡೆದುಕೊಂಡಿತ್ತು, ನಂತರದ ಬೆಳವಣಿಗೆಯೊಂದರಲ್ಲಿ ವಿಶ್ವಪ್ರಧಾನ್ ಕಮರ್ಷಿಯಲ್ ಪ್ರೈ ಲಿ (ವಿಸಿಪಿಎಲ್) ಹೆಸರಿನ ಸಣ್ಣ ಸಂಸ್ಥೆಯೊಂದು ಆರ್‌ಆರ್‌ಪಿಆರ್‌ಗೆ ರೂ. 403.85 ಕೋಟಿ ಸಾಲ ನೀಡಲು ಮುಂದೆ ಬಂದಿದೆ. ವಿಸಿಪಿಎಲ್‌ಗೆ ಈ ಮೊತ್ತ ಸಿಕ್ಕಿರುವುದು ಶಿನಾನೊ ರೀಟೇಲ್ ಪ್ರೈ ಲಿ ಎಂಬ ಇನ್ನೊಂದು ಕಂಪೆನಿಯಿಂದ. ಶಿನಾನೊ ರೀಟೇಲ್ ಈ ಹಣವನ್ನು ಮುಖೇಶ್ ಅಂಬಾನಿಯ ರಿಲಾಯನ್ಸ್ ವೆಂಚರ್ಸ್‌ನಿಂದ ಪಡೆದಿದೆ ಎನ್ನಲಾಗಿದೆ. ಕುತೂಹಲಕಾರಿಯಾಗಿ ಸಿಬಿಐನ ಎಫ್‌ಐಆರ್‌ನಲ್ಲಿ ಈ ರೀತಿ ಎನ್‌ಡಿಟಿವಿಯ ಮಾಲಿಕತ್ವ ಬದಲಾಯಿಸಲು ತೆರೆಮರೆಯ ಕಸರತ್ತು ನಡೆಸಿದ ರಿಲಾಯನ್ಸ್ ವೆಂಚರ್ಸ್‌ನ ಹೆಸರೂ ಇಲ್ಲ, ಅದರ ಷೆಲ್ ಕಂಪೆನಿಗಳೆನ್ನಲಾದ ವಿಶ್ವಪ್ರಧಾನ್ ಕಮರ್ಷಿಯಲ್, ಶಿನಾನೊ ರೀಟೇಲ್ ಇತ್ಯಾದಿಗಳ ಹೆಸರೂ ಇಲ್ಲ. ಈ ಷೆಲ್ ಕಂಪೆನಿಗಳು ನಡೆಸಿರುವ ಅವ್ಯವಹಾರಗಳ ಬಗ್ಗೆ ತನಿಖೆ ನಡೆಯುತ್ತಿದೆಯೆ ಎಂಬ ಪ್ರಶ್ನೆಗೂ ಸಿಬಿಐ ಉತ್ತರಿಸಿಲ್ಲ, ಹೀಗಾಗಿ ಕೇವಲ ಎನ್‌ಡಿಟಿವಿಯನ್ನೇಕೆ ಗುರಿಯಾಗಿಸಲಾಗಿದೆ ಎಂಬ ನ್ಯಾಯಯುತವಾದ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಕಷ್ಟವಿಲ್ಲ.



ದಾಳಿ ಹುಟ್ಟುಹಾಕಿರುವ ಪ್ರಶ್ನೆಗಳು

ಎನ್‌ಡಿಟಿವಿಯ ಪ್ರವರ್ತಕರು ಮತ್ತು ಐಸಿಐಸಿಐ ಬ್ಯಾಂಕಿನ ಅಜ್ಞಾತ ಅಧಿಕಾರಿಗಳು 'ಬ್ಯಾಂಕ್ ವ್ಯವಸ್ಥೆ ನಿಯಂತ್ರಣ ಕಾಯ್ದೆ 1949'ರ (Banking Regulation Act, 1949) ವಿಧಿ 19(2) ನ್ನು ಮತ್ತು ಆರ್‌ಬಿಐ ಸುತ್ತೋಲೆಯನ್ನು (DBOD No. Dir B90/ 13.07.05/98-99 dated 28.08.1998) ಉಲ್ಲಂಘಿಸಿದ್ದಾರೆಂದು ಸಿಬಿಐ ಹೇಳುತ್ತಿದೆ. ಆದರೆ ಗಮನಾರ್ಹವಾಗಿ, ಬ್ಯಾಂಕ್ ವ್ಯವಸ್ಥೆ ನಿಯಂತ್ರಣ ಕಾಯ್ದೆ ಕೇವಲ ಬ್ಯಾಂಕ್ ನೌಕರರಿಗಷ್ಟೆ ಅನ್ವಯಿಸುತ್ತದೆ. ಎರಡನೆಯ ಮತ್ತು ಭಾರಿ ಮಹತ್ವದ ಅಂಶವೆಂದರೆ ಬ್ಯಾಂಕ್
ನಿಯಂತ್ರಣ ಕಾಯ್ದೆಯಡಿಯ ಇಂತಹ ದೂರು
ಅಧಿಕಾರ ಇರುವುದು ಕೇವಲ ಇದಕ್ಕೋಸ್ಕರವೆ
ಬ್ಯಾಂಕು ಅಧಿಕೃತವಾಗಿ ನೇಮಿಸಿರುವ ಅಧಿಕಾರಿ
ಆದರೆ ಇಲ್ಲಿ ಅಂತಹ ಯಾವುದೇ ದೂರು ದಾಖಲ
ಬದಲು ಸಾಮಾನ್ಯ ಪ್ರಜೆಯಾಗಿರುವ ಸಂಜಯ್
ಎಂಬಾತ ದೂರು ನೀಡಿದ್ದಾರೆ. ಸಿಬಿಐ ಈ ರೀ
ದೂರನ್ನು ಪುರಸ್ಕರಿಸಬಾರದಿತ್ತು, ಆದರೂ ಅದು '
ಹುರುಳಿದೆಯೆ ಇಲ್ಲವೆ ಎಂದು ತನಿಖೆ
ಆರೋಪಿಗಳನ್ನು ಸಂಪರ್ಕಿಸಿ ಅವರ ವಿವರ
ತಿಳಿದುಕೊಳ್ಳುವ ಗೋಜಿಗೆ ಹೋಗದೆ ನೇರವಾಗಿ
ಪ್ರವೃತ್ತವಾಗಿ ದಾಳಿ ನಡೆಸುವುದು ನಿಜಕ್ಕೂ ವಿಚಿ
ಮಾತ್ರವಲ್ಲ ಸಂವಿಧಾನದ ವಿಧಿ 19 (1) (ಎ)
ಖಾತರಿಪಡಿಸಲಾದ ಪತ್ರಿಕಾ ಸ್ವಾತಂತ್ರ್ಯದ ಉಲ್ಲಂಘನೆ
ಎಂದು ಪ್ರತಿಕ್ರಿಯಿಸಿರುವ ಖ್ಯಾತ ನ್ಯಾಯವಾದಿ
ನಾರಿಮನ್, ಎರಡು ಮುಖ್ಯ ಅಂಶಗಳನ್ನು ಎ


1) ತನಿಖಾ ಸಂಸ್ಥೆಯಾದ ಸಿಬಿಐ ಕರ್ತವ್ಯ
ಅದು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸು
ಮುನ್ನ ಸಂಜಯ್ ದತ್ ಈ ದೂರು ನೀಡಲು
ವರ್ಷ ವಿಳಂಬ ಮಾಡಿರುವುದೇಕೆಂದು ತನಿ
ವಿವರಣೆ ನೀಡಬೇಕಾಗಿತ್ತು.

2) ಸಂಜಯ್ ದತ್ ಕೂಡಾ ಸಿಬಿಐಗೆ
ನೀಡುವ ಮುನ್ನ ಎನ್‌ಡಿಟಿವಿಗೆ ಪತ್ರ ಬರೆದು
ವಿವರಣೆ ಕೇಳಬಹುದಿತ್ತು, ವಿವರಣೆ ತೃಪ್ತಿಕರ
ನೇರವಾಗಿ ನ್ಯಾಯಾಲಯದಲ್ಲಿ ದೂರು ದಾಖಲಿಸಬ
ಆದರೆ ಆತ ಇವೆರಡನ್ನೂ ಮಾಡದೆ ಸಿಬಿಐಗೆ
ನೀಡಿರುವುದು ಅನುಮಾನಗಳನ್ನು ಇನ್ನಷ್ಟು ಹೆ

ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗ

ಸಿಬಿಐ ಸಂಸ್ಥೆಯನ್ನು ತನ್ನ ಖಾಸಗಿ ಬೇಟೆನಾಯಿ
ಪರಿವರ್ತಿಸಿರುವ ಮೋದಿ ಸರ್ಕಾರ ಅದರ
ತನಗಾಗದವರನ್ನು ಅಟ್ಟಾಡಿಸಿ ಕಿರುಕುಳ ನೀಡು
ಮಾಡುತ್ತಿದೆ. ಅದೇ ವೇಳೆ ಮೋದಿ ಕೃಪಾ
ಕಾರ್ಪೊರೇಟುಗಳ ಅವ್ಯವಹಾರಗಳು ಯ
ಅಡೆತಡೆಗಳಿಲ್ಲದೆ ಸರಾಗವಾಗಿ ನಡೆಯುತ್ತಿವೆ! ಉದ
ರೂ. 30,000 ಕೋಟಿಗೂ ಮೀರಿದ ಕಲ್ಲಿದ್ದಲು
ಹಗರಣದಲ್ಲಿ ಅದಾನಿ ಗುಂಪಿನ 6, ಅನಿಲ್ ಅಂ
2, ಜಿಂದಾಲ್ ಗುಂಪಿನ 1 ಮತ್ತು ಎಸ್ಸಾರ್ ಗು
ಕಂಪೆನಿಗಳು ಕಂದಾಯ ಸುದ್ದಿಸಂಗ್ರಹ ನಿರ್ದೇಶನಾ
(Directorate of Revenue Intellig
ಪರಿಶೀಲನೆಗೊಳಪಟ್ಟಿವೆ. ಈ ಅಕ್ರಮ ಸಂಪಾದ
ವಿದೇಶಗಳಲ್ಲಿ ಬಚ್ಚಿಡಲಾಗಿದೆ. ಈ ರೀತಿ
ಕಲ್ಲಿದ್ದಲಿನ ಬೆಲೆಗಳನ್ನು ಕೃತಕವಾಗಿ ಏರಿಸಿದಾಗ
ಉತ್ಪಾದನಾ ಸಂಸ್ಥೆಗಳು ವಿದ್ಯುತ್ತಿನ ದರವನ್ನು
ಮೂಲಕ ಹೊರೆಯನ್ನೆಲ್ಲ ಬಡಪಾಯಿ ಗ್ರಾ
ನಮನಿಮಗೆ ದಾಟಿಸುತ್ತವೆ! ಕಂದಾಯ ಸು
ನಿರ್ದೇಶನಾಲಯದ ಗುಪ್ತಚರರು ಕಲೆಹಾಕಿರುವ ಮ
ಪ್ರಕಾರ ಅದಾನಿ ಮತ್ತು ಎಸ್ಸಾರ್ ಗುಂಪಿನ ಕ
ಸಾವಿರಾರು ಕೋಟಿಗಳ ಇನ್ನೆರಡು ಹಗರ
ಭಾಗಿಯಾಗಿವೆ. ಭ್ರಷ್ಟಾಚಾರ ವಿರೋಧಿ ಎಂದು
ಮಾಡಿಕೊಳ್ಳುವ ಮೋದಿ ಸರ್ಕಾರ ವಿದೇಶಗ
ಬ್ಯಾಂಕು ಖಾತೆಗಳಿಗೆ ಜಮೆಯಾಗುವ ಈ ಕಪ
ವ್ಯವಹಾರಗಳ ಕುರಿತು ಯಾಕೆ ಮೌನವಾಗಿದೆ? ಎ
ಪ್ರಕರಣದಲ್ಲಿ ಖಾಸಗಿ ವ್ಯಕ್ತಿಯ ದೂರನ್ನು ಪುರ
ಸಿಬಿಐ ಸರ್ಕಾರದ್ದೇ ಸಂಸ್ಥೆಯಾದ ಡಿಆರ್‌ಐ
ದೂರಿನ ಬಗ್ಗೆ ಕಣ್ಣು, ಕಿವಿ, ಬಾಯಿ ಮುಚ
ಸುಮ್ಮನಿರಲು ಕಾರಣವೇನು? ಲಲಿತ್ ಮೋದಿ
ಮಲ್ಯ ಪ್ರಕರಣ, ವ್ಯಾಪಂ ಹಗರಣ ಮೊದಲಾದ
ಸಿಬಿಐ ಯಾರ ಆದೇಶದ ಮೇರೆಗೆ ಪ್ರಭಾವಿ
ರಕ್ಷಿಸುವ ಕೆಲಸ ಮಾಡುತ್ತಿದೆ? ವಿದೇಶಗ
ಕಪ್ಪುಹಣವನ್ನು ತಂದು ಪ್ರತಿಯೊಬ್ಬನ ಜೇಬಿಗೆ
ಲಕ್ಷ ಇಳಿಸುವ ಭರವಸೆ ಕೊಟ್ಟ ಕತೆ ನೆನಪಿದ
ಆದರೆ ಈ ಹಗರಣಗಳು ಬೇರೊಂದು
ಹೇಳುತ್ತಿವೆ. ವಿದೇಶಗಳಲ್ಲಿರುವ ಕಪ್ಪುಹಣವನ್ನು
ತರುವುದು ಒತ್ತಟ್ಟಿಗಿರಲಿ, ಪ್ರತಿಯೊಬ್ಬನ ಜೇಬ
ಹಾಕಿ ಕೋಟಿಗಟ್ಟಲೆ ಕಪ್ಪುಹಣವನ್ನು ವಿದ
ರವಾನಿಸಲಾಗುತ್ತಿರುವ ಕತೆಯನ್ನು!

ಎನ್‌ಡಿಟಿವಿ ಪ್ರಕರಣ ಭಾರತದಲ್ಲಿ ಪತ್ರಿಕಾ
ಹರಣ ನಡೆಯುತ್ತಿರುವುದಕ್ಕೆ ಇತ್ತೀಚಿನ ನಿದರ್ಶ
ಇದಕ್ಕೆ ಪೂರಕವಾಗಿ ಬಂದಿದೆ "ಗಡಿಗಳಿಲ್ಲದ ವರ
ಸಿದ್ಧಪಡಿಸಿರುವ 'ವಿಶ್ವ ಪತ್ರಿಕಾ ಸ್ವಾತಂತ್ರ್ಯ ಸೂಚ
ಆ ಪಟ್ಟಿಯಲ್ಲಿ ಈ ವರ್ಷ ಭಾರತದ ಸ್ಥಾನ
136ಕ್ಕೆ ಇಳಿದಿದ್ದು ಇದಕ್ಕೆ ಹಿಂದೂ ರಾಷ್ಟ್ರೀಯ
ಕಾರ್ಯಾಚರಣೆಗಳೆ ಮುಖ್ಯ ಕಾರಣವೆಂದು ಅವರು
ವುದು ವಾಸ್ತವ ಸ್ಥಿತಿಯನ್ನು ಬಿಂಬಿಸುತ್ತದೆ.



ರಾಮಮಂದಿರ ಏಕೆ ಬೇಡ?

■ ಪ್ರೊ। ಕೆ. ಎಸ್. ಭಗವಾನ್

ರಾಮ ಮಂದಿರವನ್ನು ಕಟ್ಟ ಬಯಸುವವರು, ...ಸ್ಥಾನಕ್ಕೆ ಹೋಗುವವರೆಲ್ಲ ತಿಳಿದುಕೊಳ್ಳಬೇಕಾದ ...ಯ ಇದು: ನಮ್ಮ ಭರತಖಂಡದ ಮೇಲೆ ಪ್ರಾಚೀನ ...ದಿಂದ ಆಧುನಿಕ ಯುಗದವರೆಗೆ ಇಪ್ಪತ್ತಾರು ಸಾರಿ ...ಮಣಗಳಾಗಿವೆ. ಈ ಮಹಾನ್ ದೇಶ ಅಷ್ಟೊಂದು ...ಗುಲಾಮಗಿರಿಗೆ ತುತ್ತಾಗಿದೆ. ವಿದೇಶಿ ದಾಳಿಕೋರರನ್ನು ...ಮ, ಕೃಷ್ಣ ಮುಂತಾದ ನೂರಾರು ದೇವರುಗಳು ಏಕೆ ...ಟ್ಟಲಿಲ್ಲ? ಹಿಂದಕ್ಕೆ ಓಡಿಸಲಿಲ್ಲ? ಇಂಥ ನಿಷ್ಪ್ರಯೋಜಕ ...ವರುಗಳು ಏತಕ್ಕಾಗಿ ಬೇಕು? ಇವರನ್ನೆಲ್ಲ ಕಸದಂತೆ ...ಸಿ ಹೊರಹಾಕಬೇಕು. ದೇಶ ಬಾಂಧವರೇ, ನೀವೆಲ್ಲ ...ಷ್ಠರಾಗಿ ಬೆಳೆಯಿರಿ! ಸ್ವಾವಲಂಬಿಗಳಾಗಿ! ನೀವು ...ವರನ್ನು ಅವಲಂಬಿಸಿದರೆ ಎಲ್ಲ ರೀತಿಯಲ್ಲೂ ನೀವು ...ರ್ಬಲರಾಗುತ್ತೀರಿ; ದಾಸರಾಗುತ್ತೀರಿ. ದಾಸ್ಯವನ್ನು ಉಳಿಸಿ ...ಸುವುದಕ್ಕಾಗಿಯೇ ದೇವಸ್ಥಾನ ಚರ್ಚು ಮಸೀದಿ ಸಂಸ್ಕೃತಿ ... ಆದ್ದರಿಂದ ಗುಡಿಗುಡಾರಗಳನ್ನು ತ್ಯಜಿಸಿ.

ದೀರ್ಘ ಕಾಲದಿಂದ ನನ್ನನ್ನೇ ನಾನು ಪ್ರಶ್ನೆ

ಜ್ಞಾನಿ ಬ್ರಾಹ್ಮಣರು ಬೇಕು, ಜಾತಿ ಬ್ರಾಹ್ಮಣರಲ್ಲ

ಮಾಡಿಕೊಳ್ಳುತ್ತಾ ಬಂದಿದ್ದೇನೆ. ಜನಸಾಮಾನ್ಯರು ಯಾರೂ ಬ್ರಾಹ್ಮಣರನ್ನು ದ್ವೇಷಿಸುವುದಿಲ್ಲ, ನಾನು ಬ್ರಾಹ್ಮಣ ವಿರೋಧಿ ಖಂಡಿತ ಅಲ್ಲ. ಶ್ರೀರಾಮಕೃಷ್ಣ ಪರಮಹಂಸರು, ಬಸವಣ್ಣನವರು, ರಮಣಮಹರ್ಷಿಗಳು ನನಗೆ ಪೂಜಾರ್ಹ ಪವಿತ್ರಾತ್ಮರು. ಬ್ರಾಹ್ಮಣರಲ್ಲಿ ನನಗೆ ಅನೇಕ ಒಳ್ಳೆಯ ಗೆಳೆಯರು ಇದ್ದಾರೆ. ನಮಗೆ ಜ್ಞಾನಿ ಬ್ರಾಹ್ಮಣರು ಬೇಕು. ಜಾತಿ ಬ್ರಾಹ್ಮಣರು ಬೇಡ; ಇವರು ಅಪಾಯಕಾರಿಗಳು. ಆದರೆ ಶೂದ್ರರನ್ನು ಬ್ರಾಹ್ಮಣರು ಏಕೆ ಅಷ್ಟೊಂದು ಕ್ರೂರವಾಗಿ ದ್ವೇಷಿಸುತ್ತಾರೆ? ಏನು ಕಾರಣ? ಅವರು ಬರೆದಿರುವ ಧರ್ಮಗ್ರಂಥಗಳಲ್ಲೂ (ಇವು 131 ಇವೆ) ಶೂದ್ರರನ್ನು ಅತ್ಯಂತ ತಿರಸ್ಕಾರದಿಂದ ಹಾಗೂ ಕೊಲ್ಲುವ ಮಹಾ ಕ್ರೌರ್ಯದಿಂದ ಕಂಡಿರುವುದು ದಾಖಲಾಗಿದೆ. ಬ್ರಾಹ್ಮಣರಿಗೆ ಎಲ್ಲಾ ಕೆಲಸ ಮಾಡಿಕೊಡುವ, ಅವರು ಉಣ್ಣುವ ದವಸ ಧಾನ್ಯಗಳನ್ನು, ಆಹಾರ ಪದಾರ್ಥಗಳನ್ನು ಹಣ್ಣು ಹಂಪಲುಗಳನ್ನು ಬೆಳೆದು ಕೊಡುವ, ಅವರು ಸುಖವಾಗಿ ವಾಸಮಾಡಲು ಮನೆಗಳನ್ನು ಕಟ್ಟಿ ಕೊಡುವ ದುಡಿಮೆಗಾರರ ಮೇಲೆ ಬ್ರಾಹ್ಮಣರಿಗೆ ಏಕೆ ಇಷ್ಟೊಂದು ದ್ವೇಷ? ಅವರ ಮತಗ್ರಂಥಗಳನ್ನು ಓದಿದರೆ ಅವರ ಬ್ರಾಹ್ಮಣ ಮತ, ವೈದಿಕ ಮತ, ಹಿಂದೂ ಮತ (ಯಾವ ಹೆಸರಿನಲ್ಲಿ ಕರೆದರೂ ಅವೆಲ್ಲ ಒಂದೇ) ಮಲಿನವಾಗುವುದೆ? ಇದರಷ್ಟು ಕ್ರೂರ ಮತ ಪ್ರಪಂಚದಲ್ಲಿ ಇನ್ನೊಂದಿಲ್ಲ ಎನ್ನಬೇಕು. ಜಗತ್ತೇ ಬದಲಾವಣೆಗೆ ಒಳಗಾಗಿದ್ದರೂ ಅವರ ದೃಷ್ಟಿ ಮಾತ್ರ ಬದಲಾಗಿಲ್ಲ ಏಕೆ? ಮೈಬಗ್ಗಿಸಿ ಕೆಲಸ ಮಾಡದ ಅವರಿಗೆ ಶ್ರಮಜೀವಿಗಳ ಮೇಲೆ ಏಕೆ ಇಷ್ಟೊಂದು ದ್ವೇಷ? ಹಿಂದೂ ಮತದಲ್ಲಿ ಎರಡು ಭಾಗಗಳು ಇವೆ: ಒಂದು, ಲೌಕಿಕ; ಇನ್ನೊಂದು, ಪಾರಮಾರ್ಥಿಕ. ಲೌಕಿಕದಲ್ಲಿ ಜಾತಿವ್ಯವಸ್ಥೆ ಅಸ್ಪೃಶ್ಯತೆ, ಅಸಮಾನತೆ ಇದೆ. ಇದು ಕೊಳಕು.



ಪಾರಮಾರ್ಥಿಕದಲ್ಲಿ ಆಧ್ಯಾತ್ಮ, ಮಾನವ ಪ್ರೇಮ, ಸಮಾನತೆ ಇವೆ. ಇದು ಬೆಳಕು. ಕೊಳಕನ್ನು ತ್ಯಜಿಸಿ ಬೆಳಕನ್ನು ಉಳಿಸಿಕೊಳ್ಳಬೇಕಾಗಿದೆ.

ಇತಿಹಾಸದಲ್ಲಿ ಕಾಣುವ ಅತ್ಯಂತ ದೊಡ್ಡ ವ್ಯಕ್ತಿಗಳಲ್ಲಿ ಮಹಾತ್ಮ ಗಾಂಧೀಜಿ ಒಬ್ಬರು. ಭಾರತವನ್ನು ಇಂಗ್ಲಿಷರಿಂದ ಬಿಡುಗಡೆಗೊಳಿಸಿದರು. ಆದರೆ ಅವರು ಶೂದ್ರರನ್ನು ಭೇದಭಾವ ಮಾಡುವ ಬ್ರಾಹ್ಮಣ ಮತದಿಂದ ಬಿಡುಗಡೆಗೊಳಿಸಲಿಲ್ಲ. ಬದಲಿಗೆ ಗಾಂಧೀಜಿ ಅವರು ರಾಮ, ಭಗವದ್ಗೀತೆ, ಚಾತುರ್ವರ್ಣದ ಉರುಳಿನಲ್ಲಿ ದುಡಿಯುವ ಜನರನ್ನು ಸಿಲುಕಿಸಿಬಿಟ್ಟರು. ಬೇರೆ ಬೇರೆ ಮತಗಳ ಅನುಯಾಯಿಗಳು ನಮ್ಮ ಧರ್ಮಗ್ರಂಥಗಳನ್ನು ಓದಿ, ನಮ್ಮ ಮತಕ್ಕೆ ಬನ್ನಿ ಎಂದು ಆಹ್ವಾನಿಸಿರುವುದನ್ನು ನೋಡುತ್ತೇವೆ. ಆದರೆ ಬ್ರಾಹ್ಮಣ ಮತದ ಸ್ಮೃತಿಗಳು ಶೂದ್ರರು ವೇದಗಳನ್ನು "ಓದಿದರೆ ಅವರ ನಾಲಿಗೆ ಕತ್ತರಿಸಿಹಾಕಬೇಕು, ಕೇಳಿದರೆ ಅವರ ಕಿವಿಗೆ ಕುದಿಯುವ ಅರಗು ಮತ್ತು ಸೀಸವನ್ನು ತುಂಬಬೇಕು. ನೆನಪಿನಲ್ಲಿ ಇಟ್ಟುಕೊಂಡಿದ್ದರೆ ಆ ದೇಹವನ್ನು ಕತ್ತರಿಸಿಹಾಕಬೇಕು" (ಗೌತಮ ಧರ್ಮಸೂತ್ರ 2. 3. 4.) ಎಂದು ಕ್ರೂರ ಶಾಸನ ಮಾಡಿದ್ದಾರೆ. ಏಕೆ ಹೀಗೆ ಶೂದ್ರರೆಲ್ಲ ಸ್ವದೇಶೀಯರೇ ಅಲ್ಲವೆ? ಬ್ರಾಹ್ಮಣರಿಗೆ ಶೂದ್ರರು ಮಾಡಿರುವ ಅನ್ಯಾಯವಾದರೂ ಏನು? ನಾವು - ವಿಚಾರವಾದಿಗಳು, ಸಮಾನತಾವಾದಿಗಳು, ನಿರ್ಜಾತಿವಾದಿಗಳು, ಮಾನವತಾವಾದಿಗಳು, ವಿಶ್ವಮಾನವರು - ಯಾರೂ ಬ್ರಾಹ್ಮಣ ವಿರೋಧಿಗಳಲ್ಲ, ನಾವು ವಿರೋಧಿಸುವುದು ಭೇದಭಾವವನ್ನು, ಮೇಲುಕೀಳನ್ನು; ಅಸಮಾನತೆ ಮತ್ತು ಅಸ್ಪೃಶ್ಯತೆಯನ್ನು, ವೇದಗಳು ಸೃಷ್ಟಿಸಿರುವ ಜಾತಿ ವ್ಯವಸ್ಥೆಯನ್ನು ನಾಶಪಡಿಸಬೇಕೆಂಬುದು ನಮ್ಮ ಮಾನವೀಯ ಹೋರಾಟವಾಗಿದೆ. ಬ್ರಾಹ್ಮಣ ಮತದ ಗುಲಾಮಗಿರಿಯಿಂದ ಜನಸಾಮಾನ್ಯರನ್ನು ಸ್ವತಂತ್ರಗೊಳಿಸುವ ಕೆಲಸವನ್ನು ಭಗವಾನ್ ಬುದ್ಧ ಗುರುಗಳು ಪ್ರಾರಂಭಿಸಿದರು. ಆಮೇಲೆ ಬಸವಣ್ಣ ಶ್ರಮಿಸಿದರು. ಶತಮಾನಗಳ ನಂತರ ಮಹಾತ್ಮ ಫುಲೆ, ನಾರಾಯಣ ಗುರುದೇವ, ತಂದೆ ಪೆರಿಯಾರ್, ವಿಶ್ವರತ್ನ ಡಾ. ಅಂಬೇಡ್ಕರ್, ವಿಶ್ವಮಾನವ ಕುವೆಂಪು ಮುಂತಾದವರು ಮಹಾನ್ ಹೋರಾಟ ಮಾಡಿದ್ದಾರೆ.

ಗಾಂಧೀವಾದ ಕಾಗೆ ಬಂಗಾರ. ಅಂಬೇಡ್ಕರ್‌ವಾದ ಕೋಳಿ ಭಂಡಾರ.

ಕೋಮುವಾದ ಅಳಿಸಿ, ದೇಶ ಉಳಿಸಿ.

(ಮುಗಿಯಿತು) ■

ಸಂಪಾದಕೀಯ

ಕೃಪೆ: *Economic and Political Weekly*
June 10, 2017. Vol. 52. No. 23

■ ಅನು: ಶಿವಸುಂದರ್

ಭೂಮಿತಾಯಿಗೆ ಮರಣದಂಡನೆ

ಭೂ ತಾಯಿಗೆ ಗಲ್ಲುಶಿಕ್ಷೆ ವಿಧಿಸುತ್ತಿರುವವರು ಡೊನಾಲ್ಡ್ ಟ್ರಂಪ್. ಆತನಿಗೆ ಕುಮ್ಮಕ್ಕು ಕೊಡುತ್ತಿರುವವರು ತೈಲ ಕಂಪನಿಯ ದೊರೆಗಳು ಮತ್ತು ಕುತಂತ್ರೀ ಪರಿಸರ ವಿರೋಧಿಗಳು

ಹವಾಮಾನ ಬದಲಾವಣೆ ಎಂಬ ವಿದ್ಯಮಾನವೇ ...ದು ದೊಡ್ಡ ಮೋಸವೆಂದು ಡೊನಾಲ್ಡ್ ಟ್ರಂಪ್ ಅವರು ...ಳುತ್ತಲೇ ಬಂದಿದ್ದಾರೆ. ಉದಾಹರಣೆಗೆ 2014ರ ಜನವರಿ ...ರಂದು ಜಗತ್ತಿನ ಪ್ರಖ್ಯಾತ ಹವಾಮಾನ ವಿಜ್ಞಾನಿಗಳ ...ಕುರಿತು ಮಾಡಿದ ಟ್ವೀಟ್ ಒಂದರಲ್ಲಿ 'ಈ ಜಾಗತಿಕ ...ತಾಪಮಾನ ಏರಿಕೆ ಎಂಬ ದುಬಾರಿ ಹುಚ್ಚಾಟಗಳು ಕೂಡಲೇ ...ನಿಲ್ಲಬೇಕು' ಎಂದು ಬೆದರಿಸಿದ್ದರು. ಈಗ ಅವರು ಜಗತ್ತಿನ ... 15ರಷ್ಟು ಹಸಿರುಮನೆ ಅನಿಲ ತ್ಯಾಜ್ಯಗಳನ್ನು ...ಹೊರಹಾಕುತ್ತಾ ಜಗತ್ತಿನ ಹವಾಮಾನ ಬದಲಾವಣೆಗೆ ...ಮುಖ್ಯ ಕಾರಣವಾಗಿರುವ ಅಮೆರಿಕ ದೇಶದ ...ಅಧ್ಯಕ್ಷರಾಗಿದ್ದಾರೆ.

...ಹೀಗಾಗಿ ಅವರು 2017ರ ಜೂನ್ 1 ರಂದು ...ಅಮೆರಿಕವು 2015ರ ಪ್ಯಾರಿಸ್ ಒಪ್ಪಂದದಿಂದ ಹೊರ ...ಬರುವುದಾಗಿ ಮಾಡಿದ ಘೋಷಣೆ ಅನಿರೀಕ್ಷಿತವಾಗಿರಲಿಲ್ಲ ...ಆದರೆ ಆತಂಕಕಾರಿಯಂತೂ ಆಗಿದೆ.

...ಟ್ರಂಪ್ ಆಡಳಿತದ ಹವಾಮಾನ ನೀತಿಯ ಸ್ವರೂಪ ...ಹೇಗಿರಬಹುದೆಂಬುದು ಇದಕ್ಕೂ ಹಿಂದೆಯೇ ಸ್ಪಷ್ಟವಾಗಿತ್ತು ...ನೀತಿಯ ಕರಡನ್ನು ರೂಪಿಸಿದವರು ಥಾಮಸ್ ಪೈಲ್. ...ಕೋಚ್ ಸಹೋದರರ (ಅಮೆರಿಕದ ಬೃಹತ್ ತೈಲ್ ...ಇಂಧನ-ಉತ್ಪಾದಕರ ಬಳಗ) ಹಣಕಾಸು ಬೆಂಬಲ ...ಪಡೆದಿರುವ ಮತ್ತು ಟ್ರಂಪ್ ಆಡಳಿತದ ಇಂಧನ ನೀತಿ ...ರೂಪುಗೊಳ್ಳುವುದರಲ್ಲಿ ಪ್ರಧಾನ ಪಾತ್ರ ವಹಿಸಿರುವ ...ಅಮೆರಿಕನ್ ಎನರ್ಜಿ ಅಲಯನ್ಸ್(ಅಮೆರಿಕ ಇಂಧನ ...ಒಕ್ಕೂಟ)ದ ಮುಖ್ಯಸ್ಥ ಈತ ರೂಪಿಸಿದ ಕರಡು 2016ರ ...ಡಿಸೆಂಬರ್‌ನಲ್ಲೇ ಸೋರಿಕೆಯಾಗಿತ್ತು. ಸರಳವಾಗಿ ...ಹೇಳಬೇಕೆಂದರೆ ಈ ಕರಡು ಸೂಚಿಸಿದ್ದು ಟ್ರಂಪ್ ...ಆಡಳಿತದ ಹವಾಮಾನ ನೀತಿಯ ತಿರುಳನ್ನು ಹೀಗೆ ...ಬಿಂಬಿಸುತ್ತು: ಅ) ಅಮೆರಿಕವನ್ನು ಪ್ಯಾರಿಸ್ ಒಪ್ಪಂದದಿಂದ ಹೊರತನ್ನಿ ಆ) ಒಬಾಮಾ ಸರ್ಕಾರದ ಕ್ಲೀನ್ ಪವರ್ ಪ್ಲಾನ್- ಸಿಪಿಪಿ(ಶುದ್ಧ ಶಕ್ತಿಮೂಲ ಯೋಜನೆ)ಯನ್ನು ಮೂಲೆಗುಂಪು ಮಾಡಿ ಮತ್ತು ಇ) ಮತ್ತು ಎಕ್ಸೆಲ್ ಪೈಪ್ಲೈನ್‌ನಂಥ ಈಗಾಗಲೇ ಯೋಜಿತಗೊಂಡಿರುವ ಎಲ್ಲಾ ಯೋಜನೆಗಳನ್ನು ತ್ವರಿತಗತಿಯಲ್ಲಿ ಜಾರಿಗೆ ತನ್ನಿ.

ಟ್ರಂಪ್ ಆಡಳಿತ ಮತ್ತು ಅದರ ಸಲಹೆಗಾರರು ಅಮೆರಿಕದ ಆಳುವವರ್ಗದ ಒಂದು ವಿಭಾಗವಾದ ತೈಲ ಉದ್ಯಮಿಗಳ ಹಿತಾಸಕ್ತಿಯನ್ನು ಪ್ರತಿನಿಧಿಸುತ್ತಾರೆಂಬುದು ನಿಜವೇ ಆದರೂ ಪ್ಯಾರಿಸ್ ಒಪ್ಪಂದದಿಂದ ಹೊರಬರುವ ಈ ನಿರ್ಧಾರಕ್ಕೆ ಅಮೆರಿಕದ ಇಡೀ ಆಳುವವರ್ಗದ ಸಮ್ಮತಿಯೇನೂ ಇರಲಿಲ್ಲ, ಹಾಗೆಯೇ ಟ್ರಂಪ್ ಸರ್ಕಾರದ ಈ ದುಡುಕಿನ ನಿರ್ಧಾರದ ಬಗ್ಗೆ ಜಗತ್ತಿನ ತ್ರಿವಳಿ ಶಕ್ತಿ ಕೂಟದ ಇನ್ನಿಬ್ಬರು ಸದಸ್ಯರಾದ ಪಶ್ಚಿಮ ಯೂರೋಪ್ ಮತ್ತು ಜಪಾನ್‌ಗಳಿಗೂ ಒಪ್ಪಿಗೆಯಿಲ್ಲ, ಜಗತ್ತಿನ ಈ ತ್ರಿವಳಿ ಶಕ್ತಿಕೂಟಕ್ಕೆ ಅಮೆರಿಕ ಕೊಡುತ್ತಿದ್ದ ನೇತೃತ್ವವನ್ನು ಟ್ರಂಪ್ ಅವರ ಅಮೆರಿಕವೇ ಮೊದಲೆಂಬ ರಾಷ್ಟ್ರೀಯವಾದ ಸಹಜವಾಗಿಯೇ ಪ್ರಶ್ನೆಗೊಡ್ಡಿದೆ.

ತೈಲ ಇಂಧನ ಉದ್ಯಮದ ದೈತ್ಯನಾದ ಕೋಚ್ ಕೈಗಾರಿಕಾ ಸಮೂಹದ ಕೋಚ್ ಸಹೋದರರು ಮತ್ತು ಇಂಧನ ಉದ್ಯಮದಲ್ಲಿ ಅಪಾರ ಹೂಡಿಕೆ ಮಾಡಿರುವ ಹಾಗೂ ಟ್ರಂಪ್ ಅವರ ಅಧ್ಯಕ್ಷೀಯ ಚುನಾವಣೆಗೆ ದೇಣಿಗೆ ನೀಡಿದ್ದ ಇನ್ನಿತರ ಕೋಟ್ಯಾಧಿಪತಿಗಳನ್ನು ಬಿಟ್ಟರೆ ಅಮೆರಿಕದ ಹಲವಾರು ಬೃಹತ್ ಉದ್ಯಮಿಗಳು ಹವಾಮಾನ ಬದಲಾವಣೆಯ ಅಪಾಯಗಳ ಬಗ್ಗೆ ಮತ್ತು ಅದರಿಂದ ಭವಿಷ್ಯದ ಪೀಳಿಗೆಯ ಮೇಲಾಗುವ ದುಷ್ಪರಿಣಾಮಗಳ ಬಗ್ಗೆ ಆತಂಕವನ್ನು ವ್ಯಕ್ತಪಡಿಸುತ್ತಿದ್ದಾರೆ. ಉದಾಹರಣೆಗೆ ಜಗತ್ತಿನ ಬೃಹತ್ ಬ್ಯಾಂಕಿಂಗ್ ಉದ್ಯಮಿಯಾದ ಅಮೆರಿಕದ ಗೋಲ್ಡ್‌ಮನ್ ಸ್ಯಾಚ್‌ನ ಮುಖ್ಯಸ್ಥ ಲಾಯ್ಡ್ ಬ್ಲಾಂಕ್ಫೆನ್ ಅವರು ಟ್ರಂಪ್ ಅವರ ಈ ನಿರ್ಧಾರದ ಬಗ್ಗೆ ಅಸಮಾಧಾನಗೊಂಡಿದ್ದಾರೆ. ಅವರು ಈ ನಿರ್ಧಾರವನ್ನು ಪರಿಸರಕ್ಕೆ ಭಾರಿ ಹೊಡೆತ ಮತ್ತು ಜಗತ್ತಿನಲ್ಲಿ ಅಮೆರಿಕ ಪಡೆದುಕೊಂಡಿದ್ದ ನಾಯಕತ್ವ ಸ್ಥಾನಕ್ಕೆ ಭಾರಿ ಹಿನ್ನಡೆ ಎಂದು ಟೀಕಿಸಿದ್ದಾರೆ. ಮತ್ತೊಂದು ಕಡೆ ಈ ನಿರ್ಧಾರವನ್ನು ಎಕ್ಸಾನ್ ಮೊಬಿಲ್‌ನಂಥ ದೈತ್ಯ ಬಹುರಾಷ್ಟ್ರೀಯ ಕಂಪನಿಗಳು ಸಹಜವಾಗಿಯೇ ಬೆಂಬಲಿಸಿವೆ. ಆದರೆ ಆ ಕಂಪನಿಯ ಮಾಜಿ ಮುಖ್ಯಾಧಿಕಾರಿ ರೆಕ್ಸ್ ಟಿಲ್ಲರ್ಸನ್ ಸಹ ಇದರಿಂದ ಅಂತರ ಕಾಯ್ದುಕೊಂಡಿದ್ದಾರೆ. ಅಮೆರಿಕದ ಪರಿಸರ ರಕ್ಷಣಾ ಏಜೆನ್ಸಿಯ ಮುಖ್ಯಸ್ಥ ಸ್ಕಾಟ್ ಪ್ರುಯಿಟ್ ಮತ್ತು ಟ್ರಂಪ್ ಸರ್ಕಾರದಲ್ಲಿ ಹವಾಮಾನ ಬದಲಾವಣೆಯ ವಿದ್ಯಮಾನವನ್ನೇ ತಿರಸ್ಕರಿಸುವವರಲ್ಲಿ ಪ್ರಮುಖರಾದ ಹಾಗೂ ಆಲ್ಟ್-ರೈಟ್ ಬ್ರೆಯಿಟ್ಬಾರ್ಟ್ ನ್ಯೂಸ್‌ನ ಮುಖ್ಯಸ್ಥರೂ ಆದ ಸ್ಟೀಫನ್ ಬ್ಯಾನನಂಥವರ ಹೇಳಿಕೆಗಳನ್ನು ಎಕ್ಸಾನ್ ಮೊಬಿಲ್‌ನ ಮಾಜಿ ಮುಖ್ಯಸ್ಥ ಸಮರ್ಥಿಸದೇ ಮೌನ ಕಾದುಕೊಂಡಿದ್ದಾರೆ.

ಒಟ್ಟಾರೆಯಾಗಿ ಹೇಳುವುದಾದರೆ ಬಂಡವಾಳವು ಇನ್ನಾದರೂ ಪ್ರಾಕೃತಿಕ ಸಮತೋಲನವನ್ನು ಗಮನದಲ್ಲಿಟ್ಟುಕೊಂಡು ಆಧುನೀಕರಣಗೊಳ್ಳಬೇಕಿದೆ ಎಂಬುದನ್ನು ಈ ತ್ರಿವಳಿ ಶಕ್ತಿ ಕೂಟದ ಆಳುವವರ್ಗಗಳು ಮತ್ತು ಅವರ ರಾಜಕೀಯ ಪ್ರತಿನಿಧಿಗಳು ಅರ್ಥಮಾಡಿಕೊಳ್ಳುತ್ತಿರುವಂತಿದೆ.


ಹಾಗಿದ್ದರೂ ಪ್ಯಾರಿಸ್ ಒಪ್ಪಂದದಲ್ಲಿ ಮಾಡಿಕೊಳ್ಳಲಾದ ಒಪ್ಪಂದಗಳ ಪಾಲನೆಯನ್ನು ಪ್ರಜ್ಞಾಪೂರ್ವಕವಾಗಿಯೇ ಕಡ್ಡಾಯ ಗೊಳಿಸದೆ ಅನಿರ್ಬಂಧಿತವಾಗಿಯೂ, ಸ್ವಪ್ರೇರಿತವಾಗಿಯೂ ಇರುವಂತೆ ನೋಡಿಕೊಳ್ಳಲಾಗಿತ್ತು, ಈ ಶರತ್ತುಗಳ ಪಾಲನೆಯನ್ನು ಖಾತರಿಪಡಿಸುವ ಯಾವುದೇ ಸಾಂಸ್ಥಿಕ ರಚನೆಗಳಾಗಲೀ, ಈ ಶರತ್ತುಗಳನ್ನು ಉಲ್ಲಂಘಿಸಿದಲ್ಲಿ ಯಾವುದೇ ದಂಡದ ಕಲಮುಗಳಾಗಲಿ ಈ ಒಪ್ಪಂದದಲ್ಲಿರಲಿಲ್ಲ, ಒಬಾಮಾ ಆಡಳಿತವು ಈ ಹಿನ್ನೆಲೆಯಲ್ಲಿ ಸಿಪಿಪಿ (ಶುದ್ಧ ಶಕ್ತಿಮೂಲ ಯೋಜನೆ)ಯನ್ನು ಜಾರಿಗೆ ತಂದಿತು. ಅದರಡಿಯಲ್ಲಿ ಪರಿಸರ ರಕ್ಷಣಾ ಏಜೆನ್ಸಿ (ಇಪಿಎ)ಯು ಶುದ್ಧ ಗಾಳಿ ಕಾಯಿದೆಯಡಿ ಎಲ್ಲಾ ವಿದ್ಯುತ್ ಉತ್ಪಾದನಾ ಸ್ಥಾವರಗಳ ಇಂಗಾಲ ತ್ಯಾಜ್ಯದ ಹೊರಸೂಸುವಿಕೆಯನ್ನು ಕಾನೂನಾತ್ಮಕವಾಗಿ ನಿಯಂತ್ರಿಸಬೇಕಿತ್ತು, ಆದರೆ ಅಮೆರಿಕದ ತೈಲ ಇಂಧನ ಉದ್ಯಮಿಗಳು ಈ ಕಾಯಿದೆಯ ವಿರುದ್ಧ ಮೊಕದ್ದಮೆಯನ್ನು ಹೂಡಿ ಅದರ ಅನುಷ್ಠಾನಕ್ಕೆ ತಡೆಯೊಡ್ಡಿದರು. ಇದೀಗ ಟ್ರಂಪ್ ಆಡಳಿತವು ಇಡೀ ಶುದ್ಧ ಶಕ್ತಿ ಮೂಲ ಯೋಜನೆಯನ್ನೇ ರದ್ದು ಮಾಡುತ್ತಿದೆ.

ಪ್ಯಾರಿಸ್ ಒಪ್ಪಂದವು ಅನಿರ್ಬಂಧಿತ ಮತ್ತು ಸ್ವಪ್ರೇರಿತ ಎಂಬ ಕಾರಣದಿಂದಾಗಿಯೇ ಜಗತ್ತಿನ ತ್ರಿವಳಿ ಶಕ್ತಿಕೂಟದ ಆಳುವವರ್ಗಗಳು ಮತ್ತು ಅವರ ರಾಜಕೀಯ ಪ್ರತಿನಿಧಿಗಳು ಅದಕ್ಕೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದ್ದರು. ಇದಕ್ಕೆ ತದ್ವಿರುದ್ಧವಾಗಿ ಕ್ಯೋಟೋ ಒಪ್ಪಂದವು ಅಮೆರಿಕ ಆದಿಯಾಗಿ ಎಲ್ಲಾ ಅಭಿವೃದ್ಧಿ ಹೊಂದಿದ ದೇಶಗಳು ತಮ್ಮ ತಮ್ಮ ದೇಶಗಳ ಹಸಿರು ಅನಿಲ ತ್ಯಾಜ್ಯದ ಪ್ರಮಾಣವನ್ನು ಇಂತಿಷ್ಟು ವರ್ಷಗಳಲ್ಲಿ ಇಂತಿಷ್ಟು ಪ್ರಮಾಣಕ್ಕೆ ಇಳಿಸಲೇಬೇಕೆಂಬ ನಿರ್ಬಂಧವನ್ನು ಹೇರಿತ್ತು, ಆದರೆ ಅಮೆರಿಕವು ಈ ಒಪ್ಪಂದವನ್ನು ಅನುಮೋದಿಸಲೂ ಇಲ್ಲ ಮತ್ತು ಜಾಗತಿಕ ತಾಪಮಾನವನ್ನು ಇಳಿಸಲು ಯಾವುದೇ ಕ್ರಮಗಳನ್ನೂ ತೆಗೆದುಕೊಳ್ಳಲಿಲ್ಲ, ವಾಸ್ತವವೆಂದರೆ ಯಾವುದೇ ನಿರ್ಬಂಧವಿಲ್ಲದ ಮತ್ತು ಅವರವರ ಸ್ವಪ್ರೇರಣೆಗೆ ಬಿಟ್ಟ ಯಾವುದೇ ಒಪ್ಪಂದಗಳು ಪಾಲನೆಯಾಗುವುದಿಲ್ಲ, ಈ ಮಧ್ಯೆ ಹವಾಮಾನ ಬದಲಾವಣೆಯ ಅಧ್ಯಯನದಲ್ಲಿ ತೊಡಗಿಕೊಂಡಿರುವ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ವಿಜ್ಞಾನಿಗಳ ಪ್ರಕಾರ ಹಸಿರುಮನೆ ಅನಿಲ ತ್ಯಾಜ್ಯಗಳ ಹೊರ ಸೂಸುವಿಕೆಯು ಹೀಗೆಯೇ ತಡೆಯಿಲ್ಲದೆ ಮುಂದುವರೆದಲ್ಲಿ ಇನ್ನು ಕೇವಲ ಇಪ್ಪತ್ತು ವರ್ಷಗಳಲ್ಲಿ ಜಗತ್ತಿನ ತಾಪಮಾನವು ಕೈಗಾರಿಕಾಪೂರ್ವ ತಾಪಮಾನಕ್ಕಿಂತ 2 ಡಿಗ್ರಿ ಸೆಂಟಿಗ್ರೇಡಿನಷ್ಟು ಹೆಚ್ಚಾಗಿಬಿಡುತ್ತದೆ. ಹಾಗಾದಲ್ಲಿ ಈ ಭೂಮಂಡಲದಲ್ಲಿ ಯಾರೂ ತಡೆಯಲಾಗದ ಪ್ರಕ್ರಿಯೆಗಳು ಪ್ರಾರಂಭವಾಗಿಬಿಡುತ್ತವೆ. ಆದರೂ ಜಗತ್ತಿನ ತಾಪಮಾನವು ಈ ಪ್ರಮಾಣದಲ್ಲಿ ಏರಿಕೆ ಕಾಣಲು ಪ್ರಮುಖ ಕಾರಣರಾದ ಶ್ರೀಮಂತ ದೇಶಗಳು ತಮ್ಮ ನಡುವೆ ಯಾವುದೇ ನಿರ್ಬಂಧಕ್ಕೆ ಒಳಪಡಿಸದಂಥ ಒಪ್ಪಂದಗಳನ್ನು ಮಾಡಿಕೊಂಡಿವೆ. ಭೂಮಂಡಲವೇ ಹೊತ್ತಿ ಉರಿಯುತ್ತಿರುವಾಗ ಬೆಂಕಿ ಕಾಯಿಸಿಕೊಳ್ಳುವ ಉಮೇದಿನಲ್ಲಿದ್ದಾರೆ.

ಮೂಲಭೂತವಾದ ವಿಷಯವೇನೆಂದರೆ ಶ್ರಮದ ಮತ್ತು ಪ್ರಕೃತಿಯ ಶೋಷಣೆಯಲ್ಲಿ ಬೇರುಬಿಟ್ಟಿರುವ ಈ ಬಂಡವಾಳಶಾಹಿ ವ್ಯವಸ್ಥೆಯು ಮಾಡುತ್ತಿರುವ ದಾಳಿಗಳನ್ನು ಇನ್ನು ಪ್ರಕೃತಿಯು ತಾಳಿಕೊಳ್ಳಲಾಗದ ಪ್ರಮಾಣವನ್ನು ಮುಟ್ಟಿದೆ. ಅದರಲ್ಲೂ ಮುಖ್ಯವಾಗಿ ಭೂಗರ್ಭವನ್ನು ಭೇದಿಸಿ ತೆಗೆಯುವ ತೈಲ ಇಂಧನವನ್ನು ಆಧರಿಸಿದ ಉತ್ಪಾದನೆ ಮತ್ತು ಬಳಕೆಗಳ ಮೇಲಿನ ಅವಲಂಬನೆಯನ್ನು ಧಾರಣೆ ಮಾಡುವ ಶಕ್ತಿ ಪ್ರಕೃತಿಗಿಲ್ಲ, ಹಾಗಿದ್ದರೂ ಈ ಬಂಡವಾಳಶಾಹಿ ವ್ಯವಸ್ಥೆಯ ಪ್ರಧಾನ ಫಲಾನುಭವಿಗಳು ಅತ್ಯಂತ ಪರಿಸರ ವಿರೋಧಿಗಳೇ ಆಗಿದ್ದು ಪುನರ್ನವೀಕರಿಸಬಹುದಾದ ಬದಲೀ ಇಂಧನಮೂಲಗಳ ಬಳಕೆಯನ್ನು ತಡೆಗಟ್ಟುತ್ತಿದ್ದಾರೆ. ಅವರ ಪ್ರಧಾನ ಪ್ರತಿನಿಧಿಯಾದ ಟ್ರಂಪ್ ಅಮೆರಿಕವನ್ನು ಪ್ಯಾರಿಸ್ ಒಪ್ಪಂದದಿಂದ ಹೊರತರುವ ಮೂಲಕ ಭೂಮಿತಾಯಿಗೆ ಮರಣದಂಡನೆಯನ್ನು ಘೋಷಣೆ ಮಾಡಿದ್ದಾರೆ. ಟ್ರಂಪ್ ಅವರ ಬೆಂಬಲಕ್ಕೆ ನಿಂತಿರುವ ಬಂಡವಾಳಶಾಹಿವರ್ಗ ಈ ಶಿಕ್ಷೆಯನ್ನು ಅಮಲಿಗೆ ತರುವುದೇ ಆದಲ್ಲಿ ಈ ಮನುಷ್ಯ ಸಮಾಜ ಮಾತ್ರವಲ್ಲ ಭೂಮಿಯ ಮೇಲಿನ ಸಕಲ ಚರಾಚರ ಜೀವಸಂಕುಲವು ದೀರ್ಘ ಮತ್ತು ಯಾತನಾಮಯ ಅಂತ್ಯವನ್ನು ಕಾಣಲಿದೆ. ■




‘ಇಂಡಿಯಾ ಮುಕ್ತ ಭಾರತ’ವೆಂಬ ವೈದಿಕ ಹುನ್ನಾರದ ಒಂದು ಪೋಸ್ಟ್‌ಮಾರ್ಟಂ



ಸ್ವರ್ಗವೇ ಧರೆಗಿಳಿದಂತೆ ಭಾಸವಾದ, ಸುಖ-ಸಂತೋಷವೇ ಉಕ್ಕುಕ್ಕಿ ಹರಿದ ಭರ್ತಿ ಮೂರುವರ್ಷ ಕಳೆದಂತಹ ಸುಸಂದರ್ಭದಲ್ಲಿ ನಾವೀಗ ಇದ್ದೇವೆ. ಪ್ರಧಾನಿಯವರ ವರ್ಚಸ್ಸು ಇನ್ನೂ ಹಾಗೇ ಇದೆ. ಭಾರತ ವಿಶ್ವಗುರುವಾಗಿದೆ ಎಂಬ ಏನೇನೋ ತರಹೇವಾರಿ ಪ್ರಚಾರ ಇನ್ನೂ ಜೀವಂತವಿದೆ. ಖರೀದಿಗೊಳಗಾದ ಮಾಧ್ಯಮಗಳಂತೂ ಹಾಲಿ ಪ್ರಧಾನಿಯನ್ನು ಇಂದ್ರ ಚಂದ್ರ, ಈತನಂತ ದೇಶಭಕ್ತ ಯಾವ ಪ್ರಧಾನಿಯೂ ಮಾಡದಂತಹ ಸಾಧನೆ ಮಾಡಿದ ಹಾಗು ಮಾಡುತ್ತಿರುವ ಮಹಾನ್ ಸಾಧಕ ಎಂದೇ ಕೊರೆಯತೊಡಗಿವೆ. ಅವುಗಳಲ್ಲೊಂದು 'ಇಂಡಿಯಾ' ಮುಕ್ತ ಭಾರತ. ನಯೀ ಕಹಾನಿ (ಸಂಖ್ಯಾ ಜೋತಿಷಿ ಜಯ ಶ್ರೀನಿವಾಸನ್ ಎಂಬಾತ ಈ ಹಿಂದೆ ಇಂಡಿಯಾ ಮುಕ್ತ ಭಾರತ ಎಂಬ ಪ್ರಚಾರ ಮಾಡಿದ್ದ. ಅದೇ ರೀತಿ ನಮ್ಮ ಪ್ರಧಾನಿಗಳು ಆಶೀರ್ವಾದ ಪಡೆಯಲು ಹೋದ ದಿಗಂಬರ ಸ್ವಾಮಿಯೊಬ್ಬರ ಹಿಂದೆಯೂ 'ಇಂಡಿಯಾ ಮುಕ್ತ ಭಾರತ' ಎಂಬ ಪೋಸ್ಟರ್ ರಾರಾಜಿಸಿತ್ತು, ಅದೇರೀತಿ ಅದ್ಯಾವುದೋ ವರ್ಷದ ಹಿಂದೆ ಇಂಡಿಯಾದಲ್ಲಿ ರೇಪ್‌ಗಳು ನಡೆಯುತ್ತವೆ ಭಾರತದಲ್ಲಲ್ಲ ಎಂದು ಇಂಡಿಯಾ ಹೆಸರನ್ನು ಹೀಯಾಳಿಸಿದ್ದೆ).

ಇದನ್ನೇ ಬೇರೊಂದು ರೀತಿಯಲ್ಲಿ ಚಿಟ್ಟಿಗಳ ಆಂಕೆಯಲ್ಲಿರುವ ಕನ್ನಡದ ಟಿವಿ ನ್ಯೂಸ್ ಚಾನೆಲ್ ಒಂದು 'ಇಂಡಿಯಾ ಬದಲು ಬದಲಾಗುತ್ತಿದೆ ಭಾರತ' ಎಂಬ ಸುದ್ದಿಯನ್ನು ಈ ತಿಂಗಳ ಆರಂಭದಲ್ಲಿ ಮಾಡಿತ್ತು. ಅದರ ಪ್ರಕಾರ ನೆಹರೂರವರಿಂದ ಹಿಡಿದು ಮನಮೋಹನ್ ಸಿಂಗರ ತನಕದ ಯಾವ ಪ್ರಧಾನಿಯೂ ಮಾಡದ 'ಮಹೋನ್ನತ' ಕಾರ್ಯಕ್ಕೆ ಮೋದಿ ಈಗ ಸಜ್ಜಾಗಿದ್ದಾರಂತೆ. ಆ ಮೂಲಕ ಇಂಡಿಯಾದ ಹಣೆಬರಹವನ್ನೇ ತಿದ್ದಿ ಇಡಿ ಜಗತ್ತೇ ತಿರುಗಿ ನೋಡುವಂತೆ ಮಾಡಹೊರಟಿದ್ದಾರಂತೆ. ಮೋದಿಯ ಈ ಮಹೋನ್ನತ ಕಾರ್ಯಕ್ಕೆ ಆತನ ತಮ್ಮನಂತಿರುವ ಯೋಗಿ ಆದಿತ್ಯನಾಥ್ ಸಾಥ್ ಅಂತೆ. ದೇಶಕ್ಕೆ ಚಾಲ್ತಿಯಲ್ಲಿರುವ ಇಂಡಿಯಾ ಎನ್ನುವ ಹೆಸರನ್ನು ಅಳಿಸಿ 'ಹಿಂದುಸ್ತಾನ್' ಎಂದು ಮರುನಾಮಕರಣ ಮಾಡೋ ಇರಾದೆ ಇವರದ್ದಂತೆ. ಇಂಡಿಯಾ ಎನ್ನೋದು ಬ್ರಿಟಿಷರು ಇಟ್ಟಂತಹ ಹೆಸರಂತೆ, ಅದಕ್ಕೂ ಮೊದಲು ಇದು ಹಿಂದೂಸ್ಥಾನವೇ ಆಗಿತ್ತಂತೆ. ಈ ಹೆಸರನ್ನು ಹಾಳು ಮಾಡಿದವರು ದಾಳಿಕೋರ ಮುಸಲ್ಮಾನ ಅರಸರಂತೆ. ಆದರೆ ವಾಸ್ತವ ಸಂಗತಿ ಏನು? ಐತಿಹಾಸಿಕ ದಾಖಲೆಗಳು ಹೇಳುವುದೇನನ್ನು? ಮುಂದೆ ನೋಡೋಣ.

ಹೌದು, ವೈದಿಕ ಸಿದ್ಧಾಂತದ ಮರುಸ್ಥಾಪನೆಗಾಗಿ ಪಣ ತೊಟ್ಟಂತಿರುವ ಆಟ್ಟಾಹಾಸ ಪ್ರಧಾನಿಯ ಮುಂದಾಳತ್ವದಲ್ಲಿ ನಿಗೂಢವಾಗಿ ನಡೆಯುತ್ತಿರುವ ಹಿಂದೂರಾಷ್ಟ್ರ ನಿರ್ಮಾಣದ ಕಾರ್ಯಾಚರಣೆಗಳು ಒಂದೊಂದಾಗಿ ಹೊರಬರುತ್ತಿರುವುದಂತೂ ಹೌದು. ದಿಲ್ಲಿಯಲ್ಲಿ ಕೂತು ಬರೋಬ್ಬರಿ ಅರ್ಧ ಶತಮಾನಗಳಷ್ಟು ಕಾಲ ಆಳ್ವಿಕೆ ನಡೆಸಿದ ಸುಲ್ತಾನ್ ಔರಂಗಜೇಬನ ಹೆಸರಿನಲ್ಲಿದ್ದ ರಸ್ತೆಯಿಂದ ಆತನ ಹೆಸರನ್ನು ಕಿತ್ತು ತೆಗೆಯಲಾಯಿತು. (ಪರಮ ಧಾರ್ಮಿಕನಾಗಿದ್ದ ಆತನಿಗೂ ಇಂತಹ ಸ್ಮಾರಕಗಳಲ್ಲಿ ನಂಬಿಕೆಯಿರಲಿಲ್ಲ, ಬಹುತೇಕ ಮುಸ್ಲಾಂಬಿಗಾಗ ದೇಶವನ್ನೇ ಕೈವಶ ಮಾಡಿಕೊಂಡಿದ್ದ ಆತನಿಗೆ ರಸ್ತೆಗೆ ತನ್ನ ಹೆಸರು ಇಟ್ಟುಕೊಳ್ಳುವ ತವಕ ಹುಟ್ಟಲು ಸಾಧ್ಯವೂ ಇಲ್ಲ. ತಾಜ್‌ಮಹಲ್ ಆದೂ ಇದೂ ಎಂದು ಸಿಕ್ಕಾಪಟ್ಟೆ ಹಣ ಪೋಲುಮಾಡುತ್ತಿದ್ದ ತನ್ನ ತಂದೆಯನ್ನೇ ಜೈಲಿಗಟ್ಟಿದ್ದ ಔರಂಗಜೇಬ್ ಖುರಾನು ಹಸ್ತ ಪ್ರತಿ ಮಾರಿ ಆ ಹಣದಲ್ಲಿ ಬದುಕುತ್ತಿದ್ದ ಸರಳ ವ್ಯಕ್ತಿ) ಗೋಭಕ್ತಿಯನ್ನು ವೈಭವೀಕರಿಸಿ ಕಾನೂನು ಗೊಂದಲಗಳನ್ನು ಸೃಷ್ಟಿಸುವುದರ ಮೂಲಕ ಮುಸಲ್ಮಾನ ಮತ್ತು ದಲಿತರ ವಿರುದ್ಧ ಅಧಿಕೃತ ದ್ವೇಷವನ್ನು ದೇಶದಲ್ಲಿ ಹಬ್ಬಲಾಯಿತು. ಆದರ ಈ ಮುಂದಿನ ಹಂತವೇ ದೇಶಕ್ಕೆ 'ಹಿಂದೂಸ್ತಾನ್' ಎಂಬ ಬೋರ್ಡ್ ತಗಲಾಕಿಸುವ ಹೊಸ ಪ್ರಕ್ರಿಯೆ. ಅರ್ಥಾತ್, ಸಂವಿಧಾನ ಹೇಳಿದಂತೆ ಇದು ಜಾತ್ಯಾತೀತ ರಾಷ್ಟ್ರದ ಬದಲಿಗೆ ಕೇವಲ ಹಿಂದೂಗಳಿಗಷ್ಟೇ ಸೇರಿದಂತಹ ಹಿಂದೂ ರಾಷ್ಟ್ರ ಎಂದು ಬಿಂಬಿಸುವ ಪ್ರಕ್ರಿಯೆ. ಒಟ್ಟಾರೆ, ಮನುಧರ್ಮ ಆಳ್ವಿಕೆಗಿರುವ ಪೂರ್ವ ತಯಾರಿಯಷ್ಟೆ. ಈ ಗೋಳ್ವಾಲ್ಕರ್ ಪ್ರೇರಿತ ಹಿಂದೂರಾಷ್ಟ್ರದಲ್ಲಿ ಹಿಂದೂತ್ವದ ಅಡಿಯಲ್ಲಿ ಹೊರಬರುವ ಕಾನೂನುಗಳಿಗೆ ಆಮೇಲೆ ಯಾರೇ ಇರಲಿ ಎಲ್ಲರೂ ತಲೆಬಾಗಲೇಬೇಕು. ಅದು ದಲಿತ, ಹಿಂದುಳಿದವರಿರಲಿ ಅನ್ಯ ಧರ್ಮೀಯರೇ ಇರಲಿ ಹಿಂದೂ ಮೊದಲು ಉಳಿದವರೆಲ್ಲ ಎರಡನೆಯ ದರ್ಜೆ ಪ್ರಜೆಗಳಷ್ಟೆ.



ಈಗ ಏನೇ ಹೊಸ ಹೊಸ ತಂತ್ರಜ್ಞಾನಗಳು ಬಂದಿದ್ದರೂ ದೇಶ ಎಷ್ಟೇ ಮುಂದುವರೆದಿದ್ದರೂ ನೂರಿನ್ನೂರು ವರ್ಷಗಳ ಹಿಂದೆ ಸರಿಯಾದ ರಸ್ತೆ, ಸರಕು ಸಾಗಣಾ ವ್ಯವಸ್ಥೆ, ವಿದ್ಯುತ್ ಇಲ್ಲದಿದ್ದ ಸಮಯದಲ್ಲಿ ಬ್ರಿಟಿಷರು ಕಟ್ಟಿದಂತಹ ಸೇತುವೆಗಳು, ಆಸ್ಪತ್ರೆಗಳು, ರಸ್ತೆ ಸುರಂಗಗಳು, ಕಟ್ಟಡಗಳು, ನಗರಗಳು, ಇಂದಿಗೂ ಅವರ ಕಾರ್ಯಕ್ಷಮತೆಯ ಬಗ್ಗೆ ಹುಬ್ಬೇರಿಸುವಂತೆ ಮಾಡುತ್ತವೆ. ಈಗಿರುವ ದೇಶದ ಮುಕ್ಕಾಲು ಭಾಗದ ರೈಲ್ವೇ ಹಳಿಗಳು ಬ್ರಿಟಿಷರ ಕೊಡುಗೆಗಳೇ ಆಗಿವೆ. ಅವರು ಕಟ್ಟಿದ ನಗರಗಳು, ಕಟ್ಟಡಗಳ ಹೆಸರನ್ನು ತಿದ್ದಿ (ವಿಕ್ಟೋರಿಯಾ ಟರ್ಮಿನಸ್ ಇದ್ದದ್ದು ಶಿವಾಜಿ ಟರ್ಮಿನಸ್ ಆದಂತೆ) ಹೊಸ ಬೋರ್ಡ್ ಹಾಕುವುದಷ್ಟೆ ನಮ್ಮ ಸಾಧನೆ ಮತ್ತು ಹೆಗ್ಗಳಿಕೆ. ಅದ್ಯಾವನೋ ನಮ್ಮವ ಜಪಾನಿಯೊಬ್ಬ ಮಾಡಿದ ಪೆನ್ನಿನ ಮೇಲೆ ಮೇಕ್ ಇನ್ ಇಂಡಿಯಾ ಕೆತ್ತಿದನಂತೆ. ಹಾಗಿದೆ ಮೊಗಲರು, ಬ್ರಿಟಿಷರು ಕಟ್ಟಿದ ಭಾರತವನ್ನು ತಿದ್ದುವವರ ಕಥೆ.

ಇನ್ನು ಇತಿಹಾಸದ ಸತ್ಯಗಳು ಬಿಚ್ಚಿಡುವ ಸಂಗತಿಯೇ ಬೇರೆ. ಹಿಂದೂರಾಷ್ಟ್ರ ಕಲ್ಪನೆಯ ಹಿಂದೂ ಪದವನ್ನು ಕೂಲಂಕಷವಾಗಿ ನೋಡಿದರೆ ಈ 'ಹಿಂದೂ' ಎಂಬ ಪದವೇ ಒಂದು ಅಸ್ತಿತ್ವವಿಲ್ಲದ ಪರಮ ಡಮ್ಮಿ ಪದವೆಂಬ ಸತ್ಯ ಕೆದಕಿದಷ್ಟೂ ಗೋಚರಿಸುತ್ತಾ ಹೋಗುತ್ತದೆ. ಹಿಂದೂಗಳ ಪರಮ ಪುಣ್ಯಗ್ರಂಥಗಳಾದ ರಾಮಾಯಣ, ಮಹಾಭಾರತ, ಭಗವದ್ಗೀತೆ, ಪುರಾಣಗಳು ವೇದೋಪನಿಷತ್ತುಗಳು ಮತ್ತು ಇನ್ನೇನೆಲ್ಲವನ್ನೂ ಗುಡ್ಡೆಹಾಕಿಕೊಂಡು ಹುಡುಕಿ ತಡಕಾಡಿದರೂ ಈ 'ಹಿಂದೂ' ಎನ್ನುವ ಪದ ಎಲ್ಲೂ ನಿಮಗೆ ಕಾಣಸಿಗದು. ಮೂಲತಃ ಈ ಹಿಂದೂ ಎನ್ನುವ ಪದ ಒಂದು ಪ್ರಾದೇಶಿಕ ಗುರುತಿಗಾಗಿ ಹೊರಗಿನವರು ಜಾತಿ, ಮತ, ಗುಂಪು, ಲಿಂಗ ಇವೆಲ್ಲವನ್ನೂ ಮೀರಿ ನೀಡಿದಂತಹ ಒಂದು ಹೆಸರೇ ವಿನಹ ಈ ಪದಕ್ಕೂ ಯಾವುದೋ ಒಂದು ನಿರ್ದಿಷ್ಟ ಧರ್ಮಕ್ಕೂ ಯಾವ ರೀತಿಯಲ್ಲೂ ಸಂಬಂಧವಿಲ್ಲ. ಮದ್ರಾಸ್ ಎನ್ನುವ ಒಂದು ದಕ್ಷಿಣದ ಮೂಲೆಯಲ್ಲಿದ್ದ ಊರಿನ ಹೆಸರಿನಿಂದ ಹಿಂದೀವಾಲಾಗಳು ಇಡೀ ದಕ್ಷಿಣ ಭಾರತೀಯರನ್ನೇ ಮದ್ರಾಸಿ ಎಂದು ಗುರುತಿಸುವಂತೆ ಇದೊಂದು ಸಾಂದರ್ಭಿಕವಾಗಿ ಹುಟ್ಟಿಕೊಂಡಂತಹ ಒಂದು ಸಾಮಾನ್ಯ ಪದವೇ ಹೊರತು ಬೇರೇನಲ್ಲ. ಇನ್ನೂ ವಿಶೇಷವೆಂದರೆ ಹಿಂದೂ ವಾದಿಗಳು ಹೇಳುವಂತೆ 'ಹಿಂದೂತ್ವ'ದ ಅಳಿಸುವ ಕಾರ್ಯ ಯಾವ ಅನ್ಯಧರ್ಮೀಯರಿಂದಲೂ ಆಗದೇ ಮುಖ್ಯವಾಗಿ ಅವರುಗಳೇ ಈ ಹಿಂದೂ ಧರ್ಮದ ಹುಟ್ಟಿಗೆ ಮೂಲಕಾರಣ ಹಾಗು ಅದರ ಮಹಾ ಪೋಷಕರೆಂಬುವುದು ಐತಿಹಾಸಿಕ ಸತ್ಯ.

ಯಾವ ಪರಧರ್ಮೀಯರೂ ಅಥವ ಪರದೇಶೀಯರೂ ಈ ಹಿಂದೂ ಎಂಬ ಪದದ ಕುರಿತಾಗಿ ಅಸಹನೆಯನ್ನು ಹೊಂದಿಯೇ ಇದ್ದಿರಲಿಲ್ಲ. ಭಾರತದಲ್ಲಿ ಚಾಲ್ತಿಯಲ್ಲಿದ್ದ ಶೂನ್ಯ ಸಂಖ್ಯೆ ಬಳಕೆಯ ದಶಮಾನ ಸಂಖ್ಯಾಪದ್ಧತಿಯನ್ನು ಜಗತ್ತಿನಾದ್ಯಂತ ಹಬ್ಬಿಸಿದವರು ಇಲ್ಲಿಗೆ ಬರುತ್ತಿರುವ ಅರಬ್ಬೀ ವರ್ತಕರು. ಇವರ ಅರಬ್ಬೀ ದೇಶದಲ್ಲಿ ನಮ್ಮೀ ದಶಮಾನ ಸಂಖ್ಯಾ ಪದ್ಧತಿಯು 'ಹಿಂದ್ ಸಾ' (ಹಿಂದೂ ದೇಶದ್ದು) ಎಂದೇ ಗೌರವಿಸಲ್ಪಡುತ್ತದೆ. (ಇಂಗ್ಲಿಷ್‌ನ Tamarind ಪದದ ಮೂಲ ಅರಬ್ಬಿಗಳ 'ತಮರ್ ಎ ಹಿಂದ್'. ಅಂದರೆ ಹಿಂದೂಸ್ಥಾನದ ಖರ್ಜೂರ -ಹುಣಸೆ ಎಂದು.) ಇವರ್‍ಯಾರಿಗೂ ಈ ಹಿಂದೂ ಪದದ ಅಲರ್ಜಿ ಖಂಡಿತಾ ಇದ್ದಿರಲಿಲ್ಲ, ಅದಕ್ಕೂ ಮುಖ್ಯವಾಗಿ ತುಂಡರಸರುಗಳು ತುಂಬಿದ್ದ ಈ ಪ್ರದೇಶವನ್ನು ಹಿಂದೂಸ್ಥಾನವೆಂದು ಕರೆದು ಅದನ್ನು ಇಲ್ಲಿ ಹೆಚ್ಚು ಪ್ರಚಲಿತಗೊಳಿಸಿದವರೇ ಈ ಮುಸಲ್ಮಾನ ಅರಸರು.

ಬದುಕಿನ ಮೂಲ ಅವಶ್ಯಕತೆಗಳಿಗೆ ಅನುಕೂಲವಾಗುವಂತೆ ಅಂದಿನ ಕಾಲದಲ್ಲಿ ವಿಶ್ವದೆಲ್ಲೆಡೆ ನದಿಬಯಲು ಪ್ರದೇಶಗಳಲ್ಲಿಯೇ ನಾಗರಿಕತೆ ರೂಪುಗೊಂಡು ಬೆಳೆದಿತ್ತು. ಅಂತಹ ಒಂದು ಪ್ರದೇಶವಾದ ಸಿಂಧೂಬಯಲು ಹಾಗು ಅಲ್ಲೇ ಕಾಲಾಂತರ ಮುಂದುವರೆದಂತಹ ಜನ ಸಮುದಾಯವನ್ನು ಹೊರಗಿನವರು ಸಿಂಧೂ, ಹಿಂದೂ, ಇಂಡಸ್ ಏನೇ ಇತ್ಯಾದಿಯಾಗಿ ಗುರುತಿಸಿ ಕರೆದಿರಲಿ, ಇದು ಕೇವಲ ಪ್ರಾದೇಶಿಕ ಗುರುತಿಸುವಿಕೆಯ ಸಹಜ ಪ್ರಕ್ರಿಯೆಯಷ್ಟೆ. ಗ್ರೀಕರು, ಪರ್ಶಿಯನ್ನರು, ಮುಸಲ್ಮಾನರು, ಬ್ರಿಟಿಷರು, ಮೊದಲಾದವರಿಂದ ಈ ರೀತಿಯಾಗಿ ಬಳುವಳಿಯಾಗಿ ದೊರೆತಂತಹ ಹಾಗು ಇದೇ ಮುಂದೆ ನಿರ್ದಿಷ್ಟ ಪ್ರಾದೇಶಿಕ ವ್ಯಾಪ್ತಿಯನ್ನೂ ಮೀರಿ ಸಾರ್ವತ್ರಿಕವಾಗಿ ಹಬ್ಬಿ ಬಳಸಲ್ಪಟ್ಟ ಈ ಹಿಂದೂ ಅಥವ ಇಂಡಿಯಾ ಪದಕ್ಕೆ ಅದರದ್ದೇ ಆದಂತಹ ಒಂದು ಐತಿಹಾಸಿಕ ಮಹತ್ವತೆ ಬಿಟ್ಟರೆ ಬೇರೇನೂ ಇಲ್ಲ.

ಸಾವಿರಾರು ಭಾಷೆಗಳು, ಸಾವಿರಾರು ಪಂಗಡಗಳು, ಕಾಲಕ್ಕೆ ತಕ್ಕಂತೆ ಹಿಗ್ಗುವ ಕುಗ್ಗುವ ಲೆಕ್ಕವಿಲ್ಲದಷ್ಟು ತುಂಡರಸರುಗಳ ರಾಜ್ಯಭಾರಗಳೆಲ್ಲದರ ಮಿಶ್ರಣವಾಗಿರುವ ಈಗಿನ ಭಾರತವೆಂಬ ಅಂದಿನ ಈ ಭೂಪ್ರದೇಶದಲ್ಲಿ ವಿಭಿನ್ನ ಸಂಪ್ರದಾಯಗಳನ್ನು ನಂಬಿ ಆಚರಿಸುವ ಅಸಂಖ್ಯ ಪರಂಪರೆಗಳು ತಮ್ಮದೇ ರೀತಿಯಲ್ಲಿ ನೆಲೆಗೊಂಡಿದ್ದವು. ಇವನ್ನೆಲ್ಲ ರಾಜಕೀಯ ಹಿಡಿತವನ್ನು ಸುಲಭವಾಗಿಸುವ ನಿಟ್ಟಿನಲ್ಲಿ ಹಿಂದೂ ಹೆಸರೊಂದಿಗೆ ಅಧಿಕೃತವಾಗಿ ಐಕ್ಯಗೊಳಿಸಿದವರು ಬ್ರಿಟಿಷರು. ಇದಕ್ಕೆ ಸಾಕ್ಷಿಯಾಗಿ ಇಂದಿಗೂ ಹಿಂದೂಗಳೆನಿಸಿಯೂ ತಮ್ಮದೇ ಆದ ಸಂಪ್ರದಾಯಗಳನ್ನು ಪಾಲಿಸುವ ಅನೇಕಾನೇಕ ವಿಭಿನ್ನ ಸಂಪ್ರದಾಯಗಳು ದೇಶಾದ್ಯಂತ ಕಾಣಲು ಸಿಗುತ್ತವೆ.

ಇಲ್ಲಿ ಗಮನಿಸಲೇಬೇಕಾದ ಅಂಶವೆಂದರೆ ಈಗ ಹೇಳಲ್ಪಡುವ ಹಿಂದೂ ಧರ್ಮ ಎನ್ನುವುದು ಮೂಲತಃ ಸಣ್ಣ ಗುಂಪಾಗಿಯೂ ಕೂಡ ಪ್ರಭುತ್ವವನ್ನು ಅನಾದಿಕಾಲದಿಂದಲೂ ಪ್ರಭಾವಿಸುತ್ತಿದ್ದ ವೈದಿಕ ಧರ್ಮದ ತಳಹದಿಯಲ್ಲೇ ಕಟ್ಟಲಾಗಿದೆ ಎನ್ನುವುದು. ಹೌದು, ವೈದಿಕ ಧರ್ಮದಲ್ಲಿ ಮುಖ್ಯವಾಗಿ ಇರುವುದು ಎರಡೇ ವಿಭಾಗ ಅದು ಬ್ರಾಹ್ಮಣ ಮತ್ತು ಅಬ್ರಾಹ್ಮಣ. ಆದರೆ, ಶಾಸ್ತ್ರೀಯವಾಗಿ ಅಸ್ತಿತ್ವದಲ್ಲಿರುವ ಚಾತುರ್ವರ್ಣಗಳು, ಇನ್ನಿತರ ಪದ್ಧತಿಗಳು ಬ್ರಾಹ್ಮಣ್ಯದ ಮೂಗಿನ ನೇರಕ್ಕೇ ನಡೆಯಲ್ಪಡುತ್ತದೆ. ಹೊಸತಾಗಿ ಹಿಂದೂ ಎನಿಸಲ್ಪಟ್ಟ ಆತ ಮೂಲತಃ ಯಾವ ಸಂಪ್ರದಾಯಕ್ಕೇ ಸೇರಿರಲಿ ಆತನ ಕಸುಬಿನ ಆಧಾರದಲ್ಲಿ ಆತನ ವೈಶ್ಯತ್ವ ಯಾ ಶೂದ್ರತ್ವ ಅನಾಮತ್ತಾಗಿ ಹೇರಲ್ಪಡುತ್ತದೆ. ಹಿಂದೂ ಧರ್ಮದಲ್ಲಿ ಯಾವನೊಬ್ಬ ಮನಬಂದಂತೆ ಬ್ರಾಹ್ಮಣನಾಗಿ ಸೇರ್ಪಡೆಗೊಳ್ಳಲು ಸುಲಭ ಸಾಧ್ಯವಿಲ್ಲವೇ ಹೊರತು ಗ್ರೀಕರ ಗುಲಾಮೀ ಪದ್ಧತಿಯಂತೆ ಸೇವೆಗಾಗಿ ಬರುವ ಶೂದ್ರತ್ವಕ್ಕೆ ಇಲ್ಲಿ ಅಂಥಾ ಅಡೆತಡೆಗಳಿಲ್ಲ.

ಇಲ್ಲಿಗೆ ವಲಸಿಗ ಯಾ ಆಕ್ರಮಣಕಾರರಾಗಿ ಬಂದ ಶಕರು, ಹೂಣರು, ಗ್ರೀಕ್, ಸೀಥಿಯನ್ನರೇ ಮೊದಲಾದ ಪರದೇಸಿಗಳು ಕಾಲಕ್ರಮೇಣ ಇಲ್ಲಿನವರೇ ಆಗಿ ಪ್ರತ್ಯೇಕವಾಗಿ ಗುರುತಿಸಲಾಗದಂತೆ ಬೆರೆತುಹೋದರೆ, ಬೆಳ್ಳಗೆ ಆಕರ್ಷಕವಾಗಿರುವ ನೀಲಿಕಣ್ಣಿನ ಇಸ್ರೇಲಿಗರು ಬ್ರಾಹ್ಮಣ (ಚಿತ್ಪಾವನ)ರೆನಿಸಿ ಹಿಂದೂಧರ್ಮದ ರಕ್ಷಕ ಗೋಡ್ಸೆಯಂತಹ 'ಮಹನೀಯ'ರನ್ನು ದೇಶಕ್ಕೆ ಕೊಡುಗೆಯಾಗಿತ್ತಂತಹ ಉದಾಹರಣೆಯೂ ಇದೆ. ಸ್ವಾತಂತ್ರ ಚಳವಳಿ ನಡೆಯದೇ ಬ್ರಿಟಿಷರು ಬಹುಶಃ ಇದೇರೀತಿ ಭಾರತದಲ್ಲೇ ಉಳಿದಿದ್ದಿದ್ದರೆ ಬೆಳ್ಳಗಿರೋ ಅವರೂ ಕೂಡ ಯಾವುದೋ 'ಬ್ರಿಟ್ಪಾವನ ಬ್ರಾಹ್ಮಣ'ರಾಗಿ ಬಿಡುವ ಸಾಧ್ಯತೆಯನ್ನೂ ಅಲ್ಲಗಳೆಯುವಂತಿಲ್ಲ.

ಇನ್ನು ಹಿಂದೂ ಧರ್ಮದ ಹರಳುಗಟ್ಟುವಿಕೆಗೆ ಸಾಮಾಜಿಕವಾಗಿ ವೈದಿಕತೆಯ ಕಬಂಧಬಾಹುವನ್ನು ವಿರೋಧಿಸಿ ಸಿಡಿದೆದ್ದ ಬೌದ್ಧ ಧರ್ಮದ ಕೊಡು... ಮರೆಯುವಂತಿಲ್ಲ, ರಾಜಾಶ್ರಯದಿಂದ ಕೊಬ್ಬುತ್ತಿ... ಧರ್ಮಕ್ಕೆ ಒಂದುಕಾಲದಲ್ಲಿ ವಿಪರೀತ ಪೆಟ್ಟ... ಇತಿಹಾಸವನ್ನೇ ತಿರುವುಗೊಳಿಸಿದ ಬೌದ್ಧ ಧರ್ಮ... ಅದಕ್ಕೂ ಪ್ರಾಚೀನವಿರುವ ಹಾಗು ಭಾರತದಲ್ಲಿ... ಧರ್ಮಕ್ಕೂ ಹೆಚ್ಚು ಅಧಿಕೃತತೆ ಹಾಗು ... ಇತಿಹಾಸವಿರುವ ಜೈನ ಧರ್ಮಗಳು ಅಂದಿನ ವೈ... ಇನ್ನಿಲ್ಲದಂತೆ ಕಾಡಿದ್ದವು. ಜನರನ್ನು ಹಾಗು ಪ್ರ... ಸೆಳೆಯುತ್ತಿದ್ದ ಈ ಧರ್ಮಗಳ ಪ್ರಭಾವಗಳು... ಕಳೆಗುಂದುತ್ತಾ ಪ್ರಾಮುಖ್ಯತೆಯನ್ನು ಕಳೆಕೊಳ್ಳುತ್ತಾ... ವೈದಿಕತೆಯ ಪುನರುತ್ಥಾನಕ್ಕಾಗಿ ಪುಂಡ... ಶಂಕರಾಚಾರ್ಯರಂತವರ ಹುಟ್ಟು ಮುಂದೆ ವೈದಿ... (ಆಗಿನ್ನೂ ಸಂಯುಕ್ತ ಹಿಂದೂ ಧರ್ಮ ಅಸ್ತಿತ್ವಕ್ಕೆ ಬ... ಕ್ಕೊಂದು ವ್ಯವಸ್ಥಿತ ಗಟ್ಟಿ ನೆಲೆಯನ್ನೊ... ಕಾರಣವೆನಿಸಿತು.

ಭಾರತದಲ್ಲಿ ನೆಲೆ ನಿಂತಂತಹ ಸಮುದಾ... ಶೈವ, ವೈಷ್ಣವ, ಗಾಣಪತ್ಯ ಕಾಪಾಲಿಕ, ಶಾಕ್ತೇಯ... ಪಂಥಗಳು ಬೌದ್ಧ ವಿರೋಧಿಗಳಂತೆ ಕಚ... ಸನ್ನಿವೇಶಗಳು ಒಟ್ಟು 'ಹಿಂದೂಧರ್ಮ'ವೆಂಬ ಆಸ... ಶಮನಗೊಂಡು ಒಂದಾಗಿದ್ದು ಬ್ರಿಟಿಷರ ಕಾಲದ... ವೈಷ್ಣವನಾದ ನಿನ್ನನ್ನು ಹುಲಿಯೊಂದು ಅಟ್ಟಿ... ಬಂದರೂ ಎದುರಿದ್ದ ಶಿವಾಲಯದಲ್ಲಿ ಮಾತ್ರ... ಪಡೆಯಬೇಡ ಎಂಬಂತಹ ಕಟು ಸಿದ್ಧಾಂತಗ... ಆಸರೆಯಡಿಯಲ್ಲಿ ತಣ್ಣಗಾದವು. ಬೌದ್ಧ ಜೈನರ ... ತಪ್ಪಿಸಲು ನಿಂತ ನೀರಾಗಿದ್ದ ಚಾತುರ್ವರ್ಣದ ಧರ್ಮ... ಆಹಾರ ಪದ್ಧತಿಯಂತ ಕೆಲ ಸುಧಾರಣೆಗಳು ಹುಟ್ಟಿ... ಒಟ್ಟಾರೆ ಹೆಸರು ಕೊಟ್ಟವರು ಯಾರೋ.. ಸಲ... ಯಾರೋ.. ಸುಧಾರಣೆಗೆ ಪ್ರೇರೇಪಿಸಿದವರು ಮ... ಒಟ್ಟುಗೂಡಿಸಿ ಒಂದು ರೂಪಕೊಟ್ಟವರು ... ಈಗ ಹೇಳಿ ಯಾವ ಪುರುಷಾರ್ಥಕ್ಕಾಗಿ ನಮ್ಮ ... ಹಿಂದೂಸ್ಥಾನವಾಗಬೇಕು?


- ಶಂಕರ್, ಬ್ರ...

ಹಳ್ಳಿಯವರಿಗೆ ಎಮ್ಮೆ ಅಮ್ಮ, ಪ್ರದೇಶದ ಜನರ ಅಮ್ಮ ಜರ್ಸಿ...

ಹಸು ಪೂಜ್ಯ ಎಂದಮೇಲೆ ಎಮ್ಮೆ, ಮೇ... ಜರ್ಸಿ ದನ ಸಹ ಪೂಜ್ಯ, ಹಸು ನಮ್ಮ ತಾಯಿ ... ಎಮ್ಮೆ ಮತ್ತು ಮೇಕೆ ಸಹ ನಮ್ಮ ತಾಯಿ. ... ಭಾರತದ 80% ಜನರು ಎಮ್ಮೆ ಮತ್ತು ಮೇಕೆ... ಹಾಲು ಕುಡಿದೇ ಬೆಳೆದಿರುವುದು. ದೇಶೀ ... ಹಾಲು ಕುಡಿಯುವವರು ಕೇವಲ 20% ಗ... ನಗರ ಪ್ರದೇಶದ ಜನರು ಈಗ ಕುಡಿಯುವುದು... ತಳಿಯ ಜರ್ಸಿ ಹಸುವಿನ ನಂದಿನಿ ಹಾಲು. ... ಹಳ್ಳಿಯವರಿಗೆ ಎಮ್ಮೆ ಅಮ್ಮ ಹಾಗೂ ನಗರ ... ಜನರ ಅಮ್ಮ ವಿದೇಶಿ ಮೂಲದ ಜರ್ಸಿಯ...

ಎಮ್ಮೆ ಕಪ್ಪು ಬಣ್ಣದ್ದಾಗಿದೆ ಎಂದಮಾತ್ರ... ತಾಯಿ ಅಲ್ಲ ಎಂದು ಹೇಳುವುದು 'ರೇಸಿಜಂ'ಗೆ... ತಾರತಮ್ಯಕ್ಕೆ) ಸಮಾನ. ಒಂದು ವೇಳೆ ನಮ್ಮ ... ತಾಯಿ ಕುರೂಪಿಯಾಗಿದ್ದರೆ ಹಾಗೂ ನೆರೆಮನೆಯ... ಸುಂದರವಾಗಿದ್ದರೆ ನಾವು ನಮ್ಮ ನಿಜವಾದ ತಾ... ಮನೆಕೆಲಸದವಳು ಎಂದು ಹೇಳಿ, ನೆರೆಮನೆಯ... ಹೆಂಗಸನ್ನು ನಮ್ಮ ತಾಯಿ ಎನ್ನುತ್ತೇವೆಯೇ?... ಭಾರತೀಯರ ದೃಷ್ಟಿಯಲ್ಲಿ ಎಮ್ಮೆ ಮೊದಲನೇ... ತಾಯಿ, ಮೇಕೆ ಎರಡನೇ ನಂಬರ್ ತಾಯಿ, ... ಮೂರನೇ ನಂಬರ್ ತಾಯಿ, ಹಾಗೂ ಕೊನೆ... ದೇಶೀ ಹಸುವಿನದು. ನಕಲಿ ಗೋಭಕ್ತರಿಗೆ ಇದು... ಎನಿಸಿದರೆ ಹಸುವಿಗೆ ತಾಯಿಯ ಸ್ಥಾನ ಕೊಟ್ಟರು... ಅದಕ್ಕಿಂತ ಹೆಚ್ಚು ಜನರಿಗೆ ಹಾಲು ಕೊಡುವ... ದೊಡ್ಡಮ್ಮನ ಸ್ಥಾನವಾದರೂ ಕೊಡಬೇಕು. ಮೇಕೆ ಮತ್ತು ಹೆಣ್ಣು ಕುರಿಗೆ ಚಿಕ್ಕಮ್ಮ ಎ... ಹೆಣ್ಣು ಒಂಟೆ ಹಾಗೂ ಕತ್ತೆಯ ಹಾಲಲ್ಲಿ ಅಪಾ... ಗುಣ ಇರುವುದರಿಂದ ಅವು ದಿಲ್ಲಿಯಲ್ಲಿ ಒಂದು... ರೂ.250/- ರಂತೆ ಇಂದಿಗೂ ಮಾರಾಟ... ಮಹಾತ್ಮ ಗಾಂಧೀಜಿ ಮೇಕೆಯ ಹಾಲ... ಕುಡಿಯುತ್ತಿದ್ದರು. ಅಂತೆಯೇ ಮೋದಿಯವ... ಆರೋಗ್ಯಕ್ಕಾಗಿ ಒಂಟೆ, ಮೇಕೆಯ ಹಾಲು ... ಕುಡಿಯುತ್ತಾರಂತೆ. ಹಾಗಾಗಿ ಅವುಗಳಿಗೆ ... ಚಿಕ್ಕಮ್ಮ-ಅತ್ತೆ-ಮಾಮಿಯ ಸ್ಥಾನ ಕೊಡಲಾಗದಿ... ಪಕ್ಷ ಫ್ಯಾಮಿಲಿ ಡಾಕ್ಟರ್ ಸ್ಥಾನವನ್ನಾದರೂ ಕಿ... ಕೊಡಲೇ ಬೇಕು.

ವಿ.ಸೂ. : ನಿಮ್ಮ ಅನಿಸಿ...
lankesh70@rediffmail.com
ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹು...
ಪ್ರತಿಕ್ರಿಯೆಗಳನ್ನು 9980331427 ನ...
ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿ...



ಕಲೆ-ವ್ಯವಹಾರಗಳ ನಡುವಣ ಕಲಾಲೋಕ-2


ಬೆಂಗಳೂರು ಅಂತರ ರಾಷ್ಟ್ರೀಯ ಸಿನಿಮೋತ್ಸವ Bengaluru

■ ಕೆ.ಫಣಿರಾಜ್ 16

ಕೊನೆಯ ಎರಡು ಸಿನಿಮಾಗಳನ್ನು ಪರಿಚಯಿಸುವ ಮೂಲಕ, ಪ್ರಕಟಿಸಿದ ಸಂಪಾದಕರಿಗೂ ಹಾಗು ಓದಿದ ಜಾಣೆ-ಜಾಣರಿಗೂ ಋಣಿಯಾಗಿ, ಈ ಅಂಕಣವನ್ನು ಕೊನೆಗೊಳಿಸುತ್ತಿರುವೆ.

ಕಿಲ್ಸ್ ಆನ್ ವೀಲ್ಸ್ (2016)
ದೇಶ: ಹಂಗೆರಿ ನಿರ್ದೇಶನ: ಅಟ್ಟಿಲ ಟಿಲ್ಲ್

ಹಂಗೆರಿಯ ಜನಪ್ರಿಯ ಟಿವಿ ಕಾರ್ಯಕ್ರಮಗಳು ಹಾಗು ರಿಯಾಲಿಟಿ ಶೋಗಳನ್ನು ನಡೆಸುವುದರಲ್ಲಿ ನಿಪುಣನಾದ ಟಿಲ್ಲ್ ಒಂದು ವಿಲಕ್ಷಣವಾದ ರೋಚಕ ಅಪರಾಧದ ಸಿನಿಮಾ (ಕ್ರೈಂಥ್ರಿಲ್ಲರ್) ಮಾಡಿದ್ದಾನೆ.



ಬೆನ್ನುಹುರಿಗಾದ ಪೆಟ್ಟಿನಿಂದ ಸೊಂಟದ ಕೆಳಗಿನ ಸ್ವಾಯು ಕಳೆದುಕೊಂಡು ಗಾಲಿಕುರ್ಚಿಯ ಆಸರೆಯಲ್ಲಿರುವ ಝೊಲಿ ಹಾಗು ಮಿದುಳಿನ ಮೃದು ವೈಕಲ್ಯದ ಕಾರಣ ಅಂಗವೈಕಲ್ಯ ಅನುಭವಿಸುತ್ತಿರುವ ಬರ್ಬ ಒಂದು ಅಂಗಲವಿಕಲ ಶುಶ್ರೂಷಾಲಯದ ಒಂದೇ ಕೊಠಡಿಯಲ್ಲಿ ಸಹವಾಸಿಗಳಾಗಿದ್ದಾರೆ. ಝೊಲನ ತಂದೆ ತಾಯಿಯನ್ನು ತ್ಯಜಿಸಿ ಜರ್ಮನಿಯಲ್ಲಿ ಒಳ್ಳೆ ಸಂಪಾದನೆಯ ಉದ್ಯೋಗ ಹಿಡಿದಿದ್ದಾನೆ; ಅವನ ತಾಯಿಯು ತಂದೆಯನ್ನು ಅಂಗಲಾಚಿ, ಜರ್ಮನಿಯಲ್ಲಿ ಝೊಲನನ್ನು ಗುಣಪಡಿಸುವ ಚಿಕಿತ್ಸೆಗೆ ಪ್ರಯತ್ನದಲ್ಲಿದ್ದಾಳೆ-ಇದು ಝೊಲನಿಗೇ ಏನೂ ಇಷ್ಟವಿಲ್ಲ; ತೊರೆದು ಹೋದವನನ್ನು ಅಂಗಲಾಚುವುದು ಅವನಿಗೆ ಅಪಮಾನಕರವಾಗಿದೆ. ಬರ್ಬನ ಕುಟುಂಬ ಅವನನ್ನು ಶುಶ್ರೂಷಾಲಯಕ್ಕೆ ಹಾಕಿ ಕಡೆಗಾಣಿಸಿಬಿಟ್ಟಿದೆ. ಇದೀಗ ಇಪ್ಪತ್ತು ದಾಟಿರುವ ಕುದಿವ ಬದುಕಿನ ಈ ಇಬ್ಬರೂ ಪರಸ್ಪರ ಮಾನಸಿಕ ಸಹವಾಸಿಗಳೂ ಆಗಿಬಿಟ್ಟಿದ್ದಾರೆ; ಇಬ್ಬರೂ ಸೇರಿ ಒಂದು ಗ್ರಾಫಿಕ್ ಕಾದಂಬರಿ (ಚಿತ್ರಕಲೆ-ಕಥನಾಶೈಲಿಯ ಬರಹಗಳನ್ನು ಮೇಳೈಸಿ ರಚಿಸುವ ಹೊಸ ಸಾಹಿತ್ಯ ಪ್ರಕಾರ) ರಚಿಸುವ ಯೋಜನೆಯಲ್ಲಿದ್ದಾರೆ; ಅದೊಂದು ಅಂಗವಿಕಲರ ಸಾಹಸಗಾಥೆ ಆಗಿರಬೇಕು ಎಂಬುದು ಅವರ ಗುರಿ-ವಸ್ತುವಿಗೆ ತಡಕುತ್ತಿದ್ದಾರೆ.

ರುಪಸ್ ಝೋವ್ ಅಗ್ನಿಶಾಮಕ ದಳದಲ್ಲಿ ಉದ್ಯೋಗಿಯಾಗಿದ್ದವನು, ಅಪಘಾತದ ಕಾರಣವಾಗಿ ನಡುವಿನ ಕೆಳಗಿನ ಸ್ವಾಯು ಕಳೆದುಕೊಂಡು ಗಾಲಿಕುರ್ಚಿಯ ಜೀವಿಯಾಗಿದ್ದಾನೆ; ಅವನ ಪ್ರೇಯಸಿಯು, ಅವನ ಅಂಗವಿಕಲತೆಯ ಕಾರಣ ಬೇರೊಬ್ಬನನ್ನು ಮದುವೆಯಾಗುವುವಳಿದ್ದಾಳೆ. ಖಿನ್ನನಾದ, ನಿರುದ್ಯೋಗಿಯಾದ ರುಪಸ್ ಝೋವ್, ಭೂಗತ ಅಪರಾಧದ ದೊರೆ ರಾಡೋವ್‌ನ ಸುಪಾರಿ ಕಿಲ್ಲರ್ ಆಗಿ ಬದುಕು ಕಟ್ಟಿಕೊಂಡಿದ್ದಾನೆ. ದುರ್ಬಲನಾಗಿರುವವ ಕೊಲೆ ಮಾಡುವನೆಂಬ ಯಾವ ಸುಳಿವು ಇರದ ಕಾರಣ ಅವನು ಜನನಿಭಿಡ ಸಾರ್ವಜನಿಕ ಸ್ಥಳದಲ್ಲೂ ಮಿಕದ ಬೇಟೆಯಾಡಿ ಯಾವ ಸುಳಿವು ಹತ್ತದಂತೆ ಪರಾರಿಯಾಗಬಲ್ಲವನಾಗಿ, ರಾಡಿಕನ ನೆಚ್ಚಿನ ಬಾಡಿಗೆ ಹಂತಕನಾಗಿದ್ದಾನೆ. ಇಂಥ ರುಪಸ್ ರ್ಝೋವ್‌ನನ್ನು ಅಂಗವಿಕಲ ಶುಶ್ರೂಷಾಲಯದಲ್ಲಿ ಝೋಲ, ಬರ್ಬ ಎದುರಾಗುತ್ತಾರೆ - ಅದೂ ಎರಡು ಹುಡುಗರು ಧಿಮಾಕಿನಿಂದ ರುಪಸ್ ಝೋವ್‌ನ ಜೊತೆ ಜಗಳದಲ್ಲಿ. ತಕ್ಷಣ ಮೂವರಿಗೂ ಒಂದು ಬಂಧ ಬೆಳೆದುಹೋಗುತ್ತದೆ. ಮುಂದೆ ಮೂವರೂ, ಅನೇಕ ರೋಚಕ ಸಾಹಸಗಳನ್ನು ನಡೆಸುತ್ತಾ ಹೋಗುತ್ತಾರೆ. ರುಪಸ್ ಝೋವ್‌ನ ಬದುಕೇ ಈ ಹುಡುಗರ ಗ್ರಾಫಿಕ್ ಕಾದಂಬರಿಯ ವಸ್ತುವಾಗಿ, ಕಾದಂಬರಿ ಬೆಳೆಯತೊಡಗುತ್ತದೆ!

ಒಂದುವರೆ ಗಂಟೆಯ ಈ ಸಿನಿಮಾದಲ್ಲಿ, ಮೊದಲ ಹದಿನೈದು ನಿಮಿಷಗಳಲ್ಲಿ ಟಿಲ್ಲ್ ಕಥನದ ಮೂಲ ಹಂದರವನ್ನು ಪ್ರೇಕ್ಷಕರಿಗೆ ಅರಿಯಿಸಿಬಿಡುತ್ತಾನೆ. ನಂತರ ಪಾತ್ರಗಳೇ ಚಿತ್ರಕಥೆಯನ್ನು ತಮ್ಮ ಕೃತ್ಯಗಳ ಮೂಲಕ ಬೆಳೆಸುತ್ತವೋ ಎನ್ನಿಸುವಂತೆ ಮಾಡುವಲ್ಲಿ, ಟಿಲ್ಲ್ ಗ್ರಾಫಿಕ್ ಕಾದಂಬರಿಯ ಕುಸುರಿಯನ್ನು ಸಿನಿಮಾರಚನೆಯ ದೃಶ್ಯ ಕುಸುರಿಯ ಜೊತೆ ಹೆಣೆಯುವುದರಿಂದಲೇ, ಮುಂದೇನು? ಮುಂದೇನು? ಎಂದು ಪ್ರೇಕ್ಷಕರು ಉಗುರುಗಚ್ಚಿ ನೋಡುವಂಥ ರೋಚಕತೆ ಹುಟ್ಟುಹಾಕುತ್ತಾನೆ. ಗ್ರಾಫಿಕ್ ಕಾದಂಬರಿಯ ಮೂಲಕ ಸಿನಿಮಾ ವೇಗದಲ್ಲಿ ಮುಗಿಸುವಲ್ಲಿ, ಟಿಲ್ಲ್ ಕಾರ್ಟೂನ್ ಸಿನಿಮಾ ಕ್ಯಾಮೆರ ತಂತ್ರಜ್ಞಾನ ಬಳಸದೇ, ಅತ್ಯಂತ ಹರಿತವಾದ ದೃಶ್ಯ ಸಂಕಲನ ಬಳಸಿ, ಕಲಾಪ್ರೇಮಿಗಳನ್ನು ಬೆರಗುಗೊಳಿಸುತ್ತಾನೆ. ಇಬ್ಬರು ಹುಡುಗರ ಪಾತ್ರ ಮಾಡಿದ ಹುಡುಗರು, ಸ್ವತಃ ಆ ಸ್ಥಿತಿಯಲ್ಲಿರುವವರು ಎಂಬುದು ಮುಖ್ಯವಲ್ಲ; ಅವರ ಕ್ಯಾಮೆರಾ ಎದುರಿನ ಅಭಿನಯವು, ಅವರ ಅಂಗವೈಕಲ್ಯವನ್ನು ಮರೆಸದೇ, ಅವರ ಪಾತ್ರ ಬೇಡುವ ಜಾಣ್ಮೆ, ನಿರ್ಭಾವುಕ-ವ್ಯಂಗ್ಯಯುಕ್ತ ಮುಖಭಾವವನ್ನು ಬೇಡುತ್ತದೆ ಮತ್ತೂ ಆ ಇಬ್ಬರ ನಟರೂ ಅದನ್ನು ನೂರಕ್ಕೆ ನೂರು ಪೂರೈಸಿದ್ದಾರೆ. ಹಿಚ್‌ಕಾಕ್ ವ್ಹಾ! ಎನ್ನುವಂಥ ಸಿನಿಮಾವಿದು.

ಕಾಡು ಪೋಗುನ್ನ ನೇರಂ (2017) ದೇಶ: ಭಾರತ (ಮಲಯಾಳಂ)
ನಿರ್ದೇಶಕ: ಬಿಜುಕುಮಾರ್ ದಾಮೋದರನ್ (ಡಾ.ಬಿಜು)

ಬಿಜು 2005-2017ರವರೆಗೆ 7 ಸಿನಿಮಾಗಳನ್ನು ಮಾಡಿದ್ದಾರೆ. ಒಂದು ಸಮಾಜದಲ್ಲಿನ ಆಗುಹೋಗುಗಳನ್ನು ಕುರಿತು ಸ್ಪಷ್ಟವಾದ ನಿಲುವು ಇಟ್ಟುಕೊಂಡು ಸಿನಿಮಾ ಮಾಡುವುದಕ್ಕೆ ಅವರು ಖ್ಯಾತರು; 2010ರಿಂದ ಈ ಸಿನಿಮಾದವರೆಗೆ ಅವರು ಮಾಡಿರುವ ಐದು ಸಿನಿಮಾಗಳಲ್ಲಿ ಒಂದೇಒಂದು ಪಾತ್ರಕ್ಕೂ ಹೆಸರಿಲ್ಲ, ಪಾತ್ರಗಳಿಗೆ ಹೆಸರು ಕೊಟ್ಟಾಕ್ಷಣ, ಅವುಗಳಿಗೆ ಜಾತಿ-ಮತ-ಭಾಷೆ-ಪ್ರದೇಶಗಳ ಗುರುತು ಹತ್ತಿಕೊಂಡು ಬಿಡುವ ಸಾಧ್ಯತೆ ಇರುತ್ತದೆ; ತನಗೆ ಪಾತ್ರಗಳ ಸಾಮಾಜಿಕ ಅಸ್ತಿತ್ವದ ಸ್ವರೂಪವನ್ನು ನಿಚ್ಚಳವಾಗಿ ತೋರುವುದು ಅಗತ್ಯವಾಗಿರುವುದರಿಂದ, ತನ್ನ ಈ ಸಿನಿಮಾಗಳ ಪಾತ್ರಗಳಿಗೆ ಹೆಸರಿನ ಹಂಗಿಲ್ಲ ಎನ್ನುವುದು ಬಿಜು ಅವರ ಕಲಾ ನಿಲುವು.

ಪ್ರಸ್ತುತ ಸಿನಿಮಾದ ಕಥಾಹಂದರ ಹೀಗಿದೆ: ಕೇರಳದ ದಟ್ಟವಾದ ಕಾಡಿನ ಭಾಗದಲ್ಲಿ, ಹಲವು ಆದಿವಾಸಿ ಹಾಡಿಗಳಿವೆ. ಕಾಡಿನ ಅಂಚಿನಲ್ಲಿ, ಆದಿವಾಸಿ ಮಕ್ಕಳ ಶಿಕ್ಷಣಕ್ಕಾಗಿ ಸರಕಾರವು ಮಣ್ಣಿನಗೋಡೆ, ಮರದ ಎಲೆಗಳ ಛಾವಣಿಯ ಎರಡು ಹಟ್ಟಿಗಳಲ್ಲಿ, ಇಬ್ಬರು ಉಪಾಧ್ಯಾಯರನ್ನು ನೇಮಿಸಿ, ಒಂದು ಪ್ರಾಥಮಿಕ ಶಾಲೆ ತೆರೆದಿದೆ. ಈ ಪ್ರದೇಶಕ್ಕೆ ಬಂದಿರುವ ಮೇಷ್ಟ್ರುಗಳಿಗೂ ಶಿಕ್ಷಣದ ಕುರಿತ ಒಂದು ಸ್ಪಷ್ಟ ನಿಲುವಿದೆ: ಆದಿವಾಸಿ ಮಕ್ಕಳು ಅಕ್ಷರಾಭ್ಯಾಸದ ಜೊತೆ, ಹೊರಜಗತ್ತಿನ ಸಮ್ಮುಖ ತಮ್ಮ ಸಮುದಾಯದ ಬದುಕಿನ ಪಾಡು ಹೇಗಿದೆ ಮತ್ತು ಅದನ್ನು ಎದುರಿಸಲಿಕ್ಕೆ ಬೇಕಾದ ಅರಿವು ಏನು ಎಂಬುದನ್ನು ಆ ಇಬ್ಬರೂ ಬಲ್ಲರು. ಅಕ್ಷರಾಭ್ಯಾಸ, ಭಾಷಾ ಕಲಿಕೆ, ಪದ್ಯ-ಪಠ್ಯಪ್ರವಚನಗಳನ್ನು ಮಕ್ಕಳಿಗೆ ಮುದ ನೀಡುವ ಹಾಗೆ ಬೋಧಿಸುತ್ತಲೆ, ಅರಿವನ್ನು ಬೆಳೆಸುವುದು ಹೇಗೆ ಎಂಬ ಕಲೆಯಲ್ಲಿ ಅವರಿಬ್ಬರೂ ನುರಿತರು. ಆ ಶಾಲೆ ಸರಕಾರಿ ಶಾಲೆಯಾದರೂ, ಸಂಪೂರ್ಣ ಸ್ವಾವಲಂಬಿ ಶಾಲೆ. ಹಾಡಿಗಳ ಜನರ ನೆರವಿಂದ ಎರಡು ಹಟ್ಟಿ ಕಟ್ಟಿಸಿ, ತಾವು-ಮಕ್ಕಳೂ ಸೇರಿ ಸ್ವಚ್ಛತೆ, ಮಧ್ಯಾಹ್ನದ ಊಟಗಳನ್ನು ಮಾಡುವಂಥ ವ್ಯವಸ್ಥೆ ಮಾಡಿಕೊಂಡು ಆ ಇಬ್ಬರು ಮೇಷ್ಟ್ರುಗಳು ಶಾಲೆ ನಡೆಸುತ್ತಿದ್ದಾರೆ. ಇಂತಿಪ್ಪ ಈ ಶಾಲೆಯಲ್ಲಿ ಠಿಕಾಣಿ ಹೂಡಿ, ಕಾಡಲ್ಲಿ ಅಡಗಿರುವ ನಕ್ಸಲರನ್ನು ಬಂಧಿಸುವ ಸಲುವಾಗಿ ರಾಜ್ಯ ಸರಕಾರದ ವಿಶೇಷ ಪೊಲೀಸು ಪಡೆ ಆಗಮಿಸುತ್ತದೆ; ಮಕ್ಕಳನ್ನು ಶಾಲೆಯಿಂದ ಹೊರಗಟ್ಟಿ ತಮ್ಮ ಕ್ಯಾಂಪ್ ಮಾಡಿಕೊಳ್ಳುತ್ತದೆ; ಮೇಷ್ಟ್ರುಗಳು ಪೊಲೀಸರಿಗೆ ದಿಟ್ಟವಾಗಿ ಶಾಪ ಹಾಕಿ, ಬಯಲಲ್ಲಿ ಪಾಠಪ್ರವಚನ ಮುಂದುವರೆಸುವ ಛಲ ತೋರುತ್ತಾರೆ. ಪೊಲೀಸರು ಬೇಕಾಬಿಟ್ಟಿ ಹಾಡಿಗಳ ಮೇಲೆ ದಾಳಿ ಮಾಡಿ, 'ಶಂಕಿತ ನಕ್ಸಲರು' ಎಂದು ಆರೇಳು ಜನರನ್ನು ಬಂಧಿಸಿ ಕೊಂಡೊಯ್ದ ರಾತ್ರಿ ಹಾಡಿಯಂಚಿನ ಮನೆ, ಶಾಲೆಗಳ ಮೇಲೆ "ಶಾಲೆಯನ್ನು ಕ್ಯಾಂಪ್ ಮಾಡಿದ ಪ್ರಭುತ್ವಕ್ಕೆ ಧಿಕ್ಕಾರ"ವೆಂಬ ಕೈಬರಹದ ಪೋಸ್ಟರುಗಳು ಪೊಲೀಸರ ಕಣ್ಣಿಗೆ ಬೀಳುತ್ತವೆ. ಪೋಸ್ಟರುಗಳು ಹಸಿಯಾಗಿರುವುದರಿಂದ ಹಚ್ಚುತ್ತಿರುವ ಆಸಾಮಿ ಆಸುಪಾಸಿನಲ್ಲಿಯೇ ಇರಬೇಕೆಂದು ಪೊಲೀಸುಪಡೆ ಜಾಡು ಹಿಡಿದು ಹೊರಟಾಗ, ಯುವತಿಯೊಬ್ಬಳು ಪೋಸ್ಟರ್ ಸಹಿತ ಇರುವುದು ಕಂಡು ಬಂಧಿಸಲು ಬೆನ್ನು ಹತ್ತುತ್ತಾರೆ. ರಾತ್ರಿ ಕತ್ತಲಲ್ಲಿ ಕಾಣಬಲ್ಲವಳಂತೆ ಕಾಣುವ ಹುಡುಗಿ ಯಾಮಾರಿಸುತ್ತಾ ಓಡಿ ಒಬ್ಬ ಎಸ್.ಐ.ಯ ಹೊರತಾಗಿ ಎಲ್ಲರನ್ನು ದಾರಿ ತಪ್ಪಿಸುತ್ತಾಳೆ. ಬಹಳ ಪ್ರಾಮಾಣಿಕನೂ, ಕಾನೂನು ನಿಷ್ಠನೂ ಆದ ಈ ಎಸ್.ಐ. ಅವಳ ಬೆನ್ನು ಹತ್ತಿ ಅವಳನ್ನು ಹಿಡಿಯುವಲ್ಲಿ ಸಫಲನಾಗುತ್ತಾನೆ. ಬಂಧಿಸಿ ಕ್ಯಾಂಪಿಗೆ ಕರೆದೊಯ್ಯ ಬೇಕೆನ್ನುವಾಗ ಒಂದು ಸಮಸ್ಯೆ ಅವನಿಗೆ ಎದುರಾಗುತ್ತದೆ: ಅವರಾಗಲೇ ಕಾಡಿನೊಳಗೆ ಬಹು ದೂರ ಬಂದು ಬಿಟ್ಟಿದ್ದಾರೆ; ಕಾಡುದಾರಿ ಬಲ್ಲ ಯುವತಿ, ಪೊಲೀಸರಿಗೆ ಹೆದರಿದಾರಿ ತೋರುವವಳಲ್ಲ; ಈ ಎಸ್.ಐ.ಗೆ ಕಾಡಿನ ದಾರಿ ಅಯೋಮಯ! ಇದೀಗ ಬಂದೂಕಿನ, ಅತ್ಯಾಚಾರ ಬೆದರಿಕೆ ಅಧಿಕಾರದಾಟ ಶುರುಹಚ್ಚಿಕೊಳ್ಳುತ್ತಾನೆ. ಏನು ಮಾಡಿದರೂ, ಕೊನೆಗೆ ಕಾಡಿನಲ್ಲಿ ಕೊಳೆಯುವವನು ನೀನೇ ಎಂದು ಆ ಎದೆಗಾತಿ ತಿರುಗಿ ಹೊಡೆಯುತ್ತಾಳೆ. ಬೇಟೆಗಾರನೀಗ ಬೇಟೆಯಾಗಿದ್ದಾನೆ! ದರ್ಪ ಬಿಡದೆ ಕಾಡಲ್ಲಿ ದಾರಿಗಾಣದೆ ತಾನು ಅವಳ ಜೊತೆ ಬಂದೂಕು ಹಿಡಿದು ಅಲೆದಾಡುವಾಗ ಶುರುವಿಟ್ಟುಕೊಳ್ಳುವ, ಪ್ರಭುತ್ವದ ದರ್ಪ ಹಾಗು ಆದಿವಾಸಿಗಳ ಮೇಲೆ ನಡೆಯುವ ಹಿಂಸೆಯ ವಾಗ್ವಾದದಲ್ಲಿ, ಎಸ್.ಐ.ಗೆ ನಕ್ಸಲರ ಬಗ್ಗೆಯಾಗಲೀ, ತನ್ನ ಮೇಲಿರುವ ಬೃಹತ್ ಪಡೆ ನಡೆಸುವ ಹಿಂಸೆಯ ಬಗೆಗಾಗಲೀ, ಕನಿಷ್ಠ ಜ್ಞಾನವೂ ಇಲ್ಲವೆಂಬುದು ಅರಿವಾಗುತ್ತಾ ಹೋಗಿ ಅವನೊಬ್ಬ ನಿಸ್ಸಹಾಯಕ ಮನುಷ್ಯನಾಗತೊಡಗುತ್ತಾನೆ. ಒಂದು ಮಾತುಕತೆಯಂತೂ ಅವನನ್ನು ಮೂರ್ಖನನ್ನಾಗಿಸಿಬಿಡುತ್ತದೆ. ಎಸ್.ಐ. ಯುವತಿಗೆ 'ನಿನ್ನ ಹೆಸರೇನು?' ಎಂದು ಕೇಳಿದ್ದಕ್ಕೆ ಯುವತಿ 'ಅದನ್ನು ಕಟ್ಟಿಕೊಂಡು ಏನಾಗುವುದಿದೆ ನಿನಗೆ! ನಿನ್ನ ತಲೆಯಲ್ಲಿ ನಾನೊಬ್ಬಳು ಕ್ರೂರಿ ನಕ್ಸಲೈಟ್ ಅಂತ ಇರುವಾಗ, ಹೆಸರಿಂದ ಆ ಧೋರಣೆ ಬದಲಾಗುತ್ತದಾ?' ಎನ್ನುತ್ತಾಳೆ; ಅವನು ಸಾವರಿಸಿಕೊಂಡು 'ನನ್ನ ಹೆಸರೇನು ಎಂದು ಕೇಳುವುದಿಲ್ಲವೇ?' ಎಂದರೆ ಆಕೆ 'ಅಯ್ಯೋ! ನಿನ್ನ ಹೆಸರಿಂದ ನೀನು ಪ್ರಭುತ್ವದವತಿಯಿಂದ ಆದಿವಾಸಿಗಳ ಮೇಲೆ ನಡೆಸುತ್ತಿರುವ ದೌರ್ಜನ್ಯವೇನಾದರೂ ಕಡಿಮೆಯಾಗುತ್ತದಾ? ವ್ಯವಸ್ಥೆ ಕೊಟ್ಟ ಹೆಸರಿಂದ ಪರಸ್ಪರ ಗುರುತಿಸಿಕೊಳ್ಳದೆ, ವ್ಯಕ್ತಿ ವಿಶಿಷ್ಟ ಅನ್ನೋದು ಏನಿದ!' ಎಂದು ಉತ್ತರಿಸಿದಾಗ ಅವನ ಬಾಯಿಕಟ್ಟಿ ಹೋಗುತ್ತದೆ. ಕೊನೆಗೆ ಆದಿವಾಸಿಗಳ ಸಹಾಯದಿಂದ ಅವನನ್ನು ಯುವತಿ ಕ್ಯಾಂಪಿಗೆ ಕಳಿಸುತ್ತಾಳೆ.



ಈ ಸಿನಿಮಾ ನಮ್ಮನ್ನು ಸೆಳೆಯುವುದು ಅದರ ನಿರೂಪಣೆಯ ಬಗೆಯನ್ನು ಹಿಡಿದಿಡುವ, ಅಡ್ಡಾಡಿಕೊಂಡು ಬೆಳೆಯುವ ಚಿತ್ರಕತೆಯ ಭಿನ್ನತೆಯಲ್ಲಿ, ಆ ಇಬ್ಬರು ಮೇಷ್ಟ್ರುಗಳು ಲಗಾಯ್ತಿನ ಶಿಶುಪ್ರಾಸಗಳ ವಸ್ತು ಲಯವನ್ನು ಮುರಿಯದೆ, ಸಾಮಾಜಿಕ ಅರಿವಿನ ಸಂದೇಶವನ್ನು ವಾಚ್ಯವಾಗಿಸದೇ, ಮಕ್ಕಳನ್ನು ಕಲಿಕೆಗೆ ಒಲಿಸುವ ಬಗೆಯಲ್ಲಿ ಪಾಠ ಹೆಣೆಯುವ ಬಗೆಯು, ಈ ಸಿನಿಮಾದ ಚಿತ್ರಕಥಾರಚನೆಗೆ ರೂಪಕಗಳಾಗಿವೆ. ಇಂಥ ಸಿನಿಮಾ ಮಾಡುವಾಗ, ಇಳಿದನಿ (ಅಂಡರ್ ಸ್ಟೇಟ್ಮೆಂಟ್) ಯು ಪ್ರೇಕ್ಷಕರಿಗೆ ನಿರ್ದೇಶಕನ ನಿಲುವನ್ನು ತಲುಪಿಸದೇ ಹೋಗಬಹುದು; ಏರುದನಿ (ಓವರ್ ಸ್ಟೇಟ್ಮೆಂಟ್) ಆ ನಿಲುವಿಗೆ ಪಕ್ಷಪಾತಿಯಾದವರನ್ನು ಮಾತ್ರವೇ ತಲುಪಬಹುದು; ಬಿಜು ಅವರ ಚಿತ್ರಕತೆಯ, ಈ ಎರಡು ಅತಿ ದನಿಗಳ ನಡುವಿನ ನಡುದನಿ ದಪ್ಪ ಪಟ್ಟಿಯಲ್ಲಿ ಕ್ರಿಯಾಶೀಲವಾಗಿ ಆಟವಾಡುತ್ತದೆ; ಬೇಕಾದ ಕಡೆ ಬೇಕಾದಷ್ಟೇ ಇಳಿದನಿಯ ಅಂಚಿನ ದೃಶ್ಯಾವಳಿ, ಬೇಕೆನಿಸಿದಾಗ ಏರುದನಿಯ ಗಡಿ ಸಮೀಪ ಹೋಗಿ ಹಿಂತಿರುಗುವ ದೃಶ್ಯಾವಳಿಗಳ ಮೂಲಕ ಬಿಜು, ಅವರು ನಿಲುವನ್ನು ಒಪ್ಪದವರನ್ನೂ, ಸಿನಿಮಾ ನೋಡಿ, ಅದರ ಅರಿವಿನಲ್ಲಿ-ಅಂದರೆ ಅದು ಸಿನಿಮಾಕಲೆಯ ಸೃಜನಶೀಲ ಅಭಿವ್ಯಕ್ತಿಯಾಗಿ ಪ್ರಸ್ತುತಗೊಂಡ ಬಗೆಯಲ್ಲಿ- ಸಂವಾದಿಸುವಂತೆ ಆಹ್ವಾನಿಸುತ್ತದೆ. ಬಿಜು ಅವರದ್ದು ಪ್ರಭುತ್ವ ಪ್ರತಿರೋಧಿ ನಿಲುವು-ಅದನ್ನು ಪ್ರಕಟಿಸಲು ಒಂದು ಕರಪತ್ರ, ಕಿರುಹೊತ್ತಿಗೆ, ಭಾಷಣದ ವಿಡಿಯೋ-ಮುಂತಾಗಿ ಹಲವು ಮಾಧ್ಯಮಗಳಿವೆ; ಅವುಗಳಿಗೆ ಅವುಗಳದ್ದೇ ಆದ ಶಕ್ತಿಮಿತಿಗಳಿವೆ-ಸರಿ. ತಮ್ಮ ನಿಲುವನ್ನು ಸಿನಿಮಾದ ಮೂಲಕ ಪ್ರಕಟಿಸುವಾಗ ಈ ದೃಶ್ಯ-ಶಬ್ದ ಕಲೆಯ ಸಾಮರ್ಥ್ಯವನ್ನು ಹೇಗೆ ಮುಕ್ಕಾಗದ ಹಾಗೆ ಒಗ್ಗಿಸಿಕೊಳ್ಳುವುದು ಒಂದು ಸವಾಲು ಎನ್ನುವುದು ಅವರಿಗೆ ಗೊತ್ತಿದೆ. ಈ ಸಿನಿಮಾದ ಮೂಲಕ, ನಮಗೆ ಈಗಾಗಲೇ ಪರಿಚಿತವಾಗಿರುವ ವಾಗ್ವಾದವೊಂದನ್ನು ಸಿನಿಮಾದ ಕಲೆಯ ಮೂಲಕ ಪ್ರಕಟಿಸಿದರೆ, ವಾಗ್ವಾದ ಹರವು ವಿಸ್ತಾರವಾಗುತ್ತದೋ? ಎನ್ನುವ ಕುತೂಹಲವನ್ನು ಹುಟ್ಟಿಸುವುದು, ನನ್ನ ಮಟ್ಟಿಗೆ ಈ ಸಿನಿಮಾದ ಮೇಲ್ಮೆ. ಬಿಜು ಅವರ ಮತ್ತಷ್ಟು ಸಿನಿಮಾಗಳನ್ನು ನೋಡಬೇಕು ಎಂಬ ಹಂಬಲವನ್ನು ಪ್ರೇಕ್ಷಕರಲ್ಲಿ ಹುಟ್ಟಿಸುವುದೂ ಮೆಚ್ಚುಗೆಯ ಅಂಶ. ■

14 ⏮

ಮೇಲಾಗಿ ದೇಶೀ ಹಸು ಕೇವಲ ವೈಷ್ಣವರಿಗೆ ಮಾತ್ರ ಪೂಜ್ಯ, ಶೈವರಿಗೆ ನಂದಿ ಅರ್ಥಾತ್ ಎತ್ತು-ಹೋರಿ ಮಾತ್ರ ಪೂಜ್ಯ. ವೈಷ್ಣವರು ಯಾವಾಗಲೂ ಶೈವರನ್ನು ತಮಗಿಂತ ಕೀಳು ಎಂದು ಅವಮಾನಿಸುತ್ತಾ ಇರುತ್ತಾರೆ. ಹಾಗಿರುವಾಗ ಶೈವರ ಹೋರಿಯಿಂದ ವೈಷ್ಣವರ ಹಸು ಗರ್ಭ ಧರಿಸುವುದು ... ಯುವತಿ ಗರ್ಭ ಧರಿಸಿದಷ್ಟೇ ಅವಮಾನಕಾರಕ ಅಲ್ಲವೇ? ಇದನ್ನು ಹೇಗೆ ವೈಷ್ಣವರು ಸಹಿಸುತ್ತಿರುವರು? ದೇವಲೋಕದ ಹಸು ಕಾಮಧೇನುವಿಗೆ ನಂದಿನಿ ಎಂಬ ಮಗಳಿದ್ದಾಳಂತೆ. ಮಗಳು ಹುಟ್ಟಬೇಕಾದರೆ ಕಾಮಧೇನುವಿಗೆ ಕಾಮುಕಿರಬೇಕು ಹಾಗೂ ... ಗಂಡಿನ ಸಂಪರ್ಕ ಬೇಕೇ ಬೇಕು ತಾನೇ. ರಾಜಸ್ತಾನದ ನ್ಯಾಯಾಧೀಶನ ನವಿಲಿನಂತೆ ದೇವಲೋಕದವರು ಕಣ್ಣೀರು ಹಾಕುವುದೇ ಇಲ್ಲ, ಕಾರಣ ಮಾನವರಂತೆ ದೇವಲೋಕದವರು ದುಃಖದಿಂದ ಕಣ್ಣೀರು ಹಾಕುವ



ಪ್ರಮೇಯವೇ ಬರುವುದಿಲ್ಲ, ಹಾಗಾಗಿ ದೇವಲೋಕದಲ್ಲಿ ಯಾರೂ ಕಣ್ಣೀರು ಹಾಕಿ ಮಕ್ಕಳನ್ನು ಹುಟ್ಟಿಸುವುದಿಲ್ಲ! ಹಾಗಾದರೆ ಕಾಮಧೇನು ದೇವಲೋಕದ ಯಾವ ಹೋರಿಯಿಂದ ಗರ್ಭ ಧರಿಸಿದ್ದು ಎಂದು ಸಂಶೋಧನೆ ಮಾಡಿ ಒಂದು ಹೊಸ ಪುರಾಣ ಹೊಸೆದು, ಕರ್ನಾಟಕ ಹಿಂದೂಗಳನ್ನು ಇನ್ನೊಂದು ಧಾರ್ಮಿಕ ಖೆಡ್ಡಾಕ್ಕೆ ಬೀಳಿಸಿ, ಅದನ್ನು ರಾಜಕೀಯ ಬಂಡವಾಳ ಮಾಡಿಕೊಂಡು ಗೋರಕ್ಷಕರ ಮೂರ್ಖತನವನ್ನೂ ದುಪ್ಪಟ್ಟು ಮಾಡಿ ಎರಡು ಪಟ್ಟು ರಾಜಕೀಯ ಲಾಭ ಪಡೆಯಬಹುದು ಅಲ್ಲವೇ?

- ಉದಯರಾಜ್ ಬಿ ಅಳ್ವ, ಕಾಟಕುಲ್ಲ (ದ.ಕ)

ಹಸುವನ್ನು ರಾಜಕೀಯಕ್ಕೆ ಬಳಸಿಕೊಳ್ಳುತ್ತಿರುವವರು, ಹಸುವನ್ನು ಗೋಮಾತೆ ಎನ್ನುವವರು, ಗೋವಧೆ (ಮಾತ) ಪಾಪ ಎನ್ನುವವರು, ಮುಂತಾದವರಿಗೆ ಒಂದು ವಿಷಯ ಹೊಳೆಯುತ್ತಿಲ್ಲ... ಏಕೋ ಗೊತ್ತಾಗುತ್ತಿಲ್ಲ!

ಅದೇನೆಂದರೆ, ಈ ಮಹನೀಯರೆಲ್ಲ ಒಬ್ಬೊಬ್ಬರೂ ಒಂದೊಂದು ಹಸುವನ್ನು ಸ್ವತಃ ಸಾಕುವುದು! ತಮಗೆ ಬೇಕಾದ ಹಾಲನ್ನು ತಾವೇ ಉತ್ಪಾದಿಸಿಕೊಂಡು ಸ್ವಾವಲಂಬಿಗಳಾಗುವುದು!! ಎಲ್ಲಕ್ಕಿಂತ ಮಿಗಿಲಾಗಿ ಗೋಮಾತೆಯನ್ನು ಸಾಕಿ ಸಲಹುವ ಮೂಲಕ ಪುಣ್ಯ ಸಂಪಾದಿಸುವುದು!! ಈ ನನ್ನ ಸಲಹೆಯನ್ನು ತುಂಬು ಹೃದಯದಿಂದ ಸ್ವಾಗತಿಸುವುದಲ್ಲದೆ, ಅದನ್ನು ಸದವಕಾಶವೆಂದು ಭಾವಿಸಿ, ಈ ಸಜ್ಜನರೆಲ್ಲಾ ಚಾಚೂತಪ್ಪದೆ ಪಾಲಿಸುವರೆಂದು ಭಾವಿಸುತ್ತೇನೆ....

- ವೀರಬ್ಯಾಡ್ರಪ್ಪ, ಬೆಂಗಳೂರು

Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/-



ಸಿಂಧೂ ಹುಡುಗ ಅನೀಶ್ ಅಲ್ಲ!

ಅನೀಶ್ ತೇಜಸ್ವರ್ ಮತ್ತು ಸಿಂಧೂ ಲೋಕನಾಥ್ ಮಧ್ಯೆ ಏನೋ ಇದೆ ಎಂಬ ಸುದ್ದಿ ಗಾಂಧಿನಗರದಲ್ಲಿ ದಟ್ಟವಾಗಿತ್ತು. ಅನೀಶ್ ಅವರನ್ನು ಸಿಂಧೂ ಡೇಟ್ ಮಾಡುತ್ತಿದ್ದಾರೆಂಬ ಮಾತೂ ಕೇಳಿ ಬಂದಿತ್ತು. ಅಂತಹ ಮಾತಿಗೆ ಪುಷ್ಠಿ ಅನ್ನುವಂತೆ ಒಂದರ ಮೇಲೊಂದು ಮೂರು ಸಿನಿಮಾಗಳಲ್ಲಿ ಈ ಜೋಡಿ ಕಾಣಿಸಿಕೊಂಡಿತ್ತು. ಅನೀಶ್ ನಟನೆಯ ಇನ್ನೂ ಎರಡು ಸಿನಿಮಾಗಳಲ್ಲಿ ಸಿಂಧೂ ಅತಿಥಿ ಪಾತ್ರ ಕೂಡ ನಿರ್ವಹಿಸಿದ್ದರು.

ಆದರೆ ಈಗ ಈ ಕುರಿತು ಸಿಂಧೂ ಸ್ಪಷ್ಟನೆ ನೀಡಿದ್ದಾರೆ. "ನಾನು ಡೇಟ್ ಮಾಡುತ್ತಿರುವುದು ನಿಜ. ಆದರೆ, ಅನೀಶ್ ಜತೆ ಇಲ್ಲ. ನನ್ನ ಹುಡುಗ ಬೇರೆ ಇದ್ದಾನೆ. ಅವನಿಗೂ ಸಿನಿಮಾ ಇಂಡಸ್ಟ್ರಿಗೂ ಯಾವುದೇ ಸಂಬಂಧವಿಲ್ಲ" ಎಂದು ಹೇಳಿಕೊಂಡಿದ್ದಾರೆ.

ಸಿಂಧೂ ಹೆಸರು ಈ ಹಿಂದೆ ಮತ್ತೊಬ್ಬ ನಟನ ಜತೆಯೂ ತಳುಕು ಹಾಕಿಕೊಂಡಿತ್ತು. ಆ ಕಲಾವಿದನ ಜತೆಯೂ ಇವರು ಮೂರ್ನಾಲ್ಕು ಸಿನಿಮಾಗಳನ್ನೂ ಮಾಡಿದ್ದರು. ಆದರೆ, ವರ್ಷದ ಹಿಂದೆಯಷ್ಟೇ ಅವರ ಮದುವೆ ಆಗಿರುವ ವಿಚಾರ ಗೊತ್ತಾಯಿತು. ಈಗ ಸಿಂಧೂ ಮತ್ತು ಅನೀಶ್ ಮಧ್ಯೆ ಏನೂ ಇಲ್ಲ ಎಂಬುದು ಸ್ಪಷ್ಟವಾಗಿದೆ. ಆದರೆ, ಸಿಂಧೂ ಕನಸಿನ ಹುಡುಗ ಯಾರು ಎಂಬ ಹುಡುಕಾಟ ನಡೆದಿದೆ.



ಲೇಡಿಸ್ ಟೈಲರ್‌ಗೆ ಸತೀಶ್



ಎಲ್ಲವೂ ಅಂದುಕೊಂಡಂತೆ ಆಗಿದ್ದರೆ 'ಲೇಡಿಸ್ ಟೈಲರ್' ಸಿನಿಮಾದಲ್ಲಿ ನಾಯಕನಾಗಿ ರವಿಶಂಕರ್ ನಟಿಸಬೇಕಿತ್ತು. ಈ ಕುರಿತು ನಿರ್ದೇಶಕ ವಿಜಯ್ ಪ್ರಸಾದ್ ಕೂಡ ಹೆಮ್ಮೆಯಿಂದ ಹೇಳಿಕೊಂಡಿದ್ದರು.

ಆನಂತರವೇ ನಾಯಕಿಯ ಹುಡುಕಾಟ ಕೂಡ ನಡೆಯಿತು. ಮಮತಾ ರಾಹುತ್, ಶರ್ಮಿಳಾ ಮಾಂಡ್ರೆ ಸೇರಿದಂತೆ ಒಟ್ಟು ಐವರು ಹುಡುಗಿಯರನ್ನೂ ನಾಯಕಿಯಾಗಿ ನಟಿಸಲು ಕೇಳಿದ್ದರು ನಿರ್ದೇಶಕರು. ಈ ಪಾತ್ರಕ್ಕಾಗಿ ನಾಯಕಿ 120 ಕೆಜಿ ತೂಗಬೇಕಿತ್ತು, ಹಾಗಾಗಿ ಬಹುತೇಕರು ಈ ಸಿನಿಮಾದಲ್ಲಿ ನಟಿಸಲು ನಿರಾಕರಿಸಿದರು. ಈ ನಿರಾಕರಣೆಗೆ ರವಿಶಂಕರ್ ನಾಯಕ ಎಂಬ ಕಾರಣವೂ ಸೇರಿಕೊಂಡಿತ್ತು. ಹಾಗಾಗಿ ನಾಯಕನನ್ನೇ ಬದಲಾಯಿಸಿದ್ದಾರೆ ನಿರ್ದೇಶಕ ವಿಜಯ ಪ್ರಸಾದ್.




ನಾಯಕನ ಸ್ಥಾನಕ್ಕೆ ಈಗ ಸತೀಶ್ ನೀನಾಸಂ ಬಂದಿದ್ದಾರೆ. ಈ ಹಿಂದೆ ಇದೇ ನಿರ್ದೇಶಕರ ಚಿತ್ರದಲ್ಲಿ ಸತೀಶ್ ನಟಿಸಬೇಕಿತ್ತು. ಆ ಚಿತ್ರದ ಮುಹೂರ್ತ ಕೂಡ ನಡೆದಿತ್ತು. ಆದರೆ, ಶೂಟಿಂಗ್ ಶುರುವಾಗಲಿಲ್ಲ. ಈಗ ಅದೇ ಕಾಲ್‌ಶೀಟ್ ಅನ್ನು ಈ ಚಿತ್ರಕ್ಕೆ ಬಳಸಿಕೊಳ್ಳುತ್ತಿದ್ದಾರಂತೆ ನಿರ್ದೇಶಕರು.

ಐಟಂ ಸಾಂಗ್‌ನಲ್ಲಿ ರಾಗಿಣಿ

ರಾಗಿಣಿ ಐಟಂ ಸಾಂಗ್‌ನಲ್ಲಿ ಕಾಣಿಸಿಕೊಂಡಿದ್ದಾರೆ ಅಂತ ಯಾರಾದರೂ ಬರೆದರೆ, ಉರಿದು ಬೀಳುತ್ತಿದ್ದರು ರಾಗಿಣಿ. ಅಂಥವರ ಬಗ್ಗೆ ರಾಗಿಣಿ 'ಇವರು ಜರ್ನಲಿಸ್ಟೇ ಅಲ್ಲ' ಅಂತೂ ಟ್ವೀಟ್ ಮಾಡಿದ್ದಿದೆ. ಆದರೆ, ರಾಗಿಣಿ ಈಗ ಬದಲಾಗಿದ್ದಾರೆ. ಹೌದು, ನಾನು ಐಟಂ ಡಾನ್ಸ್‌ಗೆ ಹೆಜ್ಜೆ ಹಾಕಿದ್ದೇನೆ ಎಂದು ಧೈರ್ಯದಿಂದ ಹೇಳಿಕೊಳ್ಳುತ್ತಿದ್ದಾರೆ. ಈ ಬದಲಾವಣೆಗೆ ಕಾರಣ, ಶೂಟಿಂಗ್‌ಗೂ ಮುನ್ನ ಮಾಡಿಕೊಳ್ಳುವ ಒಪ್ಪಂದ. ಮಾದಕ ಗೀತೆಗೆ ಕುಣಿಯಲು ಹೆಚ್ಚು ಸಂಭಾವನೆ ಪಡೆವ ರಾಗಿಣಿ, ಆನಂತರ ಅದು ಐಟಂ ಡಾನ್ಸ್ ಅಲ್ಲವೆಂದು ಹೇಳುತ್ತಿದ್ದರು. ಹಾಗಾಗಿ ಅದು ನ್ಯೂಸ್ ಆಗುತ್ತಿರಲಿಲ್ಲವಂತೆ. ಈಗ ನಿರ್ಮಾಪಕರೇ ಐಟಂ ಡಾನ್ಸ್ ಅಂತ ಹೇಳಿ ಎಂದು ಕರಾರು ಮಾಡುತ್ತಿದ್ದಾರೆ. ಅನಿವಾರ್ಯವಾಗಿ ರಾಗಿಣಿ ಒಪ್ಪಿಕೊಳ್ಳುತ್ತಿದ್ದಾರೆ.

ಗಾಂಧಿನಗರದಲ್ಲಿ ದುಡ್ಡು ಕೊಟ್ಟರೆ ಏನೆಲ್ಲ ಮಾಡುತ್ತಾರೆ ಅನ್ನುವುದಕ್ಕೆ ಇದೊಂದು ಉದಾಹರಣೆ. ಅಂದಹಾಗೆ ರಾಗಿಣಿ ಈಗ 'ಟೈಗರ್' ಸಿನಿಮಾದಲ್ಲಿ ಐಟಂ ಡಾನ್ಸ್‌ಗೆ ಹೆಜ್ಜೆ ಹಾಕಿದ್ದಾರೆ. ಹುಚ್ಚ ವೆಂಕಟ್‌ಗೆ ಟಾಂಗ್ ಕೊಡುವಂಥ ಹಾಡು ಅದಾಗಿದ್ದು "ಐಟಂ ಸಾಂಗ್ ಆಗ್ಬೇಕು ಬ್ಯಾನು... ಯಾಕೆಂದರೆ ನಾನು ವೆಂಕಣ್ಣನ ಫ್ಯಾನು" ಎಂಬ ಸಾಲಿನೊಂದಿಗೆ ಈ ಹಾಡು ಮೂಡಿಬಂದಿದೆ.





ದರ್ಶನ್ ಡಬ್ಬಲ್ ರೋಲ್

'ಕುರುಕ್ಷೇತ್ರ' ಸಿನಿಮಾ ಯಾವಾಗ ಸೆಟ್ಟೇರುತ್ತದೆಯೋ ಗೊತ್ತಿಲ್ಲ. ಈ ಸಿನಿಮಾ ಕುರಿತು ವಾರಕ್ಕೊಂದು ಸುದ್ದಿ ಆಗುವದಂತೂ ತಪ್ಪ... ಬಾರಿ ಸಿನಿಮಾ ಟೀಮ್‌ನಿಂದ ಬಂದಿರುವ ಹೊಸ ವಿಷಯವೆಂದರೆ ... 'ಕುರುಕ್ಷೇತ್ರ' ಸಿನಿಮಾದಲ್ಲಿ ದ್ವಿಪಾತ್ರ ಮಾಡುತ್ತಿದ್ದಾರಂತೆ. ಈ... ದುರ್ಯೋಧನನ ಪಾತ್ರ ಫಿಕ್ಸ್ ಆಗಿತ್ತು. ಅದರ ಜತೆ ಕರ್ಣನ ಪಾ... ಇವರೇ ನಿಭಾಯಿಸಲಿದ್ದಾರೆಂಬ ಮಾತು ಕೇಳಿಬರುತ್ತಿದೆ. ಈ ಕುರಿತು ನಿರ... ಯಾವುದೇ ಪ್ರತಿಕ್ರಿಯೆ ನೀಡುತ್ತಿಲ್ಲ. ನಿರ್ಮಾಪಕರು ಕೂಡ ಸುಮ... ದರ್ಶನ್ ಅಂತೂ ಮೊದಲೇ ಮಾತಾಡುವುದಿಲ್ಲ. ಆದರೂ, ಈ... ಹರಡಿದ್ದು ಹೇಗೆ ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿದೆ. ದರ್ಶನ್ ಜತೆ ಒಡಾಡ... ರುವವರು "ಅಣ್ಣಾ ಕರ್ಣನ ಪಾತ್ರವನ್ನು ನೀವೇ ಮಾಡಿದರೆ ಚೆನ್ನಾ... ಅಂತಹ ತಾಕತ್ತು ಇರುವುದು ನಿಮಗೊಬ್ಬರಿಗೆ. ನೀವೇ ಮಾಡ... ಎಂದು ಒತ್ತಾಯಿಸುತ್ತಿದ್ದಾರಂತೆ. ಈ ಒತ್ತಾಯವೇ ದೊಡ್ಡ ಸುದ್ದಿಯ...

ಇದರ ಜತೆ ಮತ್ತೊಂದು ಸುದ್ದಿ ಹರಿದಾಡುತ್ತಿದೆ. ಇದು ... ಸಿನಿಮಾವೊಂದರ ರೀಮೇಕ್ ಚಿತ್ರ ಎನ್ನಲಾಗುತ್ತಿದೆ. ಆದರೆ, ಅಧಿಕೃತ ... ಇನ್ನೂ ಹೊರಬಿದ್ದಿಲ್ಲ.

ವಿವಾದಗಳ ಹಬ್ಬಕ್ಕೆ ಚಾಲನೆ ಸಿ...



ಜುಲೈನಲ್ಲಿ 'ದಂಡುಪಾಳ್ಯ 2' ಸಿನಿಮಾ ರಿಲೀಸ್. ಮೂರು ದಿನಗಳ ಹಿಂದೆಯಷ್ಟೇ ಸೆನ್ಸಾರ್ ಕೂಡ ಆಗಿದೆ. ಬರೋಬ್ಬರಿ ಹತ್ತಕ್ಕೂ ಹೆಚ್ಚು ಭಾಗಕ್ಕೆ ಕತ್ತರಿ ಹಾಕಲು ಹೇಳಲಾಗಿದೆಯಂತೆ. ಹಲವು ಕಡೆ ಮ್ಯೂಟ್‌ಗೂ ಸೂಚಿಸಿದ್ದಾರೆ. ಇಂತಹ ಚಿತ್ರ ಸಮಾಜಕ್ಕೆ ಬೇಕಾ ಎಂಬ ಪ್ರಶ್ನೆಯನ್ನೂ ಸೆನ್ಸಾರ್ ಮಂಡಳಿಯ ಕೆಲ ಸದಸ್ಯರು ನಿರ್ದೇಶಕರ ಮುಂದಿಟ್ಟಿದ್ದಾರೆಂಬ ಸುದ್ದಿ ಹರಿದಾಡುತ್ತಿದೆ. ಆದರೂ, ನಿರ್ದೇಶಕ ಶ್ರೀನಿವಾಸ್‌ರಾಜು ಮಾತ್ರ ಇನ್ನೂ ಬದಲಾಗಿಲ್ಲ, ತಮಗೆ ಬೇಕಾಗಿದ್ದೇ ಎ ಪ್ರಮಾಣ ಪತ್ರ. ಆದರ... ಕಡಿಮೆ ಪ್ರಮಾಣಪತ್ರ ಇದ್ದರೂ ಕೇಳುತ್ತಿದ್ದೆ; ಮಹಿಳೆಯರು ನೋಡಲೇ... ಸಿನಿಮಾವಿದು ಎಂದು ಹೇಳಿಕೆ ನೀಡಿದ್ದಾರೆ. ಅದು ಈಗ ವಿ... ಕಾರಣವಾಗಿದೆ.

ಶ್ರೀನಿವಾಸ್‌ರಾಜು ಸಿನಿಮಾಗಳು ರಿಲೀಸ್ ... ಅಂದಾಗ ವಿವಾದಗಳ ಹಬ್ಬವೇ ಶುರುವಾಗುತ್ತದೆ. ಈ... ಅವರು ವಿವಾದವಿಲ್ಲದ ಸಿನಿಮಾಗಳನ್ನೇ ಮಾಡಿ... ಮುಗಿದ ಮೇಲೆ ಕೊನೆಗೆ ಕ್ಷಮೆ ಕೇಳುವುದೂ ... ಅಭ್ಯಾಸವಾಗಿದೆ. 'ದಂಡುಪಾಳ್ಯ 2' ರಿಲೀಸ್‌ಗೂ... ಈಗಷ್ಟೇ ಎರಡು ಕಾಂಟ್ರವರ್ಸಿ ಮಾಡಿಕೊಂಡಿದ್ದಾರೆ... ವಾರದಿಂದ ಈ ಸಿನಿಮಾದಲ್ಲಿ ನಟಿಸಿರುವ ಪೂಜಾ... ಮತ್ತು ಸಂಜನಾ ಪ್ರಚಾರದ ವಿಚಾರಕ್ಕಾಗಿ... ಎಬ್ಬಿಸಿಕೊಂಡಿದ್ದಾರೆ. ಇನ್ನೂ ಇವರ ಜಗಳ ನಿಂತಿ... ಮಧ್ಯೆ ಶ್ರೀನಿವಾಸ್‌ರಾಜು ಸೆನ್ಸಾರ್ ಮಂಡಳಿಗೆ ... ನೀಡಿದ್ದೂ ವಿವಾದಕ್ಕೆ ಕಾರಣವಾಗಿದೆ. 'ದಂಡುಪಾಳ್ಯ 2'... ಆಗುವವರೆಗೂ ಒಂದಿಲ್ಲೊಂದು ವಿವಾದ ಇದ್ದದ್ದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com